ಸಂಪುಟ: 04 ಸಂಚಿಕೆ: 359 ಪುಟಗಳು: 08 ಬುಧವಾರ 12 ಮಾರ್ಚ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
9448225696 +91 8035841833 ₹5

**ಮುಂಜಾನೆ ಮಾತು**

ಬುದ್ಧಿಯಲ್ಲಿ ಸ್ಥಿರತೆ ಇದ್ದರೆ ಸುಖ ಬಂದಾಗ ಹಿಗ್ಗಲ್ಲ, ದುಃಖಕ್ಕೆ ಕುಗ್ಗೋದಿಲ್ಲ, ಏಕೆಂದರೆ ಇವೆರಡೂ ಕ್ಷಣಿಕವೆಂದು ಅವರಿಗೆ ತಿಳಿದಿದೆ.




# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ



## ವಿನ್ಯಾಸಗಾರರು ಬೇಕಾಗಿದ್ದಾರೆ



ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ.
ವಯೋಮಿತಿ ಗರಿಷ್ಠ 25 ವರ್ಷ.
ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
**9448225696**

ಉದಯ ವಾಹಿನಿ
#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com


# ಗ್ಯಾರಂಟಿ ಸದನದಲ್ಲಿ ಜಟಾಪಟಿ

**ಸದನದಲ್ಲಿ ಗ್ಯಾರಂಟಿ ಗದ್ದಲ, ಆಡಳಿತ-ಪ್ರತಿಪಕ್ಷಗಳ ನಡುವೆ ವಾಕ್ಸಮರ**

**ಗ್ಯಾರಂಟಿ ಅನುಷ್ಠಾನದ ಕಾಂಗ್ರೆಸ್ ಕಾರ್ಯಕರ್ತರಿಗೆ ಸರ್ಕಾರದಿಂದ ಸಂಬಳ; ಕಲಾಪದಲ್ಲಿ ಭುಗಿಲೆದ್ದ ಆಕ್ರೋಶ**

**ಸಮಿತಿಗಳನ್ನು ರದ್ದುಪಡಿಸಿ ಎಂದು ಆಗ್ರಹ**

**ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಸದನದ ಭಾವಿಗಿಳಿದು ಧರಣಿ**





## ಶಾಸಕರ ಅಧಿಕಾರ ಮೊಟಕಿಗೆ ಭಾರೀ ವಿರೋಧ




• ಉದಯವಾಹಿನಿ, ಬೆಂಗಳೂರು

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳಿಗೆ ಕಾಂಗ್ರೆಸ್ ಕಾರ್ಯಕರ್ತರ ನೇಮಕ ಕುರಿತು ವಿಧಾನಸಭೆಯಲ್ಲಿ ಗದ್ದಲ, ಮಾತಿನ ವಾಗ್ವಾದಕ್ಕೆ ಕಾರಣವಾಗಿ ಪ್ರತಿಪಕ್ಷಗಳ ಸದಸ್ಯರು ಧರಣಿ ನಡೆಸಿದರು. ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳಿಗೆ ಕಾಂಗ್ರೆಸ್ ಕಾರ್ಯಕರ್ತರನ್ನು ನೇಮಕ ಮಾಡಿ ಅವರಿಗೆ ಸರ್ಕಾರದಿಂದ ಗೌರವಧನ, ಭತ್ಯೆ ನೀಡುತ್ತಿರುವ ವಿಚಾರ ಪ್ರತಿಪಕ್ಷಗಳ ಆಕ್ರೋಶಕ್ಕೆ ಕಾರಣವಾಗಿತ್ತು. ಈ ಸಮಿತಿಗಳನ್ನು ರದ್ದುಪಡಿಸಿ ಎಂದು ಆಗ್ರಹಿಸಿ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಸದನದ ಭಾವಿಗಿಳಿದು ಧರಣಿ ನಡೆಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಮಾತಿನ ಚಕಮಕಿ ನಡೆದು ಗದ್ದಲದ ವಾತಾವರಣ ನಿರ್ಮಾಣವಾಗಿ ಸದನವನ್ನು ಸ್ಪೀಕರ್ ಯು.ಟಿ.ಖಾದರ್ ಅವರು ಹತ್ತು ನಿಮಿಷಗಳ ಕಾಲ ಮುಂದೂಡಿದರು. ನಂತರ ಸಭಾಧ್ಯಕ್ಷರ ಕೊಠಡಿಯಲ್ಲಿ ಸಂಧಾನ ಸಭೆ ನಡೆದು ಅರ್ಧ ಗಂಟೆ ಬಳಿಕ ಸದನ ಮತ್ತೆ ಸಮಾವೇಶಗೊಂಡಿತು.

**ಸಮರ್ಥಿಸಿಕೊಂಡ ಡಿಸಿಎಂ**

**ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಈ ಸರ್ಕಾರವನ್ನು ಕಾಂಗ್ರೆಸ್ ಕಾರ್ಯಕರ್ತರು ಅಧಿಕಾರಕ್ಕೆ ತಂದಿದ್ದಾರೆ. ಅವರಿಗೆ ಸರ್ಕಾರದಲ್ಲಿ ಭಾಗಿಯಾಗುವ ಹಕ್ಕಿದೆ. ಅವರ ಹಕ್ಕನ್ನು ನಾವು ನೀಡಿದ್ದೇವೆ ಅಷ್ಟೇ ಎಂದು ಹೇಳಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಿಗೆ, ಸದಸ್ಯರಿಗೆ ನೀಡುತ್ತಿರುವ ಗೌರವ ಧನ, ಭತ್ಯೆಯನ್ನು ಸಮರ್ಥಿಸಿಕೊಂಡರು.**

**ಉಪಮುಖ್ಯಮಂತ್ರಿಗಳ ಈ ಉತ್ತರದಿಂದ ಮತ್ತಷ್ಟು ಸಿಟ್ಟಾದ ಪ್ರತಿಪಕ್ಷ ಸದಸ್ಯರು ಧರಣಿ ನಡೆಸಲು ಮುಂದಾಗುತ್ತಿದ್ದಂತೆಯೇ ಸ್ಪೀಕರ್ ಅವರು ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಿದರು.**

ಸರ್ಕಾರದ ತೀರ್ಮಾನವನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಮರ್ಥಿಸಿಕೊಂಡು ಪ್ರತಿಪಕ್ಷ ಸದಸ್ಯರು ಶಾಸಕರ ನೇತೃತ್ವದಲ್ಲೇ ಸಮಿತಿ ಮಾಡಿ ಎಂಬ ಬೇಡಿಕೆ ಇಟ್ಟಿದ್ದಾರೆ. ಈ ಬಗ್ಗೆ ಈಗಲೇ ತೀರ್ಮಾನ ಮಾಡಲು ಸಾಧ್ಯವಿಲ್ಲ. ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡುತ್ತೇವೆ ಎಂದು ಹೇಳಿ, ಸದ್ಯಕ್ಕೆ ಗ್ಯಾರಂಟಿ ಅನುಷ್ಠಾನ ಸಮಿತಿಗಳು ಮುಂದುವರೆಯುತ್ತವೆ ಎಂದು ಹೇಳುವ ಮೂಲಕ ಸರ್ಕಾರದ ನಡೆಯನ್ನು ಸಮರ್ಥಿಸಿಕೊಂಡರು.

**ಗ್ಯಾರಂಟಿ ಸಮಿತಿ ಸದಸ್ಯರಿಗೆ ಹಣ ನೀಡಬೇಡಿ ಎಂದು ಪಟ್ಟು ಹಿಡಿದು ಧರಣಿ:** ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉತ್ತರದಿಂದ ಅಸಮಾಧಾನಗೊಂಡ ಪ್ರತಿಪಕ್ಷಗಳ ಸದಸ್ಯರು ಪ್ರತಿ ತಾಲ್ಲೂಕಿನಲ್ಲೂ ಶಾಸಕರೇ ಸುಪ್ರೀಂ. ಶಾಸಕರನ್ನು ಬಿಟ್ಟು ಬೇರೊಬ್ಬರು ಅಧಿಕಾರಿಗಳ ಸಭೆ ನಡೆಸುವುದು ಸರಿಯಲ್ಲ. ಈ ಸಮಿತಿಯನ್ನು ರದ್ದು ಮಾಡಿ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚನೆ ಮಾಡಿ ಸರ್ಕಾರದಿಂದ ಗ್ಯಾರಂಟಿ ಸಮಿತಿ ಸದಸ್ಯರಿಗೆ ಹಣ ನೀಡುವುದು ಬೇಡ ಎಂದು ಪಟ್ಟು ಹಿಡಿದು ಧರಣಿ ಆರಂಭಿಸಿದರು.

ಪ್ರತಿಪಕ್ಷ ಸದಸ್ಯರ ಧರಣಿಯಿಂದ ಸದನದಲ್ಲಿ ಗದ್ದಲದ ವಾತಾವರಣ ನಿರ್ಮಾಣಗೊಂಡಿತು. ಈ ನಡುವೆಯೇ ಸ್ಪೀಕರ್ ಯು.ಟಿ. ಖಾದರ್ ಪ್ರಶ್ನೋತ್ತರ ಕಲಾಪ, ವಿಧೇಯಕ ಮಂಡನೆ ಕಲಾಪವನ್ನು ನಡೆಸಿ, ನಂತರ ಸದನವನ್ನು ಭೋಜನ ವಿರಾಮಕ್ಕೆ ಮುಂದೂಡಿದರು. ಇದಕ್ಕೂ ಮುನ್ನ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್ ಶಾಸಕ ಎಂ.ಟಿ. ಕೃಷ್ಣಪ್ಪ ಅವರು ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳಿಗೆ ನೇಮಕಗೊಂಡಿರುವ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಅಧ್ಯಕ್ಷರು, ಸದಸ್ಯರುಗಳಿಗೆ ಸರ್ಕಾರ ನೀಡುತ್ತಿರುವ ಸಂಭಾವನೆ ಎಷ್ಟು ಎಂದು ಪ್ರಶ್ನೆ ಕೇಳಿದರು.

ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಿಗೆ ಮಾಸಿಕ ಗೌರವ ಧನ 40 ಸಾವಿರ, ಉಪಾಧ್ಯಕ್ಷರಿಗೆ ಮಾಸಿಕ ಗೌರವಧನ 10 ಸಾವಿರ ಹಾಗೂ ಸದಸ್ಯರಿಗೆ ಸಭಾಭತ್ಯೆ ತಿಂಗಳಿಗೆ ಗರಿಷ್ಠ 2 ಸಭೆಗಳಂತೆ ಪ್ರತಿ ಸಭೆಗೆ 1100 ರೂ., ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಿಗೆ ಮಾಸಿಕ ಗೌರವಧನ 25 ಸಾವಿರ, ಪ್ರತಿ ಸದಸ್ಯರಿಗೆ ಸಭಾಭತ್ಯೆ ತಿಂಗಳಿಗೆ 2 ಸಭೆಗಳಂತೆ ಸಾವಿರ ರೂ.ಗಳನ್ನು ನಿಗದಿಪಡಿಸಲಾಗಿದೆ ಎಂದು ತಿಳಿಸಿದರು. ಸಚಿವರ ಈ ಉತ್ತರದಿಂದ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರ ಸಿಟ್ಟಿಗೆ ಕಾರಣವಾಗಿ ಕಾಂಗ್ರೆಸ್ ಕಾರ್ಯಕರ್ತರಿಗೆ ಸರ್ಕಾರದ ಬೊಕ್ಕಸದಿಂದ ಹಣ ಕೊಡುತ್ತಿದ್ದೀರಿ, ಇದು ಕಾನೂನು ಬಾಹಿರ. ಈ ರೀತಿ ಹಣ ಕೊಡಲು ಅವಕಾಶ ಇಲ್ಲ. ಕೂಡಲೇ ಇದನ್ನು ವಾಪಸ್ ಪಡೆಯಿರಿ ಎಂದು ಎಲ್ಲಾ ಸದಸ್ಯರು ಎದ್ದು ನಿಂತು ಏರಿದ ಧ್ವನಿಯಲ್ಲಿ ಆಗ್ರಹಿಸಿದ್ದರಿಂದ ಸದನದಲ್ಲಿ ಗದ್ದಲದ ವಾತಾವರಣ ನಿರ್ಮಾಣವಾಯಿತು.

**ಸರ್ಕಾರದಿಂದ ಹಣ ಕೊಡುವುದು ಸರಿಯಲ್ಲ:** ಈ ವೇಳೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಮಾತನಾಡಿ, ಅಂಗನವಾಡಿ, ಆಶಾ ಕಾರ್ಯಕರ್ತೆಯರಿಗೆ ಸಂಬಳ ಹೆಚ್ಚು ಮಾಡಲು ಹಿಂದೆ-ಮುಂದೆ ನೋಡುತ್ತೀರಿ, ಆದರೆ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರುಗಳಿಗೆ ದೊಡ್ಡ ಪ್ರಮಾಣದಲ್ಲಿ ಗೌರವ ಧನ ನೀಡುತ್ತಿದ್ದೀರಿ, ಇದು ಸರಿಯಲ್ಲ.

ಗ್ಯಾರಂಟಿ ಯೋಜನೆಗಳಿಗೆ ಆನ್‌ಲೈನ್ ಮುಖಾಂತರವೇ ಹಣ ಪಾವತಿಯಾಗುತ್ತಿದೆ. ಸರ್ಕಾರದಿಂದ ಹಣ ಕೊಡುವುದು ಸರಿಯಲ್ಲ ಎಂದು ಹೇಳಿದರು.

ಆಶ್ರಯ, ವಸತಿ ಸೇರಿದಂತೆ ಯಾವುದೇ ಸಮಿತಿಗಳ ಅಧ್ಯಕ್ಷರುಗಳಿಗೆ ಗೌರವ ಧನ ನೀಡುತ್ತಿಲ್ಲ. ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು,. ಸದಸ್ಯರುಗಳಿಗೆ ಗೌರವ ಧನ ನೀಡುತ್ತಿರುವುದು ಏಕೆ? ಎಂದು ಪ್ರಶ್ನಿಸಿದರು.ನೇಮಕಾತಿಗಳಿಗೆ ನಿಯಮಗಳಿವೆ, ಯಾವ ಆಧಾರದ ಮೇಲೆ ಸಮಿತಿಗಳಿಗೆ ನೇಮಕಾತಿಗಳಾಗಿವೆ. ಇವರೆಲ್ಲ ಏನು ಓದಿದ್ದಾರೆ. ಇವರನ್ನು ನೇಮಕ ಮಾಡಿ ಸಂಬಳ, ಕಾರು, ಬಂಗಲೆ, ರಾಜ್ಯ ಸಚಿವ ಸ್ಥಾನಮಾನ ಎಲ್ಲಾ ನೀಡುತ್ತಿದ್ದೀರಿ. ಇದು ಸರಿಯಲ್ಲ ಎಂದು ಏರಿದ ಧ್ವನಿಯಲ್ಲಿ ಹೇಳಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಸರ್ಕಾರಕ್ಕೂ, ಕಾಂಗ್ರೆಸ್ ಪಕ್ಷಕ್ಕೂ ವ್ಯತ್ಯಾಸ ಇಲ್ಲದಂತಾಗಿದೆ. ವಾಲ್ಮೀಕಿ ನಿಗಮದ 180 ಕೋಟಿ ರೂ.ಗಳನ್ನು ಬಳ್ಳಾರಿ ಚುನಾವಣೆಯಲ್ಲಿ ಹಂಚುತ್ತೀರಿ. ಜನರ ತೆರಿಗೆ ಹಣವನ್ನು ಕಾಂಗ್ರೆಸ್ ಕಾರ್ಯಕರ್ತರಿಗೆ ಹೀಗೆ ಹಂಚಲು ಅವಕಾಶ ಇದೆಯೇ, ಕಾಂಗ್ರೆಸ್ ಪಕ್ಷದಲ್ಲಿ ಹಣ ಇಲ್ಲ ಎಂದಾದರೆ ರಸ್ತೆಯಲ್ಲಿ ಭಿಕ್ಷೆ ಬೇಡಿ. ಸರ್ಕಾರದ ಹಣವನ್ನು ಬಳಸಿಕೊಳ್ಳುವುದಕ್ಕೆ ನಾವು ಬಿಡಲ್ಲ. ಇದಕ್ಕೆ ನಮ್ಮ ವಿರೋಧವಿದೆ. ಇದನ್ನು ವಾಪಸ್ ಪಡೆಯಬೇಕೆಂದು ಆಗ್ರಹಿಸಿದರು.

| | |
|---|---|
| 1 | ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲು ರಾಜ್ಯ ಮಟ್ಟದ ಸಮಿತಿ ಮಾಡಿ ಕಾಂಗ್ರೆಸ್ ಕಾರ್ಯಕರ್ತರ ನೇಮಕ |
| 2 | ಸರ್ಕಾರದ ನಡೆಯನ್ನು ಖಂಡಿಸಿ ಬಿಜೆಪಿ ಸದಸ್ಯರಿಂದ ಬಾವಿಗಿಳಿದು ಧರಣಿ |
| 3 | ಕಾಂಗ್ರೆಸ್ ಕಾರ್ಯಕರ್ತರಿಗೆ ಜನರ ತೆರಿಗೆ ಹಣವನ್ನು ವೇತನವಾಗಿ ನೀಡಲಾಗ್ತಿದೆ ಎಂದು ವಾಗ್ದಾಳಿ |

**'ಮನೆಹಾಳು' ಪದ ಬಳಸಿದ ಅಶೋಕ್‌ಗೆ ತಿವಿದ ಡಿಕೆಶಿ**

**ಪ್ರಿಯಾಂಕ್ ತಿರುಗೇಟು**

**ಬಿಜೆಪಿ ಸದಸ್ಯರ ಆರೋಪಕ್ಕೆ ಸಚಿವ ಪ್ರಿಯಾಂಕ್ ತಿರುಗೇಟು ನೀಡಿ ಮಹಾರಾಷ್ಟ್ರದಲ್ಲಿ ಆರ್ ಎಸ್ ಎಸ್ ಕಾರ್ಯಕರ್ತರನ್ನು ಸಚಿವರ ಪಿ ಎ ಗಳಾಗಿ ನೇಮಕ ಮಾಡಲಾಗಿದೆ. ಇವರಿಗೆ ಸರ್ಕಾರ ವೇತನ ಕೊಡುತ್ತಿದೆ. ಇದರ ಬಗ್ಗೆ ಏಕೆ ಮಾತನಾಡುತ್ತಿಲ್ಲ ಎಂದು ಪ್ರಶ್ನಿಸಿದರು.**

**ಮಾತನಾಡಲು ಅವಕಾಶ ನೀಡದಿರುವುದು ಸರ್ವಾಧಿಕಾರಿ ಧೋರಣೆ**

**ಪ್ರಶ್ನೋತ್ತರ ಅವಧಿ ನಂತರ, ರಾಜ್ಯಸಭೆಯು ಎನ್‌ಇಪಿ ಕುರಿತ ಚರ್ಚೆ ಕೈಗೆತ್ತಿಕೊಂಡಿತು. ತಮಿಳುನಾಡು ಸರ್ಕಾರದ ವಿರುದ್ಧ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಸದನದಲ್ಲಿ ನೀಡಿದ್ದ ಹೇಳಿಕೆ ಪ್ರಸ್ತಾಪಿಸಲು ತುದಿಗಾಲಲ್ಲಿ ನಿಂತಿದ್ದ ವಿಪಕ್ಷಗಳ ಸದಸ್ಯರು, ಸಚಿವ ಪ್ರಧಾನ್ ಕ್ಷಮೆ ಯಾಚಿಸಬೇಕು ಎಂಬ ಬೇಡಿಕೆ ಮಂಡಿಸಲು ಸಜ್ಜಾಗಿದ್ದರು.ಆಗ, ಶಿಕ್ಷಣ ಸಚಿವಾಲಯ ಕುರಿತು ಚರ್ಚೆ ಆರಂಭಿಸುವಂತೆ ಕಾಂಗ್ರೆಸ್‌ನ ದಿಗ್ವಿಜಯ ಸಿಂಗ್ ಅವರಿಗೆ ಉಪಸಭಾಪತಿ ಹರಿವಂಶ್ ನಾರಾಯಣ ಸಿಂಗ್ ಅವರು ಸೂಚಿಸಿದರು. ಅಗ, ವಿಪಕ್ಷಗಳ ಸದಸ್ಯರು ಎನ್‌ಇಪಿ ಹಾಗೂ ಕ್ಷೇತ್ರಗಳ ಮರುವಿಂಗಡಣೆ ವಿರೋಧಿಸಿ, ಮಾತನಾಡಲು ಶುರು ಮಾಡಿದಾಗ ಸದನದಲ್ಲಿ ಗದ್ದಲ ಶುರುವಾಯಿತು.ಇದರ ಮಧ್ಯೆಯೇ ಎದ್ದು ನಿಂತ, ವಿಪಕ್ಷ ನಾಯಕ ಖರ್ಗೆ ಮಾತನಾಡಲು ಮುಂದಾದರು. ಇದಕ್ಕೆ ಅವಕಾಶ ನೀಡದ ಹರಿವಂಶ್ ಸಿಂಗ್,'ಮಾತನಾಡಲು ನಿಮಗೆ ಬೆಳಗಿನ ಅವಧಿಯಲ್ಲಿಯೇ ಅವಕಾಶ ನೀಡಲಾಗಿತ್ತು' ಎಂದರು.**

**ಕಿಡಿ ಹಚ್ಚಿಸಿದ ಅಶೋಕ್ ಹೇಳಿಕೆ**

**ಚರ್ಚೆಯ ಸಂದರ್ಭದಲ್ಲಿ ಆರ್ ಅಶೋಕ್, ಕಾಂಗ್ರೆಸ್ ನಿಂದ ಮನೆ ಹಾಳು ಕೆಲಸ ಎಂದು ಆರೋಪಿಸಿದರು. ಸರ್ಕಾರದ ದುಡ್ಡನ್ನು ಪಕ್ಷಕ್ಕೆ ಕೊಡುವುದು ಮನೆ ಹಾಳು ಕೆಲಸ ಅಲ್ಲವೇ? ಎಂದು ಪ್ರಶ್ನಿಸಿದರು. ಆರ್ ಅಶೋಕ್ ಮಾತಿಗೆ ಕಾಂಗ್ರೆಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಮನೆ ಹಾಳು ಮಾಡುವ ಕೆಲಸ ಬಿಜೆಪಿ ಮಾಡುವುದು ಎಂದು ಕಾಂಗ್ರೆಸ್ ಸದಸ್ಯರ ಕಿಡಿಕಾರಿದರು. ಕಡತದಿಂದ ಪದ ತೆಗೆಯಲು ಕಾಂಗ್ರೆಸ್ ಸದಸ್ಯರು ಆಗ್ರಹಿಸಿದರು.**

## ಕೇಂದ್ರದ ಮುಂದೆ ದೊಡ್ಡ ಬೇಡಿಕೆಯಿಟ್ಟ ದೇವೇಗೌಡ!

• ಉದಯವಾಹಿನಿ, ಹೊಸದಿಲ್ಲಿ

ಭಾರತೀಯ ರೈಲ್ವೇ ಕ್ಷೇತ್ರದ ಅಭಿವೃದ್ಧಿಗಾಗಿ ರೈಲ್ವೇ ತಿದ್ದುಪಡಿ ಮಸೂದೆ 2024 ಅನ್ನು ಬೆಂಬಲಿಸಿದ ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡರು, ಕಳೆದ ಹತ್ತು ವರ್ಷಗಳ ಅವಧಿಯಲಿ ನರೇಂದ್ರ ಮೋದಿ ಅವರ ಸರ್ಕಾರ ರೈಲ್ವೇ ವಲಯದಲ್ಲಿ ಕ್ರಾಂತಿಕಾರಕ ಅಭಿವೃದ್ಧಿಯನ್ನು ಮಾಡಿದೆ ಎಂದು ಶ್ಲಾಘಿಸಿದರು. ಕರ್ನಾಟಕದಲ್ಲಿ ಮೈಸೂರು ಮಹಾರಾಜರ ಆಳ್ವಿಕೆ ವೇಳೆ ಮೈಸೂರು - ಹರಿಹರವರೆಗೂ ಮೀಟರ್ ಗೇಜ್ ರೈಲು ಮಾರ್ಗ ನಿರ್ಮಿಸಿದ್ದನ್ನು ಸ್ಮರಿಸಿದ್ದರಲ್ಲದೇ, ಆಗಿನ ತಮ್ಮ ರೈಲು ಪ್ರಯಾಣದ ಅನುಭವವನ್ನು ನೆನೆದರು. ಅದೇ ರೈಲು ಮಾರ್ಗ ಮುಂಬಯಿ- ಚೆನ್ನೈ ರೇಲು ಮಾರ್ಗವಾಗಿದ್ದು, ಅದಕ್ಕೆ ಹರಿಹರ-ದಾವಣಗೆರೆ-ಶೃಂಗೇರಿ-ಬೇಲೂರು ಮೂಲಕ ಚನ್ನೈಗೆ ಸಂಪರ್ಕ ಕಲ್ಪಿಸಬೇಕು. ಇದು ಬಹಳ ಉಪಯುಕ್ತವಾಗಿದ್ದು, ಜನರಿಗೆ ಸಾಕಷ್ಟು ಅನುಕೂಲವಾಗಲಿದೆ. ಈ ಯೋಜನೆಯನ್ನು ಆದಷ್ಟು ಬೇಗ ಕಾರ್ಯಗತ ಮಾಡಬೇಕು ಎಂದು ಅವರು ಮನವಿ ಮಾಡಿದರು.

## ಕೇಜ್ರಿವಾಲ್‌ಗೆ ಹೊಸ ಸಂಕಷ್ಟ ಎಫ್‌ಐಆರ್ ದಾಖಲಿಸಲು ಸೂಚನೆ

• ಉದಯವಾಹಿನಿ, ಹೊಸದಿಲ್ಲಿ

ದಿಲ್ಲಿ ಮಾಜಿ ಸಿಎಂ ಹಾಗೂ ಆಮ್ ಆದ್ಮಿ ಪಕ್ಷದ (ಎಎಪಿ) ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಅವರಿಗೆ ಮತ್ತೊಂದು ಸಂಕಷ್ಟ ಎದುರಾಗಿದೆ. ದಿಲ್ಲಿ ಮದ್ಯ ನೀತಿ ಹಗರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಜಾಮೀನಿನ ಮೇಲೆ ಹೊರಗಿರುವ ಕೇಜ್ರಿವಾಲ್ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ದಿಲ್ಲಿ ನ್ಯಾಯಾಲಯ ಆದೇಶಿಸಿದೆ. ಕಳೆದ ತಿಂಗಳು ನಡೆದಿದ್ದ ದಿಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಕೇಜ್ರಿವಾಲ್ ಸೋಲು ಅನುಭವಿಸಿದ್ದರು. ತಮ್ಮದೇ ಕ್ಷೇತ್ರವಾದ ನವದೆಹಲಿಯಲ್ಲೂ ಅವರು ಸೋಲು ಕಂಡಿದ್ದರು. ಇದೀಗ ದಿಲ್ಲಿ ನ್ಯಾಯಾಲಯವು ಅವರ ವಿರುದ್ಧ ಮತ್ತು ಎಎಪಿಯ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಲು ಸೂಚಿಸಿದೆ.

## ಚಿಕಿತ್ಸೆ ಕೊಡುವ 135 ಸಂಚಾರಿ ಆಸ್ಪತ್ರೆಗಳಿಗೆ ಸಿಎಂ ಚಾಲನೆ

• ಉದಯವಾಹಿನಿ, ಬೆಂಗಳೂರು

ಕಟ್ಟಡ ಕಾರ್ಮಿಕರು ಕೆಲಸ ಮಾಡುವ ಸ್ಥಳಕ್ಕೇ ಹೋಗಿ ಆರೋಗ್ಯ ತಪಾಸಣೆ, ಚಿಕಿತ್ಸೆ ಕೊಡುವ 135 ಸಂಚಾರಿ ಆಸ್ಪತ್ರೆಗಳನ್ನು ಸಿಎಂ ಸಿದ್ದರಾಮಯ್ಯ ಲೋಕಾರ್ಪಣೆ ಮಾಡಿದರು. ವಿಧಾನಸೌಧದ ಮುಂದೆ ನಡೆದ ಕಾರ್ಯಕ್ರಮದಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ಕಟ್ಟಡ ಕಾರ್ಮಿಕರಿಗಾಗಿ ಮಾತ್ರ ಸಜ್ಜುಗೊಳಿಸಿರುವ 135 ಸಂಚಾರಿ ಆರೋಗ್ಯ ಘಟಕ ಆಂಬುಲೆನ್ಸ್




ವಾಹನಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಸಿಎಂ, ಬಸವಣ್ಣನವರ ಕಾಯಕ - ದಾಸೋಹ ಪರಿಕಲ್ಪನೆಯಲ್ಲಿ ನಾವು ಕಾರ್ಯಕ್ರಮ ರೂಪಿಸುತ್ತಿದ್ದೇವೆ ಎಂದು ತಿಳಿಸಿದರು. ಸಮಾಜದಲ್ಲಿ ದುಡಿಯುವ ವರ್ಗ ಒಂದು ಕಡೆ ಇದ್ದರೆ, ದುಡಿಸಿಕೊಳ್ಳುವ ವರ್ಗ ಮತ್ತೊಂದು ಕಡೆ ಇರುತ್ತದೆ. ಯಾರು ಉತ್ಪಾದನಾ ಚಟುವಟಿಕೆಯಲ್ಲಿ ಭಾಗವಹಿಸುತ್ತಾರೋ ಅವರೇ ದೇಶ ನಿರ್ಮಾತೃಗಳು. ಇಡೀ ದೇಶ ಕಾರ್ಮಿಕರ ಶ್ರಮವನ್ನು ಅವಲಂಬಿಸಿದೆ. ಸಮಾಜದಲ್ಲಿ ಒಂದೇ ವರ್ಗದವರು ದುಡಿಯುತ್ತಿರಬಾರದು, ಎಲ್ಲಾ ವರ್ಗದವರೂ ದುಡಿಯಬೇಕು. ಎಂದರು.

## ಸಾರಿಗೆ ನಿಗಮಗಳು ಸೇರಿದಂತೆ 34 ಸರ್ಕಾರಿ ಉದ್ದಿಮೆಗಳಿಗೆ ಆರ್ಥಿಕ ನಷ್ಟ

• ಉದಯವಾಹಿನಿ, ಬೆಂಗಳೂರು

ಸರ್ಕಾರ ಅಧೀನದಲ್ಲಿರುವ 125 ಸಾರ್ವಜನಿಕ ಉದ್ದಿಮೆಗಳ ಪೈಕಿ 16 ಉದ್ದಿಮೆಗಳು ನಿಷ್ಕ್ರಿಯಗೊಂಡಿದ್ದು, 34 ಉದ್ದಿಮೆಗಳು ನಷ್ಟದಲ್ಲಿವೆ ಎಂದು ರಾಜ್ಯ ಸರ್ಕಾರ ಒಪ್ಪಿಕೊಂಡಿದೆ. ನಷ್ಟದಲ್ಲಿರುವ ಉದ್ದಿಮೆಗಳ ಪುನಶ್ಚೇತನಗೊಳಿಸುವುದು ಅಗತ್ಯ ಎಂದು ಪರಿಗಣಿಸಿದರೆ ಅಂತಹ ಸಾರ್ವಜನಿಕ ಉದ್ದಿಮೆಗಳಿಗೆ ಅನುದಾನ, ಸಾಲ, ಈಕ್ವಿಟಿ ರೂಪದಲ್ಲಿ ಹಣಕಾಸು ನೆರವು ನೀಡಲಾಗುತ್ತಿದೆ. ಆಡಳಿತಾತ್ಮಕ ಸುಧಾರಣೆ ಕೈಗೊಳ್ಳಲು ಹಾಗೂ ಉದ್ದಿಮೆಗಳನ್ನು



ಅಭಿವೃದ್ಧಿಪಡಿಸಲು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದು ವಿಪಕ್ಷ ಸದಸ್ಯರಾದ ಕೆ.ಎಸ್.ನವೀನ್ ಹಾಗೂ ಶರವಣ ಅವರ ಪ್ರಶ್ನೆಗಳಿಗೆ ಮುಖ್ಯಮಂತ್ರಿ ಪರವಾಗಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಮಾಹಿತಿ ನೀಡಿದರು.

**16 ಉದ್ದಿಮೆ ಬಂದ್ ಮಾಡಿದ ಸರ್ಕಾರ**

ಆರ್ಥಿಕ ಇಲಾಖೆಯು ನಿಷ್ಕ್ರಿಯ ಹಾಗೂ ಆರ್ಥಿಕವಾಗಿ ನಷ್ಟದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಸಮಗ್ರ ಮೌಲ್ಯಮಾಪನ ಕೈಗೊಂಡು ಆದರ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಿದೆ. ಕೆಲವು ಕಂಪನಿಗಳು ತೀವ್ರ ನಷ್ಟದಲ್ಲಿದ್ದರೆ ಇನ್ನೂ ಉದ್ಯಮಗಳು ನಷ್ಟದಲ್ಲಿವೆ.

ಲಾಭರಹಿತ ಉದ್ದಿಮೆಗಳಿಂದ ಲಾಭದತ್ತ ಕೊಂಡ್ಯೊಯಲು ಹಾಗೂ ನಿಷ್ಕ್ರಿಯಗೊಂಡಿರುವ ಉದ್ದಿಮೆಗಳು ಪುನಶ್ಚೇತನಗೊಳಿಸುವ ಕುರಿತಂತೆ ಮೌಲ್ಯಮಾಪನ ಪೂರ್ಣಗೊಂಡ ಬಳಿಕ ವಾಸ್ತವ ಅರಿತು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

# ಪ್ರವಾಸೋದ್ಯಮ ವಿಷಯ ಪ್ರಶ್ನೆಪತ್ರಿಕೆ ತಯಾರಿ ವೇಳೆ ಎಡವಟ್ಟು


**■ ಅಂಕಗಳಿಗೆ ನಡೆಸಬೇಕಾದ ಪರೀಕ್ಷೆಯನ್ನು 30ಅಂಕಗಳಿಗೆ ನಡೆಸಿ ಪ್ರಮಾದ ಮಾಡಿದಲ್ಲದೇ, ವಿದ್ಯಾರ್ಥಿಗಳ ಈ ಪರೀಕ್ಷೆಯ ಅಂಕಗಳನ್ನೇ ದ್ವಿಗುಣಗೊಳಿಸಿ ಫಲಿತಾಂಶ ಪ್ರಕಟ**

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ವಿಶ್ವವಿದ್ಯಾಲಯವು ಇತ್ತೀಚೆಗೆ ನಡೆಸಿದ ಪದವಿ ಪರೀಕ್ಷೆಗಳ ಪೈಕಿ ಬಿ.ಎ. ಪ್ರವಾಸೋದ್ಯಮ ಎಂಬ ಮುಕ್ತ ಆಯ್ಕೆಯಡಿ 'ಟೂರ್ ಗೈಡ್ ಅಂಡ್ ಸರ್ವೀಸ್ ಎಂಬ ವಿಷಯದ ಪರೀಕ್ಷೆಯಲ್ಲಿ ಮಹಾ ಎಡವಟ್ಟೊಂದನ್ನು ಮಾಡಿದೆ. 60 ಅಂಕಗಳಿಗೆ ನಡೆಸಬೇಕಾದ ಪರೀಕ್ಷೆಯನ್ನು 30ಅಂಕಗಳಿಗೆ ನಡೆಸಿ ಪ್ರಮಾದ ಮಾಡಿದಲ್ಲದೇ, ವಿದ್ಯಾರ್ಥಿಗಳ ಈ ಪರೀಕ್ಷೆಯ ಅಂಕಗಳನ್ನೇ ದ್ವಿಗುಣಗೊಳಿಸಿ ಫಲಿತಾಂಶ ಪ್ರಕಟಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯ ಪ್ರಶ್ನೆಪತ್ರಿಕೆ ರೂಪಿಸುವಲ್ಲಿ ಬಹುದೊಡ್ಡ ಎಡವಟ್ಟು ಮಾಡಿದ್ದಲ್ಲದೆ, ಪರೀಕ್ಷೆಯನ್ನೂ ನಡೆಸಿದೆ. ವಿಶ್ವವಿದ್ಯಾಲಯ ಪರೀಕ್ಷೆಯ ಅಕ್ರಮ ವಿದ್ಯಾರ್ಥಿಗಳಿಗೆ ಸಕ್ರಮವಾಗಿ ಪರಿಣಮಿಸಿದೆ. ಏಕೆಂದರೆ, ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 30 ಅಂಕಗಳಿಗಾದರೂ ಇದನ್ನು 60 ಅಂಕಗಳಿಗೆ ಪರಿಗಣಿಸಲು ಬೆಂಗಳೂರು ವಿವಿ ತೀರ್ಮಾನಿಸಿದೆ. ಏನೇ ಆದರೂ, ಈ ಪ್ರಕರಣ ಪ್ರಶ್ನೆ ಪತ್ರಿಕೆ ರೂಪಿಸುವುದು, ಪರೀಕ್ಷೆ ನಡೆಸುವುದರ ಬಗ್ಗೆ ವಿವಿಯ ಗಂಭೀರತೆಯನ್ನು ಪ್ರಶ್ನೆ ಮಾಡುವಂತಾಗಿದೆ.

**ಪರೀಕ್ಷೆಯ ಅಕ್ರಮ ವಿದ್ಯಾರ್ಥಿಗಳಿಗೆ ಸಕ್ರಮ**



**ಇದು 180 ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆ. ಪರೀಕ್ಷಕರು ಬಹಳ ಎಚ್ಚರ ವಹಿಸಿ ತಮ್ಮ ಕರ್ತವ್ಯ ನಿರ್ವಹಿಸಬೇಕು. ಕರ್ತವ್ಯದ ವೇಳೆ ಶಿಸ್ತು ಉಲ್ಲಂಘನೆ ಮಾಡಿರುವುದು ಕಂಡು ಬಂದಿದೆ. ಅವರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು. ಕೇವಲ 5 ಸಾವಿರ ರೂ. ದಂಡ ವಿಧಿಸಿದರೆ ಸಾಲದು.**
**-ಶರವಣ, ಅಕಾಡೆಮಿಕ್ ಕೌನ್ಸಿಲ್ ಸದಸ್ಯ**

**ಪ್ರಶ್ನೆಪತ್ರಿಕೆ ರೂಪಿಸುವುದು ಬಿಒಇ ಕೆಲಸ. ಯಾವುದೇ ಪರೀಕ್ಷೆ ಇದ್ದರೂ ಗಂಭೀರವಾಗಿ ಮಾಡಬೇಕಾಗುತ್ತದೆ. ಆದರೆ, ಈ ಪ್ರವಾಸೋದ್ಯಮ ವಿಷಯದ ಪ್ರಶ್ನೆ ಪತ್ರಿಕೆಯನ್ನು ಬಹಳ ಬೇಜವಾಬ್ದಾರಿತನದಿಂದ ಮಾಡಿದ್ದಾರೆ. ಹೀಗಾಗಿ, ಅವರಿಗೆ 5 ಸಾವಿರ ರೂ.ದಂಡ ವಿಧಿಸಿದ್ದೇವೆ. ಮುಂದಿನ ಕ್ರಮಕ್ಕೆ ಕಾಲೇಜು ಶಿಕ್ಷಣ ಇಲಾಖೆಗೆ ಪತ್ರ ಬರೆದಿದ್ದೇವೆ.**
**-ಸಿ.ಶ್ರೀನಿವಾಸ್, ಕುಲಸಚಿವ (ಮೌಲ್ಯಮಾಪನ), ಬೆಂಗಳೂರು ವಿವಿ**

**ಏನಿದು ಎಡವಟ್ಟು?:** ಬೆಂಗಳೂರು ವಿಶ್ವವಿದ್ಯಾಲಯವು ಬಿ.ಎ. ಪ್ರವಾಸೋದ್ಯಮ ಎಂಬ ಮುಕ್ತ ಆಯ್ಕೆಯಡಿ ಲಭ್ಯವಿರುವ 'ಟೂರ್ ಗೈಡ್ ಅಂಡ್ ಸರ್ವೀಸ್ ಎಂಬ ವಿಷಯದ ಪರೀಕ್ಷೆಯನ್ನು ಕಳೆದ ಆಗಸ್ಟ್‌ನಲ್ಲಿ ನಡೆಸಿತ್ತು. ಈ ವೇಳೆ ಪ್ರಶ್ನೆಪತ್ರಿಕೆಯನ್ನು 60 ಅಂಕಗಳಿಗೆ ರೂಪಿಸಬೇಕಾಗಿತ್ತು. ವಾಣಿಜ್ಯ ಪರೀಕ್ಷಾ ಮಂಡಳಿ ಮುಖ್ಯಸ್ಥೆ (ಬಿಒಇ) ಪ್ರೊ.ಸಿದ್ದಗಂಗಮ್ಮ, ಪಶ್ನೆ ಪತ್ರಿಕೆಗಳನ್ನು 60 ಅಂಕಗಳ ಬದಲಾಗಿ 30 ಅಂಕಗಳಿಗೆ ರೂಪಿಸಿದ್ದರು. ರೂಪಿಸಿದ ವೇಳೆಯಲ್ಲೂ ಅವರು ಮಾಡಿರುವ ತಪ್ಪು ಗಮನಕ್ಕೆ ಬಂದಿಲ್ಲ. ತದನಂತರ ಪರೀಕ್ಷೆಯನ್ನೂ ನಡೆಸಿದ್ದಾರೆ. 184 ವಿದ್ಯಾರ್ಥಿಗಳು ಈ ಪರೀಕ್ಷೆ ಬರೆದಿದ್ದಾರೆ. ಪರೀಕ್ಷೆ ನಡೆದು ಮೌಲ್ಯಮಾಪನದ ವೇಳೆ ಪ್ರಮಾದ ಬೆಳಕಿಗೆ ಬಂದಿದೆ.

**5 ಸಾವಿರ ರೂ.ದಂಡ**

**ಪರೀಕ್ಷಾ ಅಕ್ರಮವೆಸಗಿದ ಆರೋಪ ಎದುರಿಸುತ್ತಿರುವ ಪ್ರೊ.ಸಿದ್ಧಗಂಗಮ್ಮ ಅವರಿಗೆ ಬೆಂಗಳೂರು ವಿವಿಯು 5 ಸಾವಿರ ರೂ. ದಂಡ ವಿಧಿಸಿದೆ. ಅಲ್ಲದೆ, ಅವರ ವಿರುದ್ಧ ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಶಿಸ್ತು ಕ್ರಮ ಜರುಗಿಸಲು ಸಕ್ಷಮ ಪ್ರಾಕಾರವಾದ ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕರಿಗೆ ಪತ್ರ ಬರೆಯಲು ಬೆಂಗಳೂರು ವಿವಿ ತೀರ್ಮಾನಿಸಿದೆ. ಪರೀಕ್ಷಾ ಎಡವಟ್ಟು ಹಿನ್ನೆಲೆಯಲ್ಲಿ ಬೆಂಗಳೂರು ವಿವಿ ಬಿಒಇ ಸಿದ್ದಗಂಗಮ್ಮ ಅವರಿಗೆ ಬೆಂ. ವಿವಿ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದೆ. ಇದಕ್ಕೆ ಉತ್ತರಿಸಿರುವ ಅವರು, ''ಇದು ಕಣ್ತಪ್ಪಿನಿಂದ ನಡೆದ ಪ್ರಮಾದ. ಹೀಗಾಗಿ, ತಪ್ಪು ಮನ್ನಿಸಬೇಕು,'' ಎಂದು ಮನವಿ ಮಾಡಿದ್ದಾರೆ.**

**ಜಾಣಾಕ್ಯತನ ತೋರಿಸಿದ ವಿವಿ:** ದ್ವಿಗುಣಗೊಳಿಸಿ ಫಲಿತಾಂಶ ಪರೀಕ್ಷೆ ಮುಗಿದ ಬಳಿಕ ಬಿಒಇ ಮಾಡಿರುವ ಪ್ರಮಾದದ ಬಗ್ಗೆ ವಾಣಿಜ್ಯ ನಿಕಾಯದ ಡೀನ್‌ನಿಂದ ತನಿಖೆಗೆ ಒಳಪಡಿಸಿದ್ದು, ಸಮಸ್ಯೆಗೆ ಪರಿಹಾರ ಕಲ್ಪಿಸುವಂತೆ ವಿವಿ ಸೂಚಿಸಿತ್ತು. ಡೀನ್ ನೀಡಿರುವ ಅಭಿಪ್ರಾಯದ ಪ್ರಕಾರ, ''ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಪರೀಕ್ಷೆ ನಡೆಸಲು ಸಾಧ್ಯವಿಲ್ಲ. ಮೊದಲಿನಿಂದ ಮತ್ತೆ ಎಲ್ಲಾ ಪ್ರಕ್ರಿಯೆ ನಡೆಸುವುದು ತೀರಾ ಕಷ್ಟ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಉತ್ತರಿಸಿರುವ 30 ಪ್ರಶ್ನೆಗಳಿಗೆ ಗಳಿಸುವ ಅಂಕಗಳನ್ನು ದ್ವಿಗುಣಗೊಳಿಸಿ ಫಲಿತಾಂಶ ನೀಡುವುದು ಸೂಕ್ತ'' ಎಂದು ಸಲಹೆ ಮಾಡಲಾಗಿದೆ. ಈ ವಿಚಾರವನ್ನು ಅಕಾಡೆಮಿಕ್ ಕೌನ್ಸಿಲ್ ಸಭೆಯಲ್ಲೂ ಚರ್ಚಿಸಿದ್ದು, ಡೀನ್ ಅಭಿಪ್ರಾಯಕ್ಕೆ ಸದಸ್ಯರು ಒಪ್ಪಿಗೆ ಸೂಚಿಸಿದ ಹಿನ್ನೆಲೆಯಲ್ಲಿ ಅಂತಿಮವಾಗಿ ಫಲಿತಾಂಶವನ್ನು ದ್ವಿಗುಣಗೊಳಿಸಿ ನೀಡಲು ನಿರ್ಣಯಿಸಲಾಗಿದೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹8,749/Gram24ct ₹8,020/Gram22ct | ಬೆಳ್ಳಿ: ₹98.00/Gram

# ತಹಶೀಲ್ದಾರ್ ಕಚೇರಿ; ಭ್ರಷ್ಟಾಚಾರ ವಾಸನೆ

## ಖಾಲಿ ಖಾಲಿ ಜಿಲ್ಲಾ ಕೈಗಾರಿಕಾ ಕೇಂದ್ರ, ವಾಣಿಜ್ಯ ಇಲಾಖೆ ಕಚೇರಿಗೆ ಉಪಲೋಕಾಯುಕ್ತರು ಭೇಟಿ

• ಉದಯವಾಹಿನಿ, ಕೋಲಾರ

ನಗರದಲ್ಲಿರುವ ಕೋಲಾರ ತಾಲ್ಲೂಕು ತಹಶೀಲ್ದಾರ್ ಕಚೇರಿಗೆ ಉಪಲೋಕಾಯುಕ್ತ ಬಿ.ವೀರಪ್ಪ ಸೋಮವಾರ ದಿಢೀರ್ ಭೇಟಿ ನೀಡಿ ಕಡತ ವಿಳಂಬ ಮಾಡುತ್ತಿರುವುದಕ್ಕೆ ಜನರನ್ನು ಸತಾಯಿಸುತ್ತಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದರು.

ಶಿರಸ್ತೇದಾರ್ ಭಾಸ್ಕರ್ ಎಂಬುವರ ಮೊಬೈಲ್ ಪಡೆದು ಅವರ ಹಣಕಾಸು ವಹಿವಾಟನ್ನು ಪರಿಶೀಲಿಸಿದರು.

ಫೋನ್‌ಪೇ ಹಿಸ್ಟರಿ ಪರಿಶೀಲಿಸಿದಾಗ 1ಲಕ್ಷ, ರೂ. 80 ಸಾವಿರ, ರೂ.50 ಸಾವಿರ, 20 ಸಾವಿರ...ಹೀಗೆ, ಪದೇಪದೇ ಹಣ ವರ್ಗಾವಣೆಯಾಗಿರುವುದು ಗೊತ್ತಾಯಿತು. ಇವರೆಲ್ಲಾ ಯಾರು, ಏಕೆ ಹಣ ಹಾಕಿದ್ದಾರೆ ಎಂಬುದಾಗಿ ಪ್ರಶ್ನಿಸಿದರು. ಆಗ ಆ ಅಧಿಕಾರಿಯು ಗೆಳೆಯರು, ಕುಟುಂಬದವರು, ಸಾಲ ಎಂದೆಲ್ಲಾ ತೊದಲಿದರು. 'ಏನ್ರಿ, ನೀವು ಆರ್‌ಬಿಐ ಬ್ಯಾಂಕಾ ಇಷ್ಟೊಂದು ವ್ಯವಹಾರ ಮಾಡಿದಿರಲ್ಲ. ಈ ಅಧಿಕಾರಿಯ ಮೇಲೆ ಯಾರೂ ನಿಗಾ ಇಟ್ಟಿಲ್ಲವೇ' ಎಂದು ತರಾಟೆಗೆ ತೆಗೆದುಕೊಂಡರು. ಆಗ ಆ ಶಿರಸ್ತೇದಾರ ಬೆವರಲಾಂಭಿಸಿದರು.

ಆ ಅಧಿಕಾರಿ ಮೊಬೈಲ್‌ನಲ್ಲಿ ಐದು ಬ್ಯಾಂಕ್ ಖಾತೆಗಳಿರುವುದು ಪತ್ತೆಯಾಯಿತು. ಎಲ್ಲದರಲ್ಲಿ ಎಷ್ಟೆಷ್ಟು ವಹಿವಾಟು ನಡೆದಿದೆ ಓಪನ್ ಮಾಡಿಕೊಡು ಎಂದು ವೀರಪ್ಪ ಪಟ್ಟು ಹಿಡಿದರು. ಆಗ ಆ ಶಿರಸ್ತೇದಾರ ಪಾಸ್ವರ್ಡ್ ಮರೆತು ಹೋಗಿದೆ ಎನ್ನುತ್ತಿದ್ದಂತೆ ಮತ್ತೆ ಕೋಪಗೊಂಡರು.

ಡಿಐಸಿ ಕಚೇರಿ ಖಾಲಿಖಾಲಿ ಜಿಲ್ಲಾ ಕೈಗಾರಿಕಾ ಕೇಂದ್ರ, ವಾಣಿಜ್ಯ ಇಲಾಖೆ (ಡಿಐಸಿ) ಕಚೇರಿಗೆ ಉಪಲೋಕಾಯುಕ್ತರು ಭೇಟಿ


ಉದಯವಾಹಿನಿ ಚಿತ್ರ

ನೀಡಿದಾಗ ಜಂಟಿ ನಿರ್ದೇಶಕ ಹೊರತುಪಡಿಸಿ ಉಪನಿರ್ದೇಶಕ ರವಿಚಂದ್ರ ಸೇರಿದಂತೆ ಬೇರೆ ಯಾವ ಅಧಿಕಾರಿಯೂ ಇರಲಿಲ್ಲ. ಇಲ್ಲಿ ಜನರಿಗೆ ತಲುಪಿಸಬೇಕಾಗಿರುವ

ಸೌಲಭ್ಯಗಳು ದುರುಪಯೋಗ ಆಗಿದೆ, ಗೈರಾಗಿರುವ ಅಧಿಕಾರಿ, ಸಿಬ್ಬಂದಿಯ ಮಾಹಿತಿ ಕೊಡಬೇಕು ಎಂದು ವೀರಪ್ಪ ಗರಂ ಆದರು. ದಿಢೀರ್ ಭೇಟಿ ವೇಳೆ ಅರವಿಂದ, ಜಿಲ್ಲಾಧಿಕಾರಿ ಎಂ.ಆರ್.ರವಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸುನಿಲ್ ಎಸ್.ಹೊಸಮನಿ, ಜಿಲ್ಲಾ ಲೋಕಾಯುಕ್ತ ಅಧೀಕ್ಷಕ ವಿ.ಧನಂಜಯ್, ಇನ್ಸ್‌ಪೆಕ್ಟರ್ ಯಶವಂತ್ ಕುಮಾರ್, ಅಂಜಿನಪ್ಪ, ರೇಣುಕಾ, ಸಿಬ್ಬಂದಿ ದೇವ ಎಸ್.ಆರ್. ನಾಗವೇಣಿ, ಪವಿತ್ರಾ, ಸುಬ್ರಮಣಿ, ವಾಸುದೇವ, ನಾಗಭೂಷಣ್, ರಮೇಶ್, ಶಿವಶಂಕರ್, ಶೋಭಾ. ಮಾನಸಾ, ಶ್ರೀನಿವಾಸ್, ದೀನದಯಾಳ್, ಶ್ರೀನಿವಾಸಲು, ಮಂಜುನಾಥ್, ಮಂಜಪ್ಪ, ಅಜಯ್, ರಾಜಗೋಪಾಲ್ ಇದ್ದರು.

**ಎಲ್ಲಾ ಪ್ರಿಂಟ್ ಔಟ್ ತೆಗೆಸಿಕೊಡಿ ಎಂದು ತಾಕೀತು ಮಾಡಿದರು. ಹಳೆಯ ಪ್ರಕರಣಗಳು ಹೆಚ್ಚು ಬಾಕಿ ಇರುವುದಕ್ಕೆ ಗರಂ ಆದರು. ಜಮೀನಿನ ಖಾತೆಯನ್ನು ಸರಿಯಾಗಿ ಮಾಡುತ್ತಿಲ್ಲವೆಂದು ದೂರು ನೀಡಲು ಬಂದವರಿಗೆ, 'ಮೊದಲು ಜನರು ಬದಲಾಗಬೇಕು, ಭ್ರಷ್ಟಾಚಾರ ತೊಲಗಬೇಕು' ಎಂದರು.**

ಇಡೀ ದಿನ ವಿವಿಧ ಕಚೇರಿಗಳಿಗೆ ದಿಢೀರ್ ಭೇಟಿ ಉಪ ಲೋಕಾಯುಕ್ತ ವೀರಪ್ಪಗೆ ಜಿಲ್ಲಾ ಲೋಕಾಯುಕ್ತ ಅಧೀಕ್ಷಕ ಧನಂಜಯ್ ಸಾಥ್ ಅಧಿಕಾರಿ, ಸಿಬ್ಬಂದಿಯ ಮೊಬೈಲ್ ಪಡೆದು ಪರಿಶೀಲನೆ ತಹಶೀಲ್ದಾರ್ ನಯನಾಗೆ ತರಾಟೆ 'ಏಕಮ್ಮಾ ಹಾಜರಾತಿ ಪುಸ್ತಕದಲ್ಲಿ ಸಿಗ್ನೇಚರ್ ಮಾಡಿಲ್ಲ.. ನೀವೇನು ಇಷ್ಟವಿಲ್ಲದಿದ್ದರೆ ಬಿಟ್ಟು ಹೋಗಿ, ಇಷ್ಟೊಂದು ಕಡತ ಬಾಕಿ

ಸ್ಪೆಷಲ್ಲೇ ಬೇರೆ ತಾಲ್ಲೂಕುಗಳಲ್ಲಿ ಸಹಿ ಮಾಡುತ್ತಾರೆ. ಕೆಲಸ ಮಾಡಲು ಇಟ್ಟುಕೊಂಡಿದ್ದೀರಿ ಏಕೆ ತಮ್ಮ ಬಗ್ಗೆ ದೂರುಗಳಿವೆ ಜಿಲ್ಲಾಧಿಕಾರಿಗೂ ಸಿಗದಷ್ಟು ಬ್ಯುಸಿಯಾಗಿರುತ್ತೀರಂತೆ' ಎಂದು ಉಪಲೋಕಾಯುಕ್ತರು ತಹಶೀಲ್ದಾರ್ ನಯನಾ ಅವರನ್ನು ತರಾಟೆಗೆ ತೆಗೆದುಕೊಂಡರು. ಲೋಕಾಯುಕ್ತ ಅಧಿಕಾರಿಗಳು ನಯನಾ ಅವರ ಮೊಬೈಲ್ ಪಡೆದು ಹಣಕಾಸು ವಹಿವಾಟು ಪರಿಶೀಲಿಸಿದರು. ಕಡತ ವಿಲೇವಾರಿ ವಿಳಂಬ ಜಾತಿ ಪ್ರಮಾಣಪತ್ರ ವಿಳಂಬ ಮಾಡುತ್ತಿರುವುದಕ್ಕೆ ಗ್ರೇಡ್-2 ತಹಶೀಲ್ದಾರ್ ಹನ್ನ ಮರಿಯಾ ಅವರನ್ನೂ ತರಾಟೆಗೆ ತೆಗೆದುಕೊಂಡರು.

## ತಟ್ಟೆಕೆರೆ ಬಳಿ ಕಾಣಿಸಿಕೊಂಡ ಕಾಡಾನೆಗಳು


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚನ್ನಪಟ್ಟಣ

ನಾಲ್ಕು ಕಾಡಾನೆಗಳ ತಂಡ ತಡರಾತ್ರಿ, ನಗರಕ್ಕೆ ಹೊಂದಿಕೊಂಡಿರುವ ತಟ್ಟೆಕೆರೆ ಬಳಿಯ ಗ್ಲೋಬಲ್ ಬಡಾವಣೆಯಲ್ಲಿ ಕಾಣಿಸಿಕೊಂಡಿದ್ದು ನಾಗರಿಕರಲ್ಲಿ ಭೀತಿ ಉಂಟಾಗಿದೆ.

ಬಡಾವಣೆಯ ಖಾಸಗಿ ಶಾಲೆಯೊಂದರ ಆವರಣದಲ್ಲಿ ಕಾಡಾನೆಗಳು ಓಡಾಡುತ್ತಿರುವುದನ್ನು ಗಮನಿಸಿದ ನಾಗರಿಕರು ಕಿರುಚಾಟ ಆರಂಭಿಸಿದ್ದಾರೆ. ನಂತರ ಬಡಾವಣೆಯ ಜನರು ಜಮಾಯಿಸಿದ್ದಾರೆ. ಬಡಾವಣೆಯಲ್ಲಿ ಖಾಲಿ ನಿವೇಶನಗಳಲ್ಲಿ ಬೆಳೆದಿರುವ ಗಿಡಗಂಟಿಗಳ ನಡುವೆ ಅವಿತುಕೊಂಡಿದ್ದ ಕಾಡಾನೆಗಳು ಜನರ ಕಿರುಚಾಟ ಕೇಳಿ ಹೊರಗೆ ಬಂದು ಬೇಕಾಬಿಟ್ಟಿ ಓಡಾಡಲು ಆರಂಭಿಸಿವೆ. ಆನೆಯೊಂದು ಮನೆಯೊಂದರ ಕಾಂಪೌಂಡ್ ಉರುಳಿಸಿದೆ. ನಂತರ ವಿಷಯ ತಿಳಿದು ಸ್ಥಳಕ್ಕೆ ಬಂದ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಎರಡು ಗಂಟೆ ಕಾರ್ಯಾಚರಣೆ ನಡೆಸಿ ಪಟಾಕಿ ಸಿಡಿಸಿ ಕಾಡಾನೆಗಳನ್ನು ಕಾಡಿನ ಕಡೆಗೆ ಓಡಿಸಿದರು. ನಂತರ ನಾಗರಿಕರು ನಿಟ್ಟುಸಿರು ಬಿಟ್ಟರು. ಗ್ರಾಮೀಣ ಪ್ರದೇಶದಲ್ಲಿ ತಂಡ ತಂಡವಾಗಿ ರೈತರ ಬೆಳೆಗಳ ಮೇಲೆ ದಾಳಿ ಮಾಡುತ್ತಿರುವ ಕಾಡಾನೆಗಳು ನಗರ ವ್ಯಾಪ್ತಿಗೂ ದಾಂಗುಡಿ ಇಟ್ಟಿರುವುದು ನಾಗರಿಕರಲ್ಲಿ ಆತಂಕ ಸೃಷ್ಟಿಸಿದೆ. ಈಗಾಗಲೇ ಕಳೆದ ಮೂರು ವರ್ಷಗಳಲ್ಲಿ ಮೂರು ಬಾರಿ ನಗರದ ಲಾಳಾಘಟ್ಟ ಮರಳುಹೊಲ, ಅಪ್ಪಗೆರೆ ಬಳಿಯ ಕಟ್ಟೆಯಲ್ಲಿ ಕಾಣಿಸಿಕೊಂಡಿದ್ದ ಕಾಡಾನೆಗಳು ಈಗ ತಟ್ಟೆಕೆರೆ ಬಡಾವಣೆಯಲ್ಲಿ ಕಾಣಿಸಿಕೊಂಡಿರುವುದು ಜನರಲ್ಲಿ ಭಯದ ವಾತಾವರಣ ಸೃಷ್ಟಿಸಿದೆ.

## ಮಿನಿ ನ್ಯೂಸ್

### ಭಾರತಿಪುರದಲ್ಲಿ ಶನೈಶ್ವರ ಉತ್ಸವ

• ಉದಯವಾಹಿನಿ, ಸಂತೇಬಾಚಹಳ್ಳಿ

ಭಾರತೀಪುರದ ಶನೈಶ್ವರನ ದೇವಾಲಯದಲ್ಲಿ ಲೋಕಕಲ್ಯಾಣಕ್ಕಾಗಿ ವಿಶೇಷ ಪೂಜೆಗಳು ನಡೆದವು.ದೇವಾಲಯದ ಅರ್ಚಕ ದರ್ಶನ್ ಮಾತನಾಡಿ, 'ಶನೈಶ್ವರನ ದೇವಾಲಯದಲ್ಲಿ ಪೂಜಾ ಮಹೋತ್ಸವ, ಹೋಮ, ಪಂಚಾಮೃತ ಅಭಿಷೇಕ, ಗಂಗಾಪೂಜಾ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಕಾರ್ಯಕ್ರಮ ನಡೆದವು. ರುದ್ರ ಪ್ರಸಾದ್ ಮತ್ತು ಸಂಗಡಿಗರಿಂದ ವೀರಭದ್ರ ಕುಣಿತ, ಚಿಟ್ಟಿ ಮೇಳ, ವಾದ್ಯಗೋಷ್ಠಿಗಳೊಂದಿಗೆ ಶನೈಶ್ವರನ ಉತ್ಸವ ಮೂರ್ತಿಯನ್ನು ಬೆಳ್ಳಿ ರಥದ ಮೂಲಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಿತು.

### ಅತ್ಯಾಚಾರ, ದೌರ್ಜನ್ಯ ಪ್ರಕರಣ ಹೆಚ್ಚಳ

• ಉದಯವಾಹಿನಿ, ಸಂತೇಮರಹಳ್ಳಿ

ಸಮೀಪದ ಕುದೇರು ಗ್ರಾಮದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ವಿಶ್ವ ಮಹಿಳಾ ದಿನವನ್ನು ಈಚೆಗೆ ಆಚರಿಸಲಾಯಿತು. ವಕೀಲರ ಸಂಘದ ಜಿಲ್ಲಾಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಮಾತನಾಡಿ, 'ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ, ದೌರ್ಜನ್ಯದಂಥ ಘಟನೆಗಳು ಹೆಚ್ಚಾಗಿ ಕಂಡು ಬರುತ್ತಿವೆ.ಬಡತನ ಮತ್ತು ಶಿಕ್ಷಣದ ಕೊರತೆಯಿಂದ ಈ ಸಮಸ್ಯೆಗಳು ಕಾಡುತ್ತಿವೆ' ಎಂದರು. 'ಮಹಿಳೆಯರು ಕಾನೂನಿನ ಬಗ್ಗೆ ತಿಳಿದುಕೊಳ್ಳುವುದು ಅತ್ಯವಶ್ಯಕವಾಗಿದೆ' ಎಂದು ತಿಳಿಸಿದರು. ಪ್ರಾಂಶುಪಾಲ ಥಿಯೋಡರ್ ಲೂಥರ್, ಸಹ ಪ್ರಾಧ್ಯಾಪಕರಾದ ಗಿರಿಜಾ ಶಶಿಕಲಾ, ದಿಲೀಪ್ ಹಾಗೂ ಸುರೇಶ್ ಹಾಜರಿದ್ದರು.

### 3 ವರ್ಷ ಕಳೆದರೂ ಪೂರ್ಣಗೊಳ್ಳದ ಸಭಾಂಗಣ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೊಡಿಗೇನಹಳ್ಳಿ

ಕಾಮಗಾರಿಗೆ ಗುದ್ದಲಿಪೂಜೆ ನಡೆದು ಮೂರು ವರ್ಷ ಕಳೆದರೂ ವಸತಿ ಶಾಲೆಯಲ್ಲಿನ ಸಭಾಂಗಣ ಪೂರ್ಣಗೊಳ್ಳದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಶ್ರಾವಂಡನಹಳ್ಳಿ ಹೊರವಲಯದಲ್ಲಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 2022 ಅ.12ರಂದು ಅಂದಿನ ಶಾಸಕ ಎಂ.ವಿ.ವೀರಭದ್ರಯ್ಯ 2.40ಕೋಟಿ ವೆಚ್ಚದಲ್ಲಿ ಸಭಾಂಗಣ, ಆಟದ ಮೈದಾನ ಹಾಗೂ ಆರ್ಚ್ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿದ್ದರು. 10 ತಿಂಗಳು ಕಳೆದರೂ ಸಭಾಂಗಣ ಪೂರ್ಣಗೊಂಡಿಲ್ಲ. ಗುತ್ತಿಗೆದಾರ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ಕರೆ ಮಾಡಿದರೂ ಯಾವುದೇ ಪ್ರತಿಕ್ರಿಯೆ ಇಲ್ಲ ಎನ್ನುತ್ತಾರೆ ಹೆಸರು ಹೇಳಲು ಇಚ್ಛಿಸದ ಶಿಕ್ಷಕರೊಬ್ಬರು.

## ಕ್ರಿಕೆಟ್: ಬ್ಯಾಟ್ ಬೀಸಿದ ಡಿಕೆಶಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕನಕಪುರ

ಇಲ್ಲಿನ ರೂರಲ್ ಎಜುಕೇಶನ್ ಸೊಸೈಟಿ ಆವರಣದಲ್ಲಿ ಆರ್‌ಇಎಸ್ ವಿದ್ಯಾಸಂಸ್ಥೆ ಸಂಸ್ಥಾಪಕರಾದ ಕರಿಯಪ್ಪನವರ ಜನ್ಮದಿನಾಚರಣೆ ಪ್ರಯುಕ್ತ ನಡೆದ ಎಸ್. ಕರಿಯಪ್ಪ ಮೆಮೋರಿಯಲ್ ಕಪ್ ಟೂರ್ನಮೆಂಟ್ 2025ರ ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬ್ಯಾಟ್ ಬೀಸಿ ಕ್ರಿಕೆಟ್ ಆಡಿದರು. ಎಸ್.ಕರಿಯಪ್ಪ ಅವರ 125ನೇ ಜನ್ಮ ದಿನಾಚರಣೆ ಪ್ರಯುಕ್ತ ಕ್ರಿಕೆಟ್ ಪಂದ್ಯಾವಳಿಯನ್ನು ಮಾರ್ಚ್ 7ರಿಂದ ಪ್ರಾರಂಭಿಸಿದ್ದು ಭಾನುವಾರ ರಾತ್ರಿ ನಡೆದ ಸೆಮಿ ಫೈನಲ್ ಪಂದ್ಯದಲ್ಲಿ ಡಿ.ಕೆ. ಶಿವಕುಮಾರ್ ಕ್ರಿಕೆಟ್ ಆಡುವ ಮೂಲಕ ಆಟಗಾರರನ್ನು ಹುರಿ ದುಂಬಿಸಿದರು. ಜತೆಗೆ ಆಟವನ್ನು ವೀಕ್ಷಿಸಿ ಫೈನಲ್ ತಲುಪಿದ ತಂಡಗಳಿಗೆ ಶುಭ ಹಾರೈಸಿದರು.

ಈ ವೇಳೆ ಮಾತನಾಡಿದ ಅವರು, ತಾಲ್ಲೂಕು ಕ್ರೀಡೆಯಲ್ಲಿ ಮತ್ತಷ್ಟು ಬೆಳೆಯಬೇಕು. ಮತ್ತಷ್ಟು ಕ್ರೀಡೆಗಳಿಗೆ ಒತ್ತು ಕೊಡುವ ನಿಟ್ಟಿನಲ್ಲಿ ಈ ಸಂಸ್ಥೆ ಸಾಗಬೇಕಿದೆ. ಅದಕ್ಕೆ ಪೂರಕವಾಗುವ ಎಲ್ಲಾ ಬೆಂಬಲವನ್ನು ನಾನು ನೀಡುತ್ತೇನೆ ಎಂದು ಭರವಸೆ ನೀಡಿದರು. ಹಾರೋಹಳ್ಳಿ ಟೀಚರ್ಸ್ ತಂಡವು ಪ್ರಥಮ ಸ್ಥಾನ ಪಡೆದು ಆಕರ್ಷಕ ಟ್ರೋಫಿಯೊಂದಿಗೆ 80,125 ನಗದು ಪಡೆದುಕೊಂಡರು. ದ್ವಿತೀಯ ಸ್ಥಾನ ಕನಕಪುರ ಪೊಲೀಸ್ ತಂಡ, ಕಂದಾಯ ಇಲಾಖೆ ತೃತೀಯ ಸ್ಥಾನ ತನ್ನದಾಗಿಸಿಕೊಂಡರು.ಮಾಜಿ ಸಂಸದ ಡಿ.ಕೆ.ಸುರೇಶ್, ಎಚ್.ಕೆ. ಶ್ರೀಕಂಠ, ಸಂಸ್ಥೆಯ ಪದಾಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಇದ್ದರು.

## ದಲಿತ ವಿರೋಧಿ ಜಿ.ಪಂ ಸಿಇಒ: ಡಿಎಸ್‌ಎಸ್ ಆರೋಪ

• ಉದಯವಾಹಿನಿ, ಗುಬ್ಬಿ

ಜಿಲ್ಲೆಯ ವಿವಿಧೆಡೆ ಪಂಚಾಯತ್ ರಾಜ್ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಲಿತ ಸಮುದಾಯದ ಅಧಿಕಾರಿಗಳನ್ನು ಉದ್ದೇಶ ಪೂರ್ವಕವಾಗಿ ಅಮಾನತುಗೊಳಿಸುವ ಮೂಲಕ ಜಿಲ್ಲಾ ಪಂಚಾಯಿತಿ ಸಿಇಒ ದಲಿತ ವಿರೋಧಿ ನೀತಿ ಅನುಸರಿಸುತ್ತಿದ್ದಾರೆ ಎಂದು ಡಿಎಸ್‌ಎಸ್ ಮುಖಂಡರು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಜಿ.ಎಚ್.ಜಗನ್ನಾಥ್, ಜಿಲ್ಲಾ ಪಂಚಾಯಿತಿಯಲ್ಲಿ ಜನಪ್ರತಿನಿಧಿಗಳು ಇಲ್ಲದೆ ಇರುವ ಸಮಯವನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳುತ್ತಿರುವ ಸಿಇಒ ದಲಿತ ಅಧಿಕಾರಿಗಳನ್ನೇ ಗುರಿಯಾಗಿಸಿಕೊಳ್ಳುತ್ತಿದ್ದಾರೆ. ಗ್ರಾಮ


ಉದಯವಾಹಿನಿ ಚಿತ್ರ

ಪಂಚಾಯಿತಿಯಲ್ಲಿ ದಲಿತ ಪಿಡಿಒಗಳು ಅಕ್ರಮ ಎಸೆದಿದ್ದಾರೆ ಎಂದು ಆರೋಪಿಸಿ ಅಮಾನತು ಮಾಡುವ ಮೂಲಕ ಅವರ ಆತ್ಮಸ್ಥೈರ್ಯ ಕುಂದಿಸುವ ಕೆಲಸ ಮಾಡುತ್ತಿದ್ದಾರೆ. ಈಗಾಗಲೇ ಜಿಲ್ಲೆಯ ಸುಮಾರು 12 ಜನ ದಲಿತ ಸಮುದಾಯದ ಪಿಡಿಒಗಳನ್ನು ಅಮಾನತುಗೊಳಿಸಿದ್ದಾರೆ ಎಂದರು.

ಸಿಇಒ ಇಬ್ಬಗೆ ನೀತಿ ಬಿಟ್ಟು ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿ ನಡೆದುಕೊಳ್ಳದಿದ್ದರೆ ಜಿಲ್ಲಾ ಪಂಚಾಯಿತಿ ಕಚೇರಿ ಮುಂದೆ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು. ಮುಖಂಡ ಜಿ.ಮಂಜುನಾಥ್ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವರು ದಲಿತರಾದರೂ ಅಧಿಕಾರಿಗಳಿಗೆ ರಕ್ಷಣೆ ಇಲ್ಲವಾಗಿದೆ ಎಂದರು. ಡಿಎಸ್‌ಎಸ್ ತಾಲ್ಲೂಕು ಘಟಕದ ಸಂಚಾಲಕ ಕಡಬ ಶಂಕರ್ ಮಾತನಾಡಿ, ದಲಿತ ಅಧಿಕಾರಿಗಳನ್ನೇ ಗುರಿಯಾಗಿಸಿಕೊಂಡಿರುವ ಸಿಇಒ ಅವರನ್ನು ತಕ್ಷಣವೇ ಅಮಾನತುಗೊಳಿಸಬೇಕು ಎಂದು ಆಗ್ರಹಿಸಿದರು. ಮುಖಂಡರಾದ ಶಿವಪ್ಪ, ತಿಮ್ಮಯ್ಯ, ನಟರಾಜು, ಈಶ್ವರಯ್ಯ ಚನ್ನಬಸವಣ್ಣ, ಮಹೇಶ್, ಆಟೊ ಮಂಜಣ್ಣ, ಸತೀಶ್, ರವಿಕುಮಾರ್ ಹಾಗೂ ಹಲವಾರು ಡಿಎಸ್‌ಎಸ್ ಮುಖಂಡರು ಹಾಜರಿದ್ದರು.

## ದೊಡ್ಡಕೆರೆ ಏರಿ ಮೇಲೆ ಕಾಮಗಾರಿಗೆ ಆಕ್ಷೇಪ

• ಉದಯವಾಹಿನಿ, ಕುಣಿಗಲ್


ಕುಣಿಗಲ್ ದೊಡ್ಡಕೆರೆ ಏರಿ ಮೇಲೆ ಸಂಬಂದಪಟ್ಟ ಇಲಾಖೆಯಿಂದ ಅನುಮತಿ ಪಡೆಯದೆ ಜೆಸಿಬಿ ಬಳಸಿ ಪೈಪ್ ಲೈನ್ ಕಾಮಗಾರಿ ಮಾಡುತ್ತಿರುವುದಕ್ಕೆ ಕೆಲ ಸಂಘ-ಸಂಸ್ಥೆ ಪ್ರತಿನಿಧಿಗಳು ಆಕ್ಷೇಪ ವ್ಯಕ್ತಪಡಿಸಿದರು.

ಸಂಬಂದಪಟ್ಟ ಇಲಾಖೆ ಅನುಮತಿ ಪಡೆಯದಿರುವುದು ಮತ್ತು ಸರ್ಕಾರಿ ರಜಾ ದಿನಗಳಲ್ಲಿ (ಎರಡನೇ ಶನಿವಾರ ಮತ್ತು ಭಾನುವಾರ) ಅತುರದಲ್ಲಿ ಜೆಸಿಬಿ ಬಳಸಿ ಗುಂಡಿ ನಿರ್ಮಿಸಿ ಪೈಪ್ ಅಳವಡಿಕೆ ಕಾರ್ಯ ಭರದಿಂದ ಸಾಗುತ್ತಿದ್ದನ್ನು ಕಂಡ ಟೌನ್ ಸಹಕಾರ ಸಂಘದ ನಿರ್ದೇಶಕ ದಿನೇಶ್, ಪುರಸಭೆ ಮಾಜಿ ಸದಸ್ಯ ರಮೇಶ್ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಕಾಮಗಾರಿ ಸ್ಥಗಿತಗೊಳಿಸುವಂತೆ ಆಗ್ರಹಿಸಿದರು. ಏರಿ ಮೇಲೆ ಪುರಾತನ ದೇವಾಲಯಗಳಿವೆ. ದೇವಾಲಯ ಮುಂಭಾಗದಲ್ಲಿ ಗುಂಡಿ ತೋಡುತ್ತಿರುವುದರಿಂದ ದೇವಾಲಯ ಮತ್ತು ಏರಿ ಅಸ್ತಿತ್ವಕ್ಕೆ ಧಕ್ಕೆಯಾಗುತ್ತಿದೆ ಎಂದು ತಿಳಿಸಿದಾಗ ಅಧಿಕಾರಿಗಳು ಪೊಲೀಸರ ಗಮನಕ್ಕೆ ತಂದಾಗ ಪೊಲೀಸರು ಸ್ಥಳಕ್ಕೆ ತೆರಳಿ ಜೆಸಿಬಿಯನ್ನು ವಶಕ್ಕೆ ಪಡೆದರು. ಅಮೃತ ಯೋಜನೆಯ ಭಾಗ 2 ಕಾಮಗಾರಿ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆದರೆ, ಮೂಲ ಯೋಜನೆ, ನೀಲಿನಕ್ಕೆ ಹಾಜರು ಪಡಿಸಲು ಯೋಜನೆ ಅಧಿಕಾರಿ ಮತ್ತು ಗುತ್ತಿಗೆದಾರ ವಿಫಲರಾಗಿದ್ದಾರೆ. ಕಲ ಬಲಾಢ್ಯರ ಅನುಕೂಲಕ್ಕಾಗಿ ಕಾಮಗಾರಿ ದಿಕ್ಕು ಬದಲಿಸಲಾಗಿದೆ ಎಂದು ದಿನೇಶ್ ಆರೋಪಿಸಿದರು. ಕೆರೆ ಮತ್ತು ಏರಿ ಸಂರಕ್ಷಣೆಗಾಗಿ ಕಾನೂನು ಹೋರಾಟ ಮಾಡಲಾಗುವುದು ಎಂದು ತಿಳಿಸಿದರು.

ಹೇಮಾವತಿ ನಾಲಾವಲಯ ಎಇಇ ರವಿ, ಕೆರೆ ಏರಿ ಮೇಲೆ ಕಾಮಗಾರಿ ಪ್ರಾರಂಭಿಸುವ ಮುನ್ನ ಯಾವುದೇ ಮಾಹಿತಿ ನೀಡಿಲ್ಲ ಮತ್ತು ಅನುಮತಿ ಪಡೆಯದೆ ಕಾಮಗಾರಿ ಪ್ರಾರಂಭಿಸಿದ ಮಾಹಿತಿ ತಿಳಿದ ಕೂಡಲೇ ಪೊಲೀಸರಿಗೆ ದೂರು ನೀಡಿ ಕ್ರಮ ಕೈಗೊಳ್ಳಲು ಮನವಿ ಮಾಡಲಾಗಿದೆ ಎಂದರು.

## ಮುತ್ತುಗದ ಹೂವಿನ ಸೊಬಗು


ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿ ಹೋಗುವ ಪ್ರವಾಸಿಗರನ್ನು ಮುತ್ತುಗದ ಮರಗಳು ಹೂವು ಅರಳಿಸಿ ಆಕರ್ಷಿಸುತ್ತಿವೆ.

ಬೇಸಿಗೆ ಸಮೀಪಿಸುತ್ತಿದ್ದ ಹಾಗೆ ಮಾಗಿಯ ಚಳಿಯಲ್ಲಿ ಹಸಿರು ಹೊದ್ದ ಮರಗಳೆಲ್ಲ ಎಲೆ ಕಳಚಿ ಹೂವನ್ನು ಬಿಡುತ್ತವೆ. ತಮ್ಮ ಹೊಸ ಚಿಗುರೆಲೆಗಳನ್ನೇ ಹೂವಾಗಿಸಿಕೊಂಡು ಪ್ರಕೃತಿಯ ಸೊಬಗನ್ನು ಇಮ್ಮಡಿಗೊಳಿಸುತ್ತವೆ. ನಿಮ್ಮ ಬ್ಯಾಂಕ್ ಖಾತೆ, ಲಾಕರ್ ಮತ್ತು ಇತರ ಹಣಕಾಸು ಸ್ವತ್ತುಗಳಿಗೆ ನಿಮ್ಮ ನಾಮಿನೇಶನ್ ಅನ್ನು ನೋಂದಾಯಿಸಿ.

ಮುತ್ತುಗದಂತಹ ಮರಗಳು ಹೂವು ಬಿಟ್ಟಾಗ ಕಾಡಿಗೆ ಕಿಚ್ಚು ಹೊತ್ತಿಕೊಂಡಂತೆ ಭಾಸವಾಗುತ್ತದೆ. ನವೆಂಬರ್ - ಡಿಸೆಂಬರ್ ಮಾಸದ ಕೊರೆಯುವ ಚಳಿಯಲ್ಲಿ ಎಲೆ ಉದುರಿಸುವ ಮುತ್ತುಗ ಮರಗಳು ಜನವರಿ, ಫೆಬ್ರವರಿ, ಮಾರ್ಚ್ ತಿಂಗಳಿನ ಆಸುಪಾಸಿನಲ್ಲಿ ಮೊಗ್ಗನ್ನು ಧರಿಸಿ, ಹೂವುಗಳನ್ನು ಅರಳಿಸುತ್ತವೆ. ಬಂಡೀಪುರದ ಎಲೆ ಉದುರುವ ಮತ್ತು ಅರೆ ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಅಲ್ಲಲ್ಲಿ ಗುಂಪಿನಲ್ಲಿ ಬೆಳೆವ ಈ ಮುತ್ತುಗ ಮರವು ಹಳದಿ ಮಿಶ್ರಿತ ಕೆಂಪು ಹೂಗಳನ್ನು ತೊಟ್ಟು ಇಡೀ ಮರದ ತುಂಬೆಲ್ಲ ಹೂವುಗಳನ್ನು ಹೊದ್ದು ನಿಲ್ಲುವುದು ನಯನ ಮನೋಹರ ದೃಶ್ಯ. ಮುತ್ತುಗದ ಮರದ ಹೂವು ಬಿಟ್ಟಾಗ ಅನೇಕ ಸಸ್ಯಾಹಾರಿ ಪ್ರಾಣಿಗಳು ಈ ಹೂವಿನ ದಳಗಳನ್ನು ತಿನ್ನುತ್ತವೆ. ಕಾಡಿನ ಮಂಗಗಳು, ಲಂಗೂರ್, ಅಳಿಲು ಸೇರಿದಂತೆ ಇತರೆ ಸಣ್ಣ ಪುಟ್ಟ ಪ್ರಾಣಿಗಳು ಈ ಮರದ ಬಳಿಯೇ ಸುಳಿದಾಡುತ್ತವೆ' ಎಂದು ಪರಿಸರ ಪ್ರೇಮಿ ಶ್ರೀಕಂಠ 'ತಿಳಿಸಿದರು.


## ಮಾರ್ಚ್ 14ಕ್ಕೆ ಕೈವಾರದಲ್ಲಿ ರಥೋತ್ಸವ

• ಉದಯವಾಹಿನಿ, ಚಿಂತಾಮಣಿ

ಕೈವಾರ ಅಮರನಾರೇಯಣಸ್ವಾಮಿ ರಥೋತ್ಸವ ಮಾರ್ಚ್ 14ರಂದು ಶುಕ್ರವಾರ ಮಧ್ಯಾಹ್ನ 1ಕ್ಕೆ ನೆರವೇರಲಿದೆ. ರಥೋತ್ಸವ ಅಂಗವಾಗಿ ದೇವಾಲಯದ ಪ್ರಾಂಗಣದಲ್ಲಿ ಕೃಷ್ಣ ಗಂಧೋತ್ಸವ ಸೇವೆಯನ್ನು ಧರ್ಮಾಧಿಕಾರಿ ಎಂ.ಆರ್.ಜಯರಾಂ ಸಲ್ಲಿಸಲಿದ್ದಾರೆ.

ರಥೋತ್ಸವ ಅಂಗವಾಗಿ ದೇವಾಲಯದಲ್ಲಿ 18 ದಿನಗಳ ಪೂಜಾ ಕೈಂಕರ್ಯ ಹಮ್ಮಿಕೊಳ್ಳಲಾಗಿದೆ.

ಗರುಡ ಧ್ವಜವನ್ನು ರಥಬೀದಿಯಲ್ಲಿ ಪ್ರದಕ್ಷಿಣೆಯೊಂದಿಗೆ ಮೆರವಣಿಗೆ ಮಾಡಲಾಯಿತು. ನಂತರ ದೇವಾಲಯದ ಧ್ವಜಸ್ತಂಭದ ಬಳಿ ಪೂಜೆ ಸಲ್ಲಿಸಿ ಧ್ವಜಾರೋಹಣ ನೆರವೇರಿಸಲಾಯಿತು. ಬಲಿಪೀಠದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಪ್ರತಿದಿನ ರಾತ್ರಿ ವಿಶೇಷ ಸಿಂಹವಾಹನೋತ್ಸವ, ಹನುಮಂತವಾಹನೋತ್ಸವ, ಶೇಷವಾಹನೋತ್ಸವ, ಗರುಡೋತ್ಸವ, ಚಿತ್ರಗೋಪುರೋತ್ಸವ ಹಮ್ಮಿಕೊಳ್ಳಲಾಗಿದೆ. ತಾತಯ್ಯ ಅವರ ಜಯಂತಿ ಮಾರ್ಚ್ 13ರಂದು ಯೋಗಿನಾರೇಯಣ ಮಠದಲ್ಲಿ ಶ್ರದ್ಧಾಭಕ್ತಿಗಳಿಂದ ಆಚರಿಸಲಾಗುವುದು. ಅಂದು ಬೆಳಿಗ್ಗೆ ಘಂಟಾನಾದ, ಸುಪ್ರಭಾತ ಗೋಪೂಜೆ ಹಾಗೂ ವಿಶೇಷ ಅಭಿಷೇಕ ಹಮ್ಮಿಕೊಳ್ಳಲಾಗಿದೆ. ಗುರುವಾರದಂದು ಬೆಳಿಗ್ಗೆ 7ಕ್ಕೆ ತಾತಯ್ಯನವರಿಗೆ ವಿಶೇಷ ಅಭಿಷೇಕ, ಅಷ್ಟಾವಧಾನ ಸೇವೆ, ಮಂಗಳಾರತಿ ಸಮರ್ಪಿಸಲಾಗುವುದು.


ಉದಯವಾಹಿನಿ ಚಿತ್ರ

ಯೋಗಿನಾರೇಯಣ ಮಠದಲ್ಲಿ ನೂತನವಾಗಿ ನಿರ್ಮಿಸಿರುವ ಆತ್ಮಧ್ಯಾನ ಮಂದಿರ ಉದ್ಘಾಟಿಸಲಾಗುವುದು. ಧರ್ಮಾಧಿಕಾರಿಯಿಂದ ಆತ್ಮಬೋಧಾಮೃತ ವಿಶೇಷ ಪ್ರವಚನವಿರಲಿದೆ. ಬೆಳಿಗ್ಗೆ 11ರಿಂದ ಸಂಜೆ 7.30ರವರೆಗೆ ವಿವಿಧ ವಿದ್ವಾಂಸರಿಂದ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ. 15ರಂದು ತಾತಯ್ಯ ರಥೋತ್ಸವ: ಮಾರ್ಚ್ 15ರಂದು ಮಧ್ಯಾಹ್ನ 12.30ಕ್ಕೆ ತಾತಯ್ಯ ಅವರ ರಥೋತ್ಸವ ನಡೆಯಲಿದೆ.

## ಮುಳ್ಳಿನ ಪೊದೆಗೆ ಹಾರಿ ಹರಕೆ ಸಲ್ಲಿಕೆ

• ಉದಯವಾಹಿನಿ,ಯಳಂದೂರು

ಸಮೀಪದ ಗೂಳಿಪುರ ಗ್ರಾಮದಲ್ಲಿ ಬಿಸಿಲು ಮಾರಮ್ಮ ಜಾತ್ರೋತ್ಸವ ಮಧ್ಯಾಹ್ನ ಸಂಭ್ರಮದಿಂದ ಜರುಗಿತು. ಜಾತ್ರೆಯಲ್ಲಿ ದೇವರ ಭಕ್ತರು ಮುಳ್ಳಿನ ಪೊದೆಗಳಿಗೆ ಹಾರಿ ಹರಕೆ ಸಲ್ಲಿಸುವುದು ವಾಡಿಕೆ. ಸಾವಿರಾರು ಭಕ್ತರು ಮಾರಿ ದೇವಿಗೆ ಬೇವು, ಹೂ ಹಾಗೂ ತಂಬಿಟ್ಟಿನ ಆರಿತಿ ಸಮರ್ಪಿಸಿ ಭಕ್ತಿ ಮೆರೆದರು. ಹಬ್ಬಕ್ಕೆ ಒಂದು ವಾರ ಸಿದ್ಧತೆ ನಡೆಸಲಾಗುತ್ತದೆ. ಊರ ಹಬ್ಬ ನಿರ್ವಿಘ್ನವಾಗಿ ಸಾಗಲಿ ಎಂದು ಸಂಜೆ ದೇವತೆಗೆ ಎಳನೀರು

ಅಭಿಷೇಕ ಮಾಡಿ, ಪ್ರತಿ ಮನೆಗೂ ತೀರ್ಥ ಸಿಂಚನ ಮಾಡಲಾಯಿತು. ಸೋಮವಾರ ಮುಂಜಾನೆ ಫಾಲ್ಗುಣ ಶುದ್ಧ ಏಕಾದಶಿ ಪುಷ್ಯ ನಕ್ಷತ್ರದಲ್ಲಿ ಬಿಸಿಲು ಮಾರಮ್ಮನಿಗೆ ವೈವಿಧ್ಯಮಯ ಪುಷ್ಪಗಳಿಂದ ಸಿಂಗರಿಸಿ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು. ಊರಮಾರಿ ಭಕ್ತರು ಮಂಗಳವಾದ್ಯ ಮೊಳಗಿಸುತ್ತಿದ್ದಂತೆ ಮಧ್ಯಾಹ್ನ


ಉದಯವಾಹಿನಿ ಚಿತ್ರ


ಹತ್ತಾರು ಭಕ್ತರ ಮೇಲೆ ಮಾರಿಯರ ಗಣ (ಗುಂಪು) ಆವಾಹನೆಯಾಯಿತು. ಮಂಗಳವಾದ್ಯ ನಾದ ಹೆಚ್ಚಾಗುತ್ತಿದ್ದಂತೆ ಭಕ್ತರು ವೇಗವಾಗಿ ಓಡಿ ಮುಳ್ಳಿನ ಪೊದೆಗಳ ಮೇಲೆ ಹಾರಿದರು. ಈ ವೇಳೆ ಯುವಕರ ತಂಡ ಮುಳ್ಳಿನ ಪೊದೆಯಿಂದ ಮಾರಮ್ಮನ ಭಕ್ತರನ್ನು ಹೊರಗೆ ತಂದು ಹೂ, ಹೊಂಬಾಳೆ ನೀಡಿದರು. ಎಳನೀರು, ಅಡಿಕೆ ಸಿಂಗಾರ ಪಡೆದು ಸಂಪ್ರೀತರಾದ ಮಾರಿ ಭಕ್ತರು ದೇವಾಲಯಗಳತ್ತ ಸಾಗಿ, ಭಕ್ತರಿಂದ ಹಾರದ ಕಾಣಿಕೆ ಪಡೆದುಕೊಂಡರು. ನಂತರ ಸತ್ತಿಗೆ ಸುರಿಪಾನಿ ಹೊತ್ತವರ ಜೊತೆ ದೇಗುಲವನ್ನು ಮೂರು ಬಾರಿ ಪ್ರದಕ್ಷಿಣೆ ಮಾಡಿ, ಭಕ್ತರ ಪ್ರಶ್ನೆಗಳಿಗೆ ಉತ್ತರಿಸಿದರು. 'ಈ ವರ್ಷ ಮಳೆ ಮತ್ತು ಬೆಳೆ ಸಮೃದ್ಧ ಆಗಲಿದೆ' ಎಂದು ಮಂತ್ರಾಕ್ಷತೆ ಆಶೀರ್ವಚನ ನೀಡಿದರು. ನಂತರ ಸಾರ್ವಜನಿಕರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಭಕ್ತರು ಪೂಜಾ ಕೈಂಕರ್ಯದಲ್ಲಿ ಭಾಗಿಯಾದರು. ಹಣ್ಣುಕಾಯಿ, ಹೂ ಸಮರ್ಪಿಸಿದರು. ಧೂಪ ದೀಪ ಬೆಳಗಿ ಮಳೆ ಬೆಳೆ ಸಮೃದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು. ಮಹಿಳೆಯರು ಮಕ್ಕಳು ಮಡೆ ಉತ್ಸವದಲ್ಲಿ ಪಾಲ್ಗೊಂಡರು.

## ಗಾಯಾಳುಗಳ ಆರೋಗ್ಯ ವಿಚಾರಿಸಿದ ಜಿಲ್ಲಾ ಆರೋಗ್ಯ ಅಧಿಕಾರಿ

• ಉದಯವಾಹಿನಿ, ಕೊಳ್ಳೇಗಾಲ

ತಾಲ್ಲೂಕಿನ ತಳ್ಳನೂರು ಹಾಗೂ ಬಂಡಳ್ಳಿ ನಡುವೆ ರಾತ್ರಿ 07-30 ಸಮಯದಲ್ಲಿ ಚಾಲನೆ ಆಯಾತಪ್ಪಿ ಬಸ್ ಪಲ್ಟಿಯಾಗಿ ಸ್ಥಳದಲ್ಲಿಯೇ ಬಸ್ ಕ್ಲೀನರ್ ದೊಡ್ಡಿಂದುವಾಡಿ ಗ್ರಾಮದ ನವೀನ್ ಕುಮಾರ್ ಮೃತಪಟ್ಟು ಶಾಗ್ಯ ಗ್ರಾಮದ60 ರಿಂದ 70 ಮಂದಿ ಗಾಯಗೊಂಡು ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು. ವಿಷಯ ತಿಳಿದ ಜಿಲ್ಲಾ ಆರೋಗ್ಯ ಅಧಿಕಾರಿ ಚಿದಂಬರಂ ರವರು ಗಂಭೀರ ಸ್ಥಿತಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಜಿಲ್ಲೆಯ ಕಿಮ್ಸ್ ಆಸ್ಪತ್ರೆಯ ಗಾಯಾಳುಗಳ ಆರೋಗ್ಯ ವಿಚಾರಿಸಿದ ನಂತರ ಕೊಳ್ಳೇಗಾಲ ಪಟ್ಟಣದ ಉಪ ಆಸ್ಪತ್ರೆಗೆ ಭೇಟಿ ನೀಡಿದರು ಬಸ್ ಅಪಘಾತದಲ್ಲಿ ಗಾಯಗೊಂಡು ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದ ಪ್ರತಿಯೊಬ್ಬ ಗಾಯಾಳುಗಳ ಬಳಿ ತೆರಳಿ ಆರೋಗ್ಯ ವಿಚಾರಿಸಿದರು. ಪ್ರತಿ ವಾರ್ಡಿನಲ್ಲಿಯೂ ದಾಖಲಾಗಿದ್ದ ಮಹಿಳೆಯರು ಪುರುಷರು ಹಾಗೂ ಮಕ್ಕಳ ನು ಮಾತನಾಡಿಸಿ ಗಾಯಾಳುಗಳಿಗೆ ಉಂಟಾಗಿರುವ ಗಾಯ ಮತ್ತು ನೋವಿನ ಬಗ್ಗೆ ಪರಿಶೀಲಿಸಿ ಗುಣಮಟ್ಟದ ಚಿಕಿತ್ಸೆ ನೀಡಿ ನಿಮ್ಮನ್ನು ಒಂದೇ ದಿನದಲ್ಲಿ ಮನೆಗೆ ಕಳುಹಿಸಿ ಕೊಡುವ ವ್ಯವಸ್ಥೆ ಮಾಡುತ್ತೇವೆ ಎಂದು ಧೈರ್ಯ ತುಂಬುವ ಮಾತುಗಳನ್ನಾಡಿದರು.

## ರಸ್ತೆ ಕಾಮಗಾರಿಗೆ ಅಡ್ಡಿಪಡಿಸುತ್ತಿರುವವರ ವಿರುದ್ಧ ಕ್ರಮಕ್ಕೈಗೊಳ್ಳುವಂತೆ ಡಿಸಿಗೆ ಮನವಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಾಮರಾಜನಗರ,

ನಗರದ 10ನೇ ವಾರ್ಡ್‌ನ ಕರಿನಂಜನಪುರ ಹೊಸ ಬಡಾವಣೆಯ ಬಸವ ಕಲ್ಯಾಣ ನಗರದ ಸಾರ್ವಜನಿಕ ಮುಖ್ಯ ರಸ್ತೆಯ ಕಾಮಗಾರಿಗೆ ಅಡ್ಡಿಪಡಿಸುತ್ತಿರುವವರ ವಿರುದ್ಧ ಕ್ರಮಕೈಗೊಂಡು ರಸ್ತೆ ಕಾಮಗಾರಿ ಪೂರ್ಣಗೊಳಿಸಿಕೊಡಬೇಕು ಎಂದು ಒತ್ತಾಯಿಸಿ ನಿವಾಸಿಗಳು ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಗೆ ಮನವಿ ಸಲ್ಲಿಸಿ ದರು. ಬಡಾವಣೆಯ ನಡುವೆ ಹೋಗುವ ರಾಮಸಮುದ್ರದಿಂದ ಕರಿನಂಜನಪುರಕ್ಕೆ ಹೋಗುವ ರಸ್ತೆ ಕಾಮಗಾರಿಗೆ ಕೆಲವರು ಅಡ್ಡಿ ಪಡಿಸಿದ್ದಾರೆ. ಇದರಿಂದ ನಿವಾಸಿಗಳಿಗೆ ತೊಂದರೆ ಉಂಟಾಗಿದೆ. ರಸ್ತೆಯ ಪೂರ್ವ ಪಶ್ಚಿಮ ಬಾಗಗಳಲ್ಲಿ ಅನೇಕ ಖಾಸಗಿ ಬಡಾವಣೆಗಳು ನಿರ್ಮಾಣವಾಗಿರುತ್ತವೆ. ಬಡಾವಣೆಗಳಿಗೆ ಈ ರಸ್ತೆ ಮಾತ್ರ ಏಕೈಕ ಸಂಪರ್ಕ ರಸ್ತೆಯಾಗಿರುತ್ತದೆ. ರಸ್ತೆಗೆ ಸರ್ಕಾರ ಒಳ ಚರಂಡಿಯನ್ನು ಸಹ ಮಾಡಿಸಿರುತ್ತದೆ ಮತ್ತು ಬಡಾವಣೆಗಳ ನಿವಾಸಿಗಳಾದ ನಮ್ಮೆಲ್ಲರ ಒತ್ತಾಯದ ಮೇರೆಗೆ, ರಸ್ತೆ ಕಾಮಗಾರಿ ಸಹ ಪ್ರಾರಾಂಭವಾಗಿರುತ್ತದೆ. ರಸ್ತೆಯ ಪಶ್ಚಿಮ ಭಾಗದಲ್ಲಿ ಕರಿನಂಜನಪುರದ ಮಹದೇವಯ್ಯನವರ ಹೆಂಡತಿ ಸಾಕಮ್ಮ ಎಂಬುವವರು. ಸರ್ವೇ ನಂ.168/1 ರಲ್ಲಿ ಬಡಾವಣೆಯನ್ನು ನಿರ್ಮಿಸಿರುತ್ತಾರೆ. ಸದರಿಯವರ ಕಡೆಯವರೆಂದು ಹೇಳಿಕೊಂಡು ಕರಿನಂಜನಪುರದ ಶಿವಕುಮಾರ್ ಎಂಬುವವರ ಮಗ ಕಿರಣ್ ಮಾ.8 ರಂದು ರಸ್ತೆಗೆ ಅಡ್ಡಲಾಗಿ ಜೆ.ಸಿ.ಬಿ. ಯಿಂದ ಹಳ್ಳಮಾಡಿಸಿ, ರಸ್ತೆ ಸಾಕಮ್ಮ ಬಡಾವಣೆಯ ಭಾಗವೆಂದು, ಗಲಾಟೆ ಮಾಡಿ, ಸಾರ್ವಜನಿಕರ ರಸ್ತೆಯನ್ನು ಉಪಯೋಗಿಸದಂತೆ ತಡೆದುದಲ್ಲದೇ, ರಸ್ತೆ ಕಾಮಗಾರಿಗೆ ಅಡ್ಡಿಪಡಿಸಿರುತ್ತಾರೆ.

## ಜಿಲ್ಲೆ ಮೈಸೂರು ಹಕ್ಕಿಜ್ವರ ಭೀತಿ: ಮೃಗಾಲಯದಲ್ಲಿ ಕಟ್ಟೆಚ್ಚರ

### ಮೃಗಾಲಯದಲ್ಲಿರುವ ಪ್ರಾಣಿ ಪಕ್ಷಿಗಳಿಗೆ ಯಾವುದೇ ತೊಂದರೆ ಆಗದಂತೆ ಮುನ್ನೆಚ್ಚರಿಕೆ

• ಉದಯವಾಹಿನಿ, ಮೈಸೂರು

ರಾಜ್ಯದ ಕೆಲವೆಡೆ ಹಕ್ಕಿಜ್ವರ ಕಾಣಿಸಿಕೊಂಡಿರುವ ಬೆನ್ನಲ್ಲೇ ಮೈಸೂರು ಜಿಲ್ಲೆಯಲ್ಲೂ ಕಟ್ಟೆಚ್ಚ ವಹಿಸಲಾಗಿದ್ದು, ವಿಶ್ವವಿಖ್ಯಾತ ಚಾಮರಾಜೇಂದ್ರ ಮೃಗಾಲಯದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.

ಬಳ್ಳಾರಿ, ರಾಯಚೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹಕ್ಕಿಜ್ವರ ಕಾಣಿಸಿಕೊಂಡಿದ್ದು, ಹಲವು ಕೋಳಿಗಳು ಮೃತಪಟ್ಟಿವೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಜಿಲ್ಲಾಡಳಿತ ಹೊರ ರಾಜ್ಯ ಮತ್ತು ಹೊರ ಜಿಲ್ಲೆಗಳಿಂದ ಕೋಳಿ ಆಮದು ಮಾಡಿಕೊಳ್ಳುತ್ತಿರುವುದರ ಮೇಲೆ ನಿಗಾ ಇರಿಸಿದೆ. ಜತೆಗೆ ತಪಾಸಣೆ ನಡೆಸಿ, ಹಕ್ಕಿ ಜ್ವರವನ್ನು ಖಾತ್ರಿ ಪಡಿಸಿಕೊಳ್ಳುತ್ತಿದೆ. ಈ ನಡುವೆ ಮೃಗಾಲಯದಲ್ಲಿರುವ ಪ್ರಾಣಿ ಪಕ್ಷಿಗಳಿಗೆ ಯಾವುದೇ ತೊಂದರೆ ಆಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ.

ಈ ಕುರಿತು ಮೃಗಾಲಯದ ಕಾರ್ಯ ನಿರ್ವಾಹಕ ನಿರ್ದೇಶಕ ರಂಗಸ್ವಾಮಿ ಮಾತನಾಡಿ, ಮೃಗಾಲಯದಲ್ಲಿರುವ ಪಕ್ಷಿ ಸಂಕುಲಕ್ಕೆ ಯಾವುದೇ ತೊಂದರೆ ಆಗದಂತೆ ತೀವ್ರ ನಿಗಾ ವಹಿಸಲಾಗಿದೆ. ಪ್ರಾಣಿ ಪಾಲಕರು ಒಂದು ಪಕ್ಷಿ ಮನೆಯಿಂದ ಇನ್ನೊಂದು ಮನೆಗೆ ಹೋಗುವಂತಿಲ್ಲ. ಪ್ರವೇಶ ದ್ವಾರದಲ್ಲೇ ಫುಟ್ ಟಿಬ್ಸ್ ಅಳವಡಿಸಿದ್ದೇವೆ. ಅದರಲ್ಲಿ ಕಾಲನ್ನು ಅದ್ದಿ ಜನ ಬರಬೇಕು. ಕೆಲಸ ಮಾಡುವವರು ಕಡ್ಡಾಯವಾಗಿ ಮಾಸ್ಕ್ ಹ್ಯಾಂಡ್ ಗ್ಲೌಸ್ ಹಾಕೊಳ್ಳಲು ಸೂಚಿಸಿದ್ದೇವೆ. ಪಕ್ಷಿಗಳ ಇಕ್ಕೆಗಳನ್ನು ಸಂಗ್ರಹಿಸಿ ಪ್ರಯೋಗ ಶಾಲೆಗೆ ಕಳಿಸಿಕೊಡಲಾಗಿದೆ. ನಮ್ಮಲ್ಲಿ ಅಂತಹ ಪ್ರಕರಣಗಳು ಇಲ್ಲಿವರೆಗೂ ಕಂಡು ಬಂದಿಲ್ಲ. ಮಾಂಸಾಹಾರಿ ಪ್ರಾಣಿಗಳಿಗೆ ತರುವ ಚಿಕನ್ ಮಾಂಸವನ್ನು



ಉದಯವಾಹಿನಿ ಚಿತ್ರ

### ಜಾಗೃತ ತಂಡ ರಚನೆ

**ಹಕ್ಕಿಜ್ವರ ತಡೆಗಟ್ಟಲು ಮುಂಜಾಗ್ರತ ಕ್ರಮವಾಗಿ ಪಶು ಸಂಗೋಪನಾ ಇಲಾಖೆ ವತಿಯಿಂದ ಜಾಗೃತ ತಂಡ ರಚನೆ ಮಾಡಲಾಗಿದ್ದು, ಕೋಳಿ ಸಾಕಣೆದಾರರಿಗೆ ಅರಿವು ಮೂಡಿಸುವ ಕೆಲಸ ಮಾಡುತ್ತಿದೆ. ಪ್ರತಿ ಕೋಳಿ ಸಾಕಣೆ ಕೇಂದ್ರಗಳು, ರೈತರ ಮನೆಗಳು, ಗ್ರಾಮಗಳಿಗೆ ಭೇಟಿ ನೀಡಿ ಕರಪತ್ರ ಹಂಚಿಕೆ ಮಾಡಿ ಮುನ್ನೆಚ್ಚರಿಕಾ ಕ್ರಮ ವಹಿಸುವಂತೆ ಜಾಗೃತಿ ಮೂಡಿಸಲಾಗುತ್ತಿದೆ.**


ಪೊಟಾಷಿಯಂ ಪರಮೋನ್ಸೈಟ್ ನಿಂದ ತೊಳೆದು ಕೊಡಲಾಗುತ್ತದೆ. ರೋಗಗ್ರಸ್ತ ಕೋಳಿ ಮಾಂಸವನ್ನು ಪ್ರಾಣಿಗಳಿಗೆ ಕೊಡುವುದಿಲ್ಲ. ನಮ್ಮಲ್ಲಿರುವ ಪಕ್ಷಿಗಳಿಗೆ ಯಾವುದೇ ರೋಗ ರುಜಿನಗಳು ಕಂಡು ಬಂದಿಲ್ಲ ಎಂದು ತಿಳಿಸಿದರು.

### ಮಾಂಸ ಸೇವನೆಗೆ ಅಡ್ಡಿಯಿಲ್ಲ

**ಹಕ್ಕಿಜ್ವರ ಇದ್ದರೂ ಕೋಳಿ ಮಾಂಸ ಸೇವನೆಯಿಂದ ಹರಡುವುದಿಲ್ಲ. ಸೋಂಕು ಕಾಲಿಟ್ಟರೂ ಕೋಳಿ ಸಾಕಣೆ ಕೇಂದ್ರ ಮತ್ತು ಮಾಂಸ ಸಂಸ್ಕರಣೆ ಮಾಡುವವರಿಗೆ ಮಾತ್ರ ತಗಲುತ್ತದೆ. ಈ ಸೋಂಕು ಮನುಷ್ಯನಿಂದ ಮನುಷ್ಯನಿಗೆ ಹರಡುವುದಿಲ್ಲ. ಹಕ್ಕಿಗಳಿಂದ ಮಾತ್ರ ಹರಡುತ್ತದೆ. ಆದ್ದರಿಂದ ಯಾರೂ ಗಾಬರಿಯಾಗಬೇಕಾದ ಅಗತ್ಯವಿಲ್ಲ ಎಂದು ಪಶು ಸಂಗೋಪನಾ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.**

ಹಕ್ಕಿಗಳು ಅಥವಾ ಕೋಳಿಗಳು ಶಂಕಾಸ್ಪದವಾಗಿ ಸಾವಿಗೀಡಾಗಿರುವುದು ಕಂಡುಬಂದರೆ ತಕ್ಷಣ ಪಶುಸಂಗೋಪನಾ ಇಲಾಖೆಯ ಗಮನಕ್ಕೆ ತರಬೇಕು ಎಂದು ರೈತರಿಗೆ ತಿಳಿಸಲಾಗಿದೆ. ಹಕ್ಕಿಜ್ವರ ಹರಡುವುದರ ಕುರಿತು ಮತ್ತು ಅದನ್ನು ತಡೆಯುವ ಕ್ರಮಗಳ ಬಗ್ಗೆ ಪಶುವೈದ್ಯರು ರೈತರಿಗೆ ಮಾಹಿತಿ ನೀಡುತ್ತಾರೆ. ಕೋಳಿ ಸಾಕಣೆ ಕೇಂದ್ರ ಮತ್ತು ಮಾಂಸ ಸಂಸ್ಕರಣೆ ಘಟಕಗಳಲ್ಲಿ ಕೆಲಸ ಮಾಡುವವರಿಗೆ ಹಕ್ಕಿಜ್ವರದ ಸೋಂಕು ತಗಲುವ ಸಾಧ್ಯಾತೆ ಇರುವುದರಿಂದ ಎಚ್ಚರಿಕೆಯಿಂದಿರುವಂತೆ ಜಾಗೃತಿ ಮೂಡಿಸಲಾಗುತ್ತಿದೆ. ಜತೆಗೆ ಕೋಳಿ ಸಾಗಣೆ ಮಾಡುವ ವಾಹನಗಳಿಗೆ ನಂಜುನಾಶಕಗಳಿಂದ ಶುಚಿಗೊಳಿಸಲು ಸೂಚನೆ ನೀಡಲಾಗಿದೆ. ಈ ಬಗ್ಗೆ ವರದಿ ನೀಡಲು ತಿಳಿಸಲಾಗಿದೆ.

## ಅಂತರಾಳದಿಂದ.. EDITORIAL




# ಉರಿ ಬೇಸಿಗೆ ಎದುರಿಸಲು ಸರಕಾರ ಸಿದ್ಧವಾಗಲಿ

ಈ ಸಲದ ಬೇಸಿಗೆ ಹಿಂದಿನಂತಿರುವುದಿಲ್ಲ ಎಂಬುದು ಫೆಬ್ರವರಿ ತಿಂಗಳಲ್ಲೇ ಅನುಭವಕ್ಕೆ ಬಂದಿದೆ. ಅಸಹನೀಯ ಉರಿ ಬಿಸಿಲು ಹೀಗೆಯೇ ಮುಂದುವರಿದು ಮೇ ತಿಂಗಳ ಕೊನೆಯವರೆಗೆ ಇನ್ನಷ್ಟು ಉಗ್ರ ಸ್ವರೂಪ ತಾಳಲಿದೆ ಎಂದು ಹವಾಮಾನ ತಜ್ಞರು ಮುನ್ಸೂಚನೆ ನೀಡಿದ್ದಾರೆ. ಈ ಕಾಲಾವಧಿಯಲ್ಲಿ ಕೆಲವು ಕಡೆ ಬಿಸಿಗಾಳಿ ಬೀಸುವ ಸಂಭವವಿದೆ ಎಂದು ಪರಿಣಿತರು ತಿಳಿಸಿದ್ದಾರೆ.

1901ರ ಫೆಬ್ರವರಿ ನಂತರ ಈ ಸಲದ ಫೆಬ್ರವರಿ ತಿಂಗಳಿನ ಉರಿ ಬಿಸಿಲು ಅತಿ ಹೆಚ್ಚಿನದಾಗಿತ್ತೆಂದು ಹವಾಮಾನ ಇಲಾಖೆಯೂ ಹೇಳಿದೆ. ಈಗಾಗಲೇ ಕಲಬುರಗಿ ಸೇರಿದಂತೆ ಉತ್ತರ ಕರ್ನಾಟಕದ ಬಹುತೇಕ ಕಡೆ ತಾಪಮಾನ ಹಿಂದಿಗಿಂತ ಹೆಚ್ಚಾಗಿದೆ. ಇದು ಮಾರ್ಚ್ ಕೊನೆಯ ನಂತರ ಇನ್ನಷ್ಟು ಪ್ರಖರವಾಗಲಿದೆ ಎಂದು ಸದರಿ ಪರಿಣಿತರು ಎಚ್ಚರಿಸಿದ್ದಾರೆ. ಒಟ್ಟಾರೆ ಮುಂದಿನ ಮೂರು ತಿಂಗಳ ಕಾಲಾವಧಿಯಲ್ಲಿ ಕನಿಷ್ಠ ಹಾಗೂ ಗರಿಷ್ಠ ತಾಪಮಾನ ಹಿಂದಿನಂತೆ ಇರುವುದಿಲ್ಲ. ಇದರಿಂದ ದೇಶದ ಅರ್ಥ ವ್ಯವಸ್ಥೆಯ ಮೇಲೆ ಕೂಡ ದುಷ್ಪರಿಣಾಮ ಉಂಟಾಗಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಜನಸಾಮಾನ್ಯರ ದೈನಂದಿನ ಬದುಕು ವಿಶೇಷವಾಗಿ ಆರೋಗ್ಯ ಪರಿಸ್ಥಿತಿಯಲ್ಲಿ ಅಸ್ತವ್ಯಸ್ತ ಉಂಟಾಗುವ ಸಾಧ್ಯತೆ ಇದೆ.ಈ ಸಲದ ಬೇಸಿಗೆಯಲ್ಲಿ ಬಿಸಿಗಾಳಿಯ ಪರಿಣಾಮವಾಗಿ ಜನರ ಆರೋಗ್ಯದ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಉಂಟಾಗುವ ಸಂಭವವಿದೆ ಎಂದು ಆರೋಗ್ಯ ಇಲಾಖೆ ಈಗಾಗಲೇ ಎಚ್ಚರಿಕೆ ನೀಡಿದೆ. ದಕ್ಷಿಣ ಕನ್ನಡ ಸೇರಿದಂತೆ ಕೆಲವು ಕಡೆ ಫೆಬ್ರವರಿ ತಿಂಗಳಲ್ಲೇ ಉಷ್ಣತಾಪಮಾನ 41 ಡಿಗ್ರಿ ಸೆಲ್ಸಿಯಸ್ ದಾಟಿತ್ತು.

ಅರಣ್ಯದೊಳಗಿನ ನದಿ ತೊರೆಗಳು ಬತ್ತಿ ಹೋಗುತ್ತಿವೆ. ನೀರಿನ ಅಭಾವದಿಂದಾಗಿ ಕಾಡಿನಲ್ಲಿ ಇರುವ ಪ್ರಾಣಿಗಳು ಯಾತನೆ ಅನುಭವಿಸುತ್ತಿವೆ. ವಾತಾವರಣದಲ್ಲಿ ಉಷ್ಣಾಂಶ ಒಮ್ಮಿಂದೊಮ್ಮೆಲೆ 2ರಿಂದ 3 ಡಿಗ್ರಿ ಜಾಸ್ತಿಯಾದಾಗ ಕಾಡುಪ್ರಾಣಿಗಳು, ಪಶು ಪಕ್ಷಿಗಳು ನಿರ್ಜಲೀಕರಣದಿಂದ ತತ್ತರಿಸಿ ಹೋಗುತ್ತವೆ. ಉರಿ ಬಿಸಿಲಿನಿಂದ ಆಘಾತಕ್ಕೊಳಗಾದ ಪ್ರಾಣಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ವನ್ಯ ಜೀವಿ ವೈದ್ಯಕೀಯ ಮೂಲಗಳು ತಿಳಿಸಿವೆ.ಇಷ್ಟು ವರ್ಷ ಬೇಸಿಗೆಯ ಆರಂಭಕ್ಕೆ ಮುನ್ನವೇ ಇಷ್ಟೊಂದು ಸಂಖ್ಯೆಯಲ್ಲಿ ಪ್ರಾಣಿ, ಪಕ್ಷಿಗಳು ಇಂಥ ಸಮಸ್ಯೆಯನ್ನು ಎದುರಿಸಿರಲಿಲ್ಲ ಎಂದು ವನ್ಯಜೀವಿ ವೈದ್ಯರು ಕಳವಳದಿಂದ ಹೇಳುತ್ತಾರೆ. ಅರಣ್ಯ ಇಲಾಖೆಯೇನೋ ಪ್ರಾಣಿಗಳಿಗೆ ತೊಂದರೆಯಾಗಬಾರದೆಂದು ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ. ರಕ್ಷಿತಾರಣ್ಯದಲ್ಲಿ ಕೆರೆ ಮತ್ತು ನೀರಿನ ಹೊಂಡಗಳನ್ನು ನಿರ್ಮಿಸಲಾಗಿದೆ. ತೊರೆಗಳ ನೀರನ್ನು ಸಂಗ್ರಹಿಸಿ ಬೇಸಿಗೆಯಲ್ಲೂ ಅಭಾವ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಆದರೂ ಸೆಕೆ ತಾಳದೇ ಹುಲಿ, ಚಿರತೆಗಳ ಸಹಿತ ಸಕಲ ಪ್ರಾಣಿಗಳು ಜನವಸತಿ ಪ್ರದೇಶಗಳಿಗೆ ಬರುತ್ತಿವೆ. ಈ ಸಲವಂತೂ ಪಶ್ಚಿಮ ಘಟ್ಟದಲ್ಲಿ ಹಾಗೂ ಅದರ ತಪ್ಪಲು ಪ್ರದೇಶದಲ್ಲಿ ಇರುವ ನದಿ ತೊರೆಗಳಲ್ಲಿ ನೀರಿನ ಕೊರತೆಯಾಗಬಹುದೆಂಬ ಆತಂಕವೂ ಎದುರಾಗಿದೆ. ಡಿಸೆಂಬರ್ ಕೊನೆಯ ತನಕ ಚೆನ್ನಾಗಿ ಮಳೆಯಾಗಿರುವುದರಿಂದ ಘಟ್ಟ ಪ್ರದೇಶದ ನದಿ ತೊರೆಗಳಲ್ಲಿ ಮಾರ್ಚ್ ಕೊನೆಯವರೆಗೆ ನೀರು ಕೊರತೆಯಾಗುವುದಿಲ್ಲ ಎಂದು ಅರಣ್ಯ ಇಲಾಖೆಯ ಸಂರಕ್ಷಣಾಧಿಕಾರಿಗಳು ಭಾವಿಸಿದ್ದರು. ಆದರೆ ಬಹುತೇಕ ತೊರೆಗಳು ಫೆಬ್ರವರಿ ಕೊನೆಯಲ್ಲೇ ಬತ್ತಿ ಹೋಗಿವೆ. ಹೀಗಾಗಿ ಪರಿಸ್ಥಿತಿ ಕಳವಳಕಾರಿಯಾಗಿದೆ.ಈ ಸಲದ ಬೇಸಿಗೆ ಮತ್ತು ಬಿಸಿಗಾಳಿಯಿಂದ ಜನರ ಮತ್ತು ಪ್ರಾಣಿಗಳ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟು ಮಾಡುವುದೆಂಬುದನ್ನು ಭಾರತೀಯ ಹವಾಮಾನ ಇಲಾಖೆ ವಿವರವಾಗಿ ಈಗಾಗಲೇ ತಿಳಿಸಿರುವುದರಿಂದ ಹವಾಮಾನದ ವೈಪರೀತ್ಯ ಹಾಗೂ ಬಿಸಿಗಾಳಿಯ ದುಷ್ಪರಿಣಾಮವನ್ನು ನಿಭಾಯಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಈಗಿನಿಂದಲೇ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ರಾಜಕಾರಣಿಗಳು ಪರಸ್ಪರ ಕೆಸರೆರಚಾಟವನ್ನು ನಿಲ್ಲಿಸಿ ಸಾರ್ವಜನಿಕ ಆಸ್ಪತ್ರೆಗಳನ್ನು ಇನ್ನಷ್ಟು ಸುಸಜ್ಜಿತಗೊಳಿಸಲು ಶ್ರಮಿಸಬೇಕು. ಬೇಸಿಗೆಯ ಅವಧಿಯಲ್ಲಿ ನೀರು ಮತ್ತು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಸಂಭವವೂ ಇದೆ. ಅದನ್ನು ಎದುರಿಸಲು ಸರಕಾರ ಈಗಿನಿಂದಲೇ ತಯಾರಿ ಮಾಡಿಕೊಳ್ಳುವುದು ಅಗತ್ಯ ಇತ್ತೀಚೆಗೆ ಹವಾಮಾನದ ನಿಖರವಾದ ವರದಿ, ವಿಶ್ಲೇಷಣೆಗಳು ಬರುತ್ತಲೇ ಇಲ್ಲ. ಹವಾಮಾನದಲ್ಲಿ ಊಹಿಸಲಾಗದಷ್ಟು ಬದಲಾವಣೆಯಾಗಿರುವುದರಿಂದ ಸಂಬಂಧಿತ ಇಲಾಖೆಗೆ ಅಂದಾಜು ಮಾಡುವುದೂ ಕಷ್ಟಕರವೆನ್ನಲಾಗುತ್ತಿದೆ. ಒಂದೇ ಭೂ ಪ್ರದೇಶದ ಅಕ್ಕಪಕ್ಕಗಳಲ್ಲೇ ಒಂದೆಡೆ ವಿಪರೀತ ಮಳೆ ಇನ್ನೊಂದೆಡೆ ಅಸಹನೀಯವಾದ ಬಿಸಿಲನ್ನು ನೋಡುತ್ತಿದ್ದೇವೆ. ಇದರ ಬಗ್ಗೆ ಸಾರ್ವಜನಿಕರಿಗೆ ಖಚಿತ ವೈಜ್ಞಾನಿಕ ಮಾಹಿತಿ ನೀಡಲು ಸರಕಾರ ಈಗಲೇ ಕಾರ್ಯೋನ್ಮುಖವಾಗಬೇಕಾಗಿದೆ. ಮಾರ್ಚ್ ತಿಂಗಳಿನಿಂದ ಬೇಸಿಗೆ ತೀವ್ರವಾಗುತ್ತಿದ್ದಂತೆ ಎಲ್ಲಾ ಕಡೆ ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಉಂಟಾಗುವ ಸೂಚನೆಗಳು ಕಂಡು ಬರುತ್ತಿವೆ. ಹಾಗಾಗಿ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಸರಕಾರ ಮುಂಜಾಗ್ರತಾ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕು. ಆರೋಗ್ಯ ಸಮಸ್ಯೆ ಉಲ್ಬಣಿಸದಂತೆ ಸರಕಾರಿ ಆಸ್ಪತ್ರೆಗಳನ್ನು ಸಜ್ಜುಗೊಳಿಸಬೇಕು. ಜನಪ್ರತಿನಿಧಿಗಳು ಜನರ ಬಳಿ ಹೋಗಿ ಅವರ ಸಮಸ್ಯೆಯನ್ನು ಸಂಗ್ರಹಿಸಿ ಸರಕಾರದ ಮೇಲೆ ಒತ್ತಡ ತರಬೇಕು.ಅಧಿಕಾರದಲ್ಲಿ ಇರುವವರೂ ಮತ್ತು ಪ್ರತಿಪಕ್ಷದ ಜನಪ್ರತಿನಿಧಿಗಳು ಇಂಥ ಸಂದರ್ಭದಲ್ಲಿ ಒಂದುಗೂಡಿ ಕೆಲಸ ಮಾಡುವುದು ಅನಿವಾರ್ಯವಾಗಿದೆ.



# ರಾಮಾಯಣ

## ಶ್ರೀರಾಮನು ಕೌಸಲ್ಯಾದೇವಿಗೂ ಲಕ್ಷ್ಮಣನಿಗೂ ಸಮಾಧಾನ ಹೇಳುವುದು

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ತನಗೆ ದ್ರೋಹವನ್ನು ಮಾಡಿದ ತಂದೆಯಲ್ಲಿ ದೋಷಾರೋಪಣವನ್ನು ಮಾಡುವವನಲ್ಲ. ತ್ರಿಲೋಕದಲ್ಲಿ ಸಾಕ್ಷಾತ್ ದೇವತಾಸ್ವರೂಪನೂ ಶಾಂಕಗುಣಸಂಪನ್ನನೂ ಋಜುಮಾರ್ಗವುಳ್ಳವನ ಶತ್ರುಗಳಲ್ಲಿಯೂ ಕೃಪೆಯುಳ್ಳವನೂ ಆದವನು ಶ್ರೀರಾಮವನ್ನು ಬಿಟ್ಟರೆ ಮತ್ತೊಬ್ಬನಿಲ್ಲ. ವೃದ್ಧನಾಗಿಯೂ ಬಾಲ್ಯಭಾವವನ್ನನುಸರಿಸಿ ನುಡಿಯುವ ಇಂಥ ಕರ್ಣಕಠೋರವಾದ ಮಾತನ್ನು ರಾಜನೀತಿಯನ್ನು ಬಲ್ಲವರು ಯಾರು ಸಹಿಸುವರು ದಶರಥರಾಯನು ಈ ದುರ್ಬುದ್ಧಿಯನ್ನು ಕಳೆದುಕೊಂಡು ಧರ್ಮರಹಸ್ಯವನ್ನು ಸ್ಮರಿಸುವವರೆಗೆ ತ್ರಿರಾಮನು ನನ್ನ ಸಂಗಡ ರಾಜ್ಯಭಾರವನ್ನು ವಹಿಸಲಿ! ನಾನು ಬಿಲ್ಲನ್ನು ಹಿಡಿದು ಆತನ ಸಹಾಸದಲ್ಲಿ ಸಹಾಯವಾಗಿದ್ದರೆ ನಮಗೆ ಎದುರಾಗಿ ಯಾರೂ ನಿಲ್ಲರು. ಆತನು ಪರಬಲನು, ದಕ್ಷಿಣದಿಕ್ಪಾಲಕನಿಗೆ ಸಮನಾದವನು ಅಯೋಧ್ಯಾಪಟ್ಟಣದವರು ಭರತನಿಗೆ ಸಹಾಯರಾಗಿಯೂ ತಮಗೆ ಪ್ರತಿಪಕ್ಷದವರಾಗಿಯೂ ಇದ್ದರೆ ಈ ಪಟ್ಟಣವೆಲ್ಲವನ್ನೂ ನಿನುಡನಾಗುಸ್ತಾದ ನನ್ನ ಕೂರಂಬುಗಳಿಂದ ಎಲ್ಲರನ್ನೂ ಸಂಹರಿಸುತ್ತೇನೆ. ದೇಶಾಂತರಗಳಲ್ಲಿಯಾದರೂ ಭರತನ ಪಕ್ಷವನ್ನು ವಹಿಸಿ ಈತನಿಗೆ ಅಹಿತವನ್ನು ಚಿಂತಿಸುವವರಿದ್ದರೆ ಅವರೆಲ್ಲರನ್ನೂ ಕ್ಷಣಮಾತ್ರದಲ್ಲಿ ಸಂಹರಿಸುತ್ತೇನೆ. ಈತನ ಕ್ಷಮೆಯು ನನ್ನ ಕೋಪೋದ್ರೇಕವನ್ನು ಕಡೆನಡೆಯಲ್ಲದೆ ಮತ್ತೊಂದಲ್ಲ. ಸಮಸ್ತ ರಾಜ್ಯಾಧಿಪತ್ಯವೂ ಈತನ ಕೈವಶವಾಗಿದೆ. ಕೈ ಕೇಯಾದೇವಿಯಿಂದ ವತರಥರಾಹುನು ಮರುಳಾಗಿ ನಮ್ಮೊಡನೆ ವೈರವನ್ನು ಮಾಡಿಕೊಂಡು ಭರತನಿಗೆ ರಾಜ್ಯಾಧಿಪಕ್ಕವನ್ನು ಕೊಡುವುದಕ್ಕೆ ಸಮರ್ಥನೆ ನಾನು ಅಣ್ಣನಾದ ಶ್ರೀರಾಮನಲ್ಲಿ ಅಂತಃಕರಣಶುದ್ಧವಾಗಿ ಅನುಕೂಲನಾಗಿದ್ದೇನೆ. ಈ ವಿಷಯದಲ್ಲಿ ನನ್ನ ಸತ್ಯವೂ ನನ್ನ ಧನುಷ್ಯ ನಾನು ಮಾಡಿದ ದಾನಧರ್ಮಗಳೂ ಶ್ರೀರಾಮನೂ ಸಾಕ್ಷಿ. ಶ್ರೀರಾಮನು ಅರಣ್ಯಕ್ಕೆ ಹೋದರೂ ಅಗ್ನಿ ಪ್ರವೇಶಮಾಡಿದರೂ ಆತನಿಗೆ ಮೊದಲೇ ನಾನು ಪ್ರವೇಶಿಸುವೆನು ! ಅಮ್ಮ, ಪ್ರಕಾಶಮಾನನಾದ ಸೂರ್ಯನು ಕತ್ತರೆಯ ಹೋಗಲಾಡಿಸುವಹಾಗೆ ನನ್ನ ಪರಾಕ್ರಮದಿಂದ ನಿನ್ನ ದುಃಖವನ್ನು ಹೋಗಲಾಡಿಸುತ್ತೇನೆ. ನನ್ನ ಪರಾಕ್ರಮವನ್ನು ನೀನು ನೋಡು : ಶ್ರೀರಾಮನೂ ನೋಡಲಿ. ವೃದ್ಧನಾದರೂ ಮಕ್ಕಳಂತೆ ಅಸ್ಥಿರಚಿತ್ತನಾಗಿ ಕೈಕೇಯಾದೇವಿಯ ವಾರ್ತೆಗೆ ಮರುಳಾದ ದಶರಥರಾಯನನ್ನು ಈಗಲೇ ಕೊಲ್ಲುತ್ತೇನೆ! ಎಂದು ನುಡಿದನು. ಲಕ್ಷ್ಮಣನ ಮಾತನ್ನು ಕೇಳಿ ಕೌಸಲ್ಯಾದೇವಿಯು ಶೋಕಾಗ್ನಿಯಿಂದ ಪರಿತಪಿಸಿ ಅಳುತ್ತ ಶ್ರೀರಾಮನನ್ನು ಕುರಿತು ಶ್ರೀರಾಮ, ನಿನ್ನ ಒಡಹುಟ್ಟಿದವನಾದ ಲಕ್ಷ್ಮಣನು ಆಡಿದ ಮಾತನ್ನು ಕೇಳಿದೆಯಾ ಇನ್ನು ನಿನ್ನ ಮನಸ್ಸಿಗೆ ಬಂದಂತೆ ಮಾಡು. ನನ್ನ ಸವತಿಯಾದ ಕೈಕೇಯಾದೇವಿಯ ಮಾತನ್ನು ಕೇಳಿ ಭ್ರಮೆಗೊಂಡು ನನ್ನನ್ನು ಶೋಕಾಗ್ನಿಜ್ವಾಲೆಗೆ ಗುರಿಮಾಡಿ ವನಕ್ಕೆ ಹೋಗಬೇಡ. ಧರ್ಮರಹಸ್ಯವನ್ನು ಬಲ್ಲ ಧರ್ಮಿಷ್ಟನಾದ ಪಕ್ಷದಲ್ಲಿ ಧರ್ಮವೇ ಶರಣೆಂದು ನನ್ನ ಸಮೀಪದಲ್ಲಿದ್ದು ಕೊಂಡು ನನ್ನ ಸೇವಾಸತ್ಕಾರಗಳನ್ನು ಮಾಡು, ಪೂರ್ವದಲ್ಲಿ ಕಶ್ಯಪನು ತನ್ನ ಮನೆಯಲ್ಲಿ ನಿಯಮಸ್ಥನಾಗಿ ತನ್ನ ತಾಯಿಯ ಸೇವೆಯನ್ನು ಮಾಡಿಕೊಂಡಿದ್ದು ಮಾತೃಸೇವೆಯ ಬಲದಿಂದ ಸ್ವರ್ಗವನ್ನೈದಿದನು.

ಮುಂದುವರಿಯುವುದು...

---

# ಭರವಸೆಯ ಕಲಾಪ್ರತಿಭೆ ಕು. ಕೀರ್ತನಾ ಶಶಿಕುಮಾರ್ ರಂಗಪ್ರವೇಶ



ಕಲಾ ಸಾಹಿತ್ಯ

ವೈ.ಕೆ. ಸಂಧ್ಯಾಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

ಖ್ಯಾತ ಉಷಾಸ್ ಫೌಂಡೇಶನ್ ' ನೃತ್ಯಸಂಸ್ಥೆಯ ಕಲಾತ್ಮಕ ನಿರ್ದೇಶಕಿ, ಗುರು ಕಲೈಮಾಮಣಿ ಡಾ. ಸಂಗೀತಾ ಕಪಿಲನ್ ಅವರ ನುರಿತ ಗರಡಿಯಲ್ಲಿ ರೂಪುಗೊಂಡ ನೃತ್ಯ ಕಲಾಶಿಲ್ಪ ಕು. ಕೀರ್ತನಾ ಶಶಿಕುಮಾರ್ ಭರವಸೆಯ ಉದಯೋನ್ಮುಖ ನೃತ್ಯಕಲಾವಿದೆ. ಪರಿಣತ ಅಭಿನಯ- ಹರಿತ ನೃತ್ತ ಪಾಂಡಿತ್ಯದಲ್ಲಿ ಪಂದನಲ್ಲೂರು ಬಾನಿಯಲ್ಲಿ ಹೆಸರು ಮಾಡಿರುವ ಗುರು ಸಂಗೀತಾ ಅವರ ಸಮರ್ಥ ಮಾರ್ಗದರ್ಶನದಲ್ಲಿ, ನೃತ್ಯ ಸಂಯೋಜನೆಯಲ್ಲಿ ಕೀರ್ತನ, ತನ್ನ ನೃತ್ಯದ ಆಯಾಮಗಳನ್ನು ವೈವಿಧ್ಯಗೊಳಿಸಿಕೊಳ್ಳುತ್ತ ನಾಡಿನಾದ್ಯಂತ ಅನೇಕ ನೃತ್ಯ ಪ್ರದರ್ಶನಗಳನ್ನು ನೀಡಿ ಕಲಾರಸಿಕರ ಮೆಚ್ಚುಗೆ ಗಳಿಸಿದ್ದಾಳೆ. ಶ್ರೀ ಶಶಿಕುಮಾರ್ ಮತ್ತು ಹರಿಪ್ರಿಯ ಅವರ ಪುತ್ರಿಯಾದ ಇವಳು, ಕಳೆದ ಹದಿಮೂರು ವರ್ಷಗಳಿಂದ ಅತ್ಯಂತ ಪರಿಶ್ರಮ-ನಿಷ್ಠೆಯಿಂದ ಭರತನಾಟ್ಯಾಭ್ಯಾಸ ನೃತ್ಯಾಭ್ಯಾಸ ಮಾಡುತ್ತಿದ್ದಾಳೆ. ವೈದೇಹಿ ಕಾಲೇಜಿನಲ್ಲಿ ದಂತ ವೈದ್ಯಕೀಯ ವಿದ್ಯಾಭ್ಯಾಸವನ್ನು ಮಾಡುತ್ತಿರುವ ಕೀರ್ತನ, ಉತ್ತಮ ವಿದ್ಯಾರ್ಥಿನಿಯಾಗಿದ್ದು, ಬಹುಮುಖ ಪ್ರತಿಭೆಯನ್ನು ಹೊಂದಿರುವುದು ಅವಳ ವಿಶೇಷ. ಇದೀಗ ಅವಳು ತನ್ನ ನೃತ್ಯಪ್ರತಿಭಾ ಪ್ರದರ್ಶನ ಮಾಡಲು ಸಜ್ಜಾಗಿದ್ದಾಳೆ. ಇದೇ ತಿಂಗಳ 16 ಭಾನುವಾರದಂದು ವಯ್ಯಾಲಿಕಾವಲ್ಲಿನ ಶ್ರೀ ಕೃಷ್ಣದೇವರಾಯ ಕಲಾಮಂದಿರದಲ್ಲಿ ಸಂಜೆ 6 ಗಂಟೆಗೆ ತನ್ನ ನೃತ್ಯದ ಕಲಾಸೊಬಗನ್ನು ಪ್ರದರ್ಶಿಸಲು, ವಿದ್ಯುಕ್ತವಾಗಿ ರಂಗಪ್ರವೇಶ ಮಾಡುತ್ತಿದ್ದಾಳೆ. ಆಕೆಯ ನೃತ್ಯ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ಎಲ್ಲಾ ಕಲಾರಸಿಕರಿಗೂ ಆದರದ ಸುಸ್ವಾಗತ. ಕು. ಕೀರ್ತನಾಳಿಗೆ ಚಿಕ್ಕಂದಿನಿಂದ ನೃತ್ಯ ಮಾಡುವುದು ಎಂದರೆ ತುಂಬಾ ಇಷ್ಟ- ಒಲವು.

ಬಾಲಪ್ರತಿಭೆಯಾದ ಆರುವರ್ಷದ ಮಗಳ ಹೆಜ್ಜೆಗಳ ತಾಳ-ಲಯಜ್ಞಾನ ಹಾಗೂ ಅವಳ ನೃತ್ಯ ಪ್ರತಿಭೆಯನ್ನು ಗುರುತಿಸಿದ ಹೆತ್ತವರು, ಅವಳ ಪ್ರತಿಭಾ ಪೋಷಣೆಗೆ ಮುಂದಾದರು. ಶಾಸ್ತ್ರೀಯವಾಗಿ ಭರತನಾಟ್ಯವನ್ನು ಕಲಿಯಲು ನೃತ್ಯಗುರು ಸಂಧ್ಯಾ ಅವರಲ್ಲಿ ಸೇರ್ಪಡೆಗೊಳಿಸಿದರು.

ಮುಂದೆ- ಪ್ರಸಿದ್ಧ ಗುರುಗಳಾದ ಡಾ. ಸಂಗೀತಾ ಕಪಿಲನ್ ಅವರಲ್ಲಿ ಭರತನಾಟ್ಯ ಕಲಿಕೆ ಮುಂದುವರೆಸಿದಳು.

ಅಲ್ಲಿಂದ ಕೀರ್ತನಳಿಗೆ ಕ್ರಮಬದ್ಧ ಉತ್ತಮ ನೃತ್ಯಶಿಕ್ಷಣ ದೊರೆಯತೊಡಗಿತು.

**ಬಹುಮುಖ ಪ್ರತಿಭೆಯ ನೃತ್ಯಾವರಣ**

ಅವಳೂ ಅಷ್ಟೇ ಆಸಕ್ತಿ- ಆರಾಧನಾ ಮನೋಭಾವದಿಂದ ನೃತ್ಯಾರ್ಜನೆ ಮಾಡಿಕೊಳ್ಳತೊಡಗಿದಳು. ಕಳೆದ ಎಂಟು ವರ್ಷಗಳಿಂದ ಏಕಗುರು ನಿಷ್ಠೆಯಲ್ಲಿ ಸಂಗೀತಾ ಅವರ ಬಳಿಯೇ ಪಂದನಲ್ಲೂರು ಶೈಲಿಯ ಭರತನಾಟ್ಯವನ್ನು ಅತ್ಯಂತ ಆಸಕ್ತಿ-ಪರಿಶ್ರಮಗಳಿಂದ ಕಲಿಯುತ್ತ 'ಉಷಾಸ್ ಫೌಂಡೇಶನ್' ನೃತ್ಯಶಾಲೆಯ ಎಲ್ಲಾ ಕಾರ್ಯಕ್ರಮಗಳಲ್ಲಿ, ನಾಡಿನ ಅನೇಕ ವೇದಿಕೆಗಳ ಮೇಲೆ ನರ್ತಿಸಿದ್ದಾಳೆ ಕೀರ್ತನಾ . ಬೆಂಗಳೂರಿನ ಗ್ಲೋಬಲ್ ಸಿಟಿ ಇಂಟರ್ನ್ಯಾಷನಲ್ ಶಾಲೆಯಲ್ಲಿ ಓದಿದ ಕೀರ್ತನಾ ಓದಿನಲ್ಲಿ ಚುರುಕಾಗಿದ್ದಷ್ಟೇ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಮುಂದು.

ಚಿತ್ರಕಲೆಯನ್ನು ರೂಢಿಸಿಕೊಂಡಿರುವ ಕೀರ್ತನಾಗೆ ಓದುವುದು ಮತ್ತು ಪ್ರವಾಸ ಮಾಡುವುದೆಂದರೆ ಬಲು ಪ್ರೀತಿ. ಪ್ರಸ್ತುತ ವೈದೇಹಿ ಡೆಂಟಲ್ ಕಾಲೇಜಿನಲ್ಲಿ ದಂತ ವೈದ್ಯಕೀಯ ವಿಜ್ಞಾನದ ಮೊದಲ ವರ್ಷದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಳೆ. ತಾನು ನೃತ್ಯ ಕಲಿಯುತ್ತಿರುವ 'ಉಷಾಸ್ ಫೌಂಡೇಶನ್' ನ ವಿವಿಧ ನೃತ್ಯ ಪ್ರದರ್ಶನ ಕಾರ್ಯಕ್ರಮದ ಸಂದರ್ಭದಲ್ಲಿ ಕೀರ್ತನಳಿಗೆ ವಿಪುಲ ಅವಕಾಶಗಳು ದೊರೆತಿವೆ. ವಿವಿಧ ರಾಜ್ಯಗಳಲ್ಲಿ ನಾಟ್ಯಾಂಜಲಿ ನೃತ್ಯೋತ್ಸವಗಳು, ದೆಹಲಿ ಕರ್ನಾಟಕ ಸಂಘದ ರಾಜ್ಯೋತ್ಸವ ಸಮಾರಂಭ, ಗಂಗೋತ್ರಿ ಪೀಠ-ತಿರುನೆಲ್ವೇಲಿ, ಕೇರಳಾ, ಇಸ್ಕಾನ್ ಮುಂತಾದೆಡೆ ಅನೇಕ ದೇವಾಲಯಗಳ ದೈವೀಕ ಸನ್ನಿಧಿಯಲ್ಲಿ ನೃತ್ಯ ಪ್ರದರ್ಶನ , ನವರಾತ್ರಿ, ವಾಲ್ಮೀಕಿ ಜಯಂತಿ- ಮುಂತಾದ ನೃತ್ಯೋತ್ಸವಗಳಲ್ಲಿ ನೃತ್ಯಾರ್ಪಣೆ ಮಾಡಿರುವ ಕೀರ್ತನಾ ತನ್ನ ಕಲಾ ಪ್ರತಿಭೆಯ ಪ್ರದರ್ಶನ ಮಾಡಿ ಕಲಾರಸಿಕರಿಂದ ಮನ್ನಣೆ-ಮೆಚ್ಚುಗೆ ಗಳಿಸಿದ್ದಾಳೆ. ಇದೇ ರೀತಿ ನೃತ್ಯ ಪಯಣವನ್ನು ಬದ್ಧತೆಯಿಂದ ಮುಂದುವರೆಸುತ್ತ ವಿಶಿಷ್ಟ ಸಾಧನೆ ಮಾಡುವ ಕನಸು ಅವಳದು.

---

# ಸ್ಫೂರ್ತಿ ಸೌರಭ


ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ






ಶ್ರೀ ಧನಂಜಯ ಪಾಂಡವಪುರ ಶಿಕ್ಷಕ ಸಾಹಿತಿ. ರಚನೆಯ 'ಚಿಣ್ಣರ ಸೌರಭ'ವು ಮಕ್ಕಳ ಆಸಕ್ತಿ ಅಭಿರುಚಿ ಮನಸ್ಥಿತಿಯನ್ನು ಅರಿತಿರುವ ಒಬ್ಬ ಕ್ರಿಯಾಶೀಲ ಶಿಕ್ಷಕ ತನ್ನ ವೃತ್ತಿಗೆ ಮಕ್ಕಳ ಕಲಿಕಾ ಪ್ರಕ್ರಿಯೆಗೆ ಪೂರಕವಾಗಿ ಬೇಕಾಗಿರುವ ಅಗತ್ಯ ಕೈಪಿಡಿಯನ್ನು ಸಿದ್ಧಪಡಿಸಿಕೊಂಡಿರುವಂತಿದೆ. ಶೈಕ್ಷಣಿಕ ಹಾಗೂ ಜೀವನ ಮೌಲ್ಯಗಳನ್ನು ಸಾರುವ ಸಣ್ಣ ಕಥೆಗಳು ಹಾಗೂ ಪದ್ಯಗಳನ್ನು ಸರಳ ಪದಗಳ ಬಳಕೆಯಿಂದ ರಚಿಸಿರುವುದು ಶ್ಲಾಘನೀಯ. ಮಕ್ಕಳಿಗಲ್ಲದೆ ಶಿಕ್ಷಕರು. ಶಿಕ್ಷಕಿಯರು ಪೋಷಕರು ಎಲ್ಲರೂ ಓದಬಹುದಾದ ಕೃತಿ ಇದಾಗಿದೆ.

ಪ್ರಾಥಮಿಕ ಶಾಲಾ ಹಂತದ ಮಕ್ಕಳಿಗೆ ಈ ಕೃತಿ ಹೆಚ್ಚು ಉಪಯುಕ್ತವಾದದ್ದು ಎನಿಸಿದೆ. ಶಿಕ್ಷಕರು ನೇರವಾಗಿ ಶಾಲೆಗಳು ಪ್ರಾರಂಭವಾದ ತಕ್ಷಣ ಪಾಠ ಪ್ರವಚನಕ್ಕೆ ಧುಮುಕದೆ ಮಕ್ಕಳ ಅವಧಾನವನ್ನು ಸೆಳೆದು ತಮ್ಮ ಶೈಕ್ಷಣಿಕ ಗುರಿ ಉದ್ದೇಶಗಳನ್ನು ಸಾಧಿಸುವಲ್ಲಿ ಇದು ಸಹಕಾರಿಯಾಗಿದೆ. ಭಾಷೆಯ ಪಾಠ, ಪದ್ಯಗಳನ್ನು ಬೋಧಿಸುವಾಗ ಪೂರಕ ಓದು ಹಾಗೂ ಕಲಿಕೆಗಾಗಿ ಈ ಕೃತಿಯನ್ನು ಬಳಸಿಕೊಳ್ಳಬಹುದು ಹಾಗೂ ಉತ್ತಮ ಕಲಿಕಾ ವಾತಾವರಣವನ್ನು ಸೃಷ್ಟಿಸಲು ಅನುಕೂಲಕರವಾಗಿದೆ. ಸಣ್ಣ ಕಥೆಗಳಂತೂ

ಮಕ್ಕಳು ಕಲ್ಪನಾ ಲೋಕದಲ್ಲಿ ವಿಹರಿಸುವಂತೆ ಮಾಡುವ ದಾಟಿಯಲ್ಲಿವೆ. ಹಾಸ್ಯ ಪ್ರಜ್ಞೆಯನ್ನು ಹಾಗೂ ಜೀವನ ಕೌಶಲಗಳನ್ನು ಹಾಗೂ ಮಾನವೀಯ ಮೌಲ್ಯಗಳು ಬುದ್ಧಿವಂತಿಕೆ ಇವುಗಳನ್ನೆಲ್ಲ ಒಳಗೊಂಡಿವೆ. ಈ ಪೈಕಿ ಕೆಲವು ಸಣ್ಣ ಕಥೆಗಳು ನಾವು ಕೇಳಿ ಬೆಳೆದಿರುವ ನೀತಿ ಕಥೆಗಳ ಮುಂದುವರಿದ ಭಾಗವಾಗಿ ಉತ್ತಮವಾಗಿ ರಚಿಸಲ್ಪಟ್ಟಿವೆ. ಪ್ರಾಸ ಪದ್ಯಗಳಂತೂ ಮಕ್ಕಳು ತಮ್ಮ ಗೆಳೆಯರೊಡನೆ ನಕ್ಕು ನಲಿದು ಆಡುತ್ತಾ, ಹಾಡುತ್ತಾ ಕಲಿಯುವ ತೆರದಲ್ಲಿದೆ .

**ಏಕತೆಯ ಮಂತ್ರ ಸಾರುವ ಪದ್ಯ**

ಒಂದೇ ಮಾತಿನಲ್ಲಿ ಹೇಳುವುದಾದರೆ ಈ ಕೃತಿಯು ಸರಳ ಸುಂದರ ಹಾಗೂ ಔಚಿತ್ಯಪೂರ್ಣ ಎನ್ನಬಹುದು. ಯಾವುದೇ ಗೊಂದಲಗಳಿಗೆ ಅವಕಾಶ ನೀಡದೆ ಸರ್ವ ಧರ್ಮ ಸಮಾನತೆಯನ್ನು, ಏಕತೆಯ ಮಂತ್ರವನ್ನು ಸಾರುವ ಪದ್ಯಗಳಿರುವ ಚಿಣ್ಣರ ಸೌರಭ ಕೃತಿಯನ್ನು ಲೇಖಕರು ರಚಿಸಿರುವುದು ಅನುಕರಣೀಯವೆನಿಸುತ್ತದೆ. ಶಿಕ್ಷಕ ಸಾಹಿತಿಯೂ ಆದ ಧನಂಜಯ ಪಾಂಡವಪುರ ಇವರು ಈಗಾಗಲೇ ಪ್ರೇಮ ಲೀಲಾ ಕವನ ಸಂಕಲನ ಹಾಗೂ ಸ್ಫೂರ್ತಿ ಸೌರಭ ಎಂಬ ಸಮಾಜ ಶೀಲ ಚಿಂತನೆಗಳ ಕೃತಿಗಳನ್ನು ಹೊರತಂದು. ಸಾವಿರಾರು ಪುಸ್ತಕಗಳನ್ನು ಉಚಿತವಾಗಿ ಶಾಲೆಗಳಿಗೆ ಹಾಗೂ ಸಾಹಿತ್ಯ ಆಸಕ್ತರಿಗೆ ಪುಸ್ತಕ ಪ್ರೇಮಿಗಳಿಗೆ ಹಂಚುವುದರ ಮೂಲಕ ಅಪಾರ ಓದುಗರ ಬಳಗವನ್ನು ಸೃಷ್ಟಿಸಿಕೊಂಡಿದ್ದಾರೆ.


ಈಗ ಈ ಕೃತಿಯನ್ನು ಮಕ್ಕಳ ಹಿತದೃಷ್ಟಿಯಿಂದ ಚಿಣ್ಣರ ಸೌರಭವನ್ನು ಜವಾಬ್ದಾರಿಯುತವಾಗಿ ರಚಿಸಿದ್ದಾರೆ. ಮಕ್ಕಳಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಇವರ ಆಶಯವನ್ನು ಚಿಣ್ಣರ ಸೌರಭ ಕೃತಿಯ ಮೂಲಕ ಸಾಧಿಸಲು ಹೊರಟಿರುವುದು ಪ್ರಶಂಸನೀಯ, ಹೆಮ್ಮೆ ಎನಿಸುತ್ತದೆ. ಇವರಿಂದ ಇನ್ನೂ ಹೆಚ್ಚಿನ ಸಾಹಿತ್ಯಗಳು ಶೈಕ್ಷಣಿಕ ಕ್ಷೇತ್ರಕ್ಕೆ ಪೂರಕವಾಗಿ ಲೋಕಾರ್ಪಣೆಗೊಳ್ಳಲಿ ಎಂದು ಶ್ರೀಯುತರಿಗೆ ಶುಭವಾಗಲಿ ಎಂದು ಹಾರೈಸುತ್ತೇನೆ.

---

# ಬೊಂಬಾಟ್ ಬೇಸಿಗೆ

ವೇಸ್ಟ್ ಮಾಡದಿರಿ
ಬೇಸಿಗೆಯ ಬಿರು ಬಿಸಿಲನು
ಜೀವಿಗಳಿಗೆ ಪ್ರಕೃತಿ ನೀಡಿರುವ
ವರದಾನವಿದು
ವೇಸ್ಟ್ ಮಾಡದಿರಿ
ಬೇಸಿಗೆಯ ಬಿಸಿಲನು
ಚಳಿಗಾಲ , ಮಳೆಗಾಲದಲಿ
ಬರುವ ಸಕಲ ಜೀವರಾಶಿಗಳ ಮೇಲಿನ
ವೈಪರಿತ್ಯಗಳ ಸರಿ ದೂಗಿಸಿ
ಹೊಸ ಚೈತನ್ಯ ನೀಡುವ
ಬೇಸಿಗೆಯ ಬಿಸಿಲ
ವೇಸ್ಟ್ ಮಾಡದಿರಿ
ಪೂರ್ವಿಕರು ಬಳಸುವ ಆಚರಣೆಗಳ
ತನ್ನಿ ಅನುಷ್ಟಾನಕೆ ಅಭ್ಯಂಜನ, ಸೇವಿಸಿರಿ
ನೈಸರ್ಗಿಕ ಪಾನಿಯ, ಬೇಸಿಗೆ ಹಣ್ಣುಗಳಾದ
ಬೇಲದ ಹಣ್ಣು, ಬಾರೆ ಕಾಯಿ, ಕರಂಬೋಲ
ಕಲ್ಲಂಗಡಿ. ಇನ್ನೂ ಅನೇಕ
ವೇಸ್ಟ್ ಮಾಡದಿರಿ
ಬೇಸಿಗೆಯ ಬಿಸಿಲಿನು
ಅಮ್ಮ ಅಜ್ಜಿಯರು ಮಾಡಿಡುತ್ತಿದ್ದ
ಹಪ್ಪಳ, ಸಂಡಿಗೆ, ಶಾವಿಗೆಯನು
ಮಳೆಗಾಲಕ್ಕೆ ಸವಿಯಲು ಸಜ್ಜಾಗಿ
ಕೊಂಡರಾಯಿತು ಎನ್ನುವ
ಗೋಜಿಗೆ ಹೋಗಿ
ವೇಸ್ಟ್ ಮಾಡದಿರಿ
ಬೇಸಿಗೆಯ ಬಿಸಿಲನು
ಮಕ್ಕಳೊಂದಿಗೆ ಬೇಸಿಗೆರಜಾದ ಮಜಾ
ತವರು ಮನೆಯ ತರಾವರಿ
ನೆನಪುಗಳ ಸಂಭ್ರಮದಲಿ
ಮಿಂದು , ಮೋಜಾಯಿಸಿ
ಬಂಧುಗಳೊಡನೆ, ಹಳೆಯ ಆಲ್ಬಂ ಒಮ್ಮೆ ತಿರುವಿ ಹಾಕಿ
ಹೋಳಿ ಆಡಿದ ರಂಗು ನೆನಪು ಮಾಡಿಕೊಳ್ಳಿ,ಆದರೆ
ವೇಸ್ಟ್ ಮಾಡದಿರಿ
ಬೇಸಿಗೆಯ ಬಿಸಿಲನು
ಹಾಗೇ ಕಣ್ಣಾಡಿಸಿ
ಮನೆಯ ರಗ್ಗು ರಜಾಯಿ ದಿಂಬಾಸಿಗೆಯ
ಮುಗ್ಗಾಗದಂತೆ ತೊಳೆದೊಣಗಿಸಿ
ರಣ ಬಿಸಿಲಿಗೆ ಮರೆಯದಿರಿ ಮಾವಿನ
ಉಪ್ಪಿನಕಾಯಿ ಹಾಕುವುದ ಹೊರಟರೆ
ಹೊರಗೆ ಛತ್ರಿಯ ಮರೀಬೇಡಿ, ಆದರೂ
ವೇಸ್ಟ್ ಮಾಡದಿರಿ
ಬೇಸಿಗೆಯ ಬಿಸಿಲಿನ
ಬೇಸಿಗೆಯ ಕವನ ಹಿಡಿದಿದ್ದರೆ ಒಂದು ಲೈಕ್

• ಗುಜ್ಜರ್ ದಾವಣಗೆರೆ



---

# ಅಲೆಮಾರಿ ಜನಾಂಗಕ್ಕೆ ಸರ್ಕಾರದ ವಿವಿಧ ಯೋಜನೆಗಳ ಲಾಭ ದೊರಕಿಸಿ

• ಉದಯವಾಹಿನಿ ಯಾದಗಿರಿ



ಉದಯವಾಹಿನಿ ಚಿತ್ರ

ಸ್ವಯಂ ಉದ್ಯೋಗ ನೇರ ಸಾಲ ಯೋಜನೆ ಹಾಗೂ ಸ್ವಾವಲಂಬಿ ಸಾರಥಿ ಯೋಜನೆ ಗಳಡಿ ಹೆಚ್ಚಿನ ಗುರಿ ನೀಡಲಾಗಿದ್ದು, ಅರ್ಹ ಫಲಾನುಭವಿಗಳಿಗೆ ಈ ಸೌಲಭ್ಯಗಳ ಲಾಭ ದೊರೆಯುವಂತೆ ನೋಡಿಕೊಳ್ಳಲು ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಲೆಮಾರಿ ಜನಾಂಗ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀಮತಿ ಪಲ್ಲವಿ.ಜಿ. ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಲೆಮಾರಿ ಸಮುದಾಯದ ಸಂಘ ಸಂಸ್ಥೆಗಳ ಮತ್ತು ಸಾರ್ವಜನಿಕರಿಂದ ಕುಂದುಕೊರತೆ ಅಹವಾಲು ಸ್ವೀಕಾರ ಹಾಗೂ ಸಭೆ ಮತ್ತು ಅಧಿಕಾರಿಗಳೊಂದಿಗೆ ನಿಗಮದ ವಿವಿಧ ಯೋಜನೆಗಳಡಿ ಕಲ್ಪಿಸಿದ ಸೌಲಭ್ಯಗಳ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.

ಅತ್ಯಂತ ಕಡುಬಡವ ಹಾಗೂ ಹಿಂದುಳಿದ ಸಮುದಾಯ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಲೆಮಾರಿ ಜನಾಂಗವಾಗಿದೆ. ಈ ಹಿನ್ನೆಲೆಯಲ್ಲಿ ಈ ಸಮುದಾಯದ ಜನರಿಗೆ ಆದ್ಯತೆ ಮೇಲೆ ಸರ್ಕಾರದ ವಿವಿಧ ಸೌಲಭ್ಯಗಳ ಲಾಭವನ್ನು ದೊರಕಿಸಿಕೊಡಬೇಕು. ತಾಲ್ಲೂಕವಾರು ನಿವೇಶನ ರಹಿತರಿಗೆ ಹಾಗೂ ಮನೆರಹಿತರಿಗೆ ವಸತಿ ಮತ್ತು ನಿವೇಶನದ ಸೌಲಭ್ಯ ಕಲ್ಪಿಸುವಂತೆ ಅವರು ಸೂಚನೆ ನೀಡಿದರು. ಅಧಿಕಾರಿಗಳು ಮತ್ತು ನಾಮ ನಿರ್ದೇಶಿತ ಸದಸ್ಯರ ಮಧ್ಯ ಸಮನ್ವಯತೆ ಇರಬೇಕು. ಈ ಸಮುದಾಯಕ್ಕೆ ಸರ್ಕಾರದ ಯೋಜನೆಗಳಡಿ ಸೌಲಭ್ಯಗಳು ದೊರಕಿಸಬೇಕು ಎಂಬ ಉದ್ದೇಶದೊಂದಿಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅನುಷ್ಠಾನ ಸಮಿತಿ ಇದ್ದು, ಪ್ರತಿ ತ್ರೈಮಾಸಿಕ ಅವಧಿಯಲ್ಲಿ ಸಭೆ ನಡೆಸಿ ಯೋಜನೆಗಳ ಲಾಭ ದೊರಕಿಸಲು ಮತ್ತು ಅರ್ಹ ಫಲಾನುಭವಿಗಳ ಆಯ್ಕೆಗೆ ನೆರವಾಗುವಂತೆ ಅವರು ಸಲಹೆ ನೀಡಿದರು. ಈ ಸಮುದಾಯದ ಹಿತೈಷಿಯಾಗಿ ಅವರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಲು ಇಲ್ಲಿ ಅಹವಾಲು. ಸ್ವೀಕರಿಸಲಾಗುತ್ತಿದೆ.ತಾವೂ ಸಹ ಅತ್ಯಂತ ಹಿಂದುಳಿದ ಮಾತೃ ಪ್ರಧಾನ ಸಮುದಾಯದ ಹೆಣ್ಣು ಮಗಳಾಗಿ ಮಾನ್ಯ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಮಾಜಿ ಕೇಂದ್ರ ಸಚಿವ ಡಾ.ಮಲ್ಲಿಕಾರ್ಜುನ್ ಖರ್ಗೆ ಅವರ ಆಶೀರ್ವಾದದಿಂದ ಈ ನಿಗಮದ ಪ್ರಪ್ರಥಮ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸುವ ಅವಕಾಶ ಲಭಿಸಿದೆ. ಈಗಾಗಲೇ 20 ಜಿಲ್ಲೆಗಳಲ್ಲಿ ಈ ರೀತಿಯ ಕುಂದು ಕೊರತೆ ಹವಾಲುಗಳನ್ನು ಸ್ವೀಕರಿಸಿ ಯಾದಗಿರಿಯಲ್ಲಿಯೂ ಕೂಡ ಸ್ವೀಕರಿಸಿದ್ದು, ಸರ್ಕಾರದ ಗಮನಕ್ಕೆ ತರುವ ಮೂಲಕ ಶಾಶ್ವತ ಪರಿಹಾರ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದೆಂದು ಅವರು ತಿಳಿಸಿದರು.

ಈ ಸಮುದಾಯಕ್ಕೆ ಸಮರ್ಪಕ ಸೌಲಭ್ಯ ದೊರೆಯಲು ಜಿಲ್ಲಾ ಹಾಗೂ ತಾಲ್ಲೂಕ ಮಟ್ಟದಲ್ಲಿ ಜಾತಿ ಸೇರಿದಂತೆ ಇನ್ನಿತರ ದಾಖಲಾತಿಗಳನ್ವಯ, ಸರ್ಕಾರದ ಮಾರ್ಗಸೂಚಿ ಗಳನ್ವಯ ಅವಶ್ಯಕ ಸೌಲಭ್ಯ ಪೂರೈಕೆ ಕುರಿತು ಅಧಿಕಾರಿಗಳಿಗೆ ಕಾರ್ಯಾಗಾರ ಏರ್ಪಡಿಸಬೇಕು. ನಿಗಮದ ಯೋಜನೆಗಳ ಬಗ್ಗೆ ಅರಿವುಗೆ ಇಲಾಖೆ ವ್ಯಾಪ್ತಿಯಲ್ಲಿ ಮಾಹಿತಿ ಅಳವಡಿಸಬೇಕು ಎಂದು ಸೂಚಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಸುಶೀಲ.ಬಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್, ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಆನಂದಕುಮಾರ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಚನ್ನಬಸಪ್ಪ ಉಪಸ್ಥಿತರಿದ್ದರು.

**ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು**

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಲೆಮಾರಿ ಜನಾಂಗದ ಮಕ್ಕಳು ಮುಖ್ಯ ವಾಹಿನಿಗೆ ಬರಬೇಕು. ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು. ಜಿಲ್ಲೆಯ ವಿವಿಧ 20 ವಸತಿ ಶಾಲೆ ಹಾಗೂ ಒಂದು ಕಾಲೇಜುದಲ್ಲಿ ಈ ಜನಾಂಗಕ್ಕಾಗಿ ಶೇ.ಹತ್ತರಷ್ಟು ಮೀಸಲಿರುವ ಸ್ಥಾನಗಳ ಪೈಕಿ ಕೇವಲ ಶೇ. 48 ರಷ್ಟು ಮಾತ್ರ ಪ್ರವೇಶಾತಿ ಪಡೆದಿರುವುದು ಸರಿಯಲ್ಲ. ಈ ಹಿನ್ನೆಲೆಯಲ್ಲಿ ಗುರಿಗೆ ತಕ್ಕಂತೆ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವ ನಿಟ್ಟಿನಲ್ಲಿ ಸಜ್ಜುಗೊಳಿಸುವಂತೆ ಸಮುದಾಯಕ್ಕೆ ಮತ್ತು ಅಧಿಕಾರಿಗಳಿಗೆ ಸೂಚನೆ ನೀಡಿದರು. -ಸಾರ್ವಜನಿಕ ಕುಂದು ಕೊರತೆ ಅಹವಾಲು ಸ್ವೀಕಾರ: ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಅಲೆಮಾರಿ ಜನಾಂಗದ ವಿವಿಧ ಸಂಘ ಸಂಸ್ಥೆಗಳಿಂದ ಹಾಗೂ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚಿಸಿದರು. ಮೂಲ ಜನಾಂಗದವರಿಗೆ ನೈಜ ಜಾತಿ ಪ್ರಮಾಣ ಪತ್ರ, ವಸತಿ ರಹಿತರಿಗೆ ವಸತಿ ಸೌಲಭ್ಯ, ನಿವೇಶನ ರಹಿತರಿಗೆ ನಿವೇಶನ ಸೌಲಭ್ಯ, ಸಮುದಾಯ ಭವನ ಶೌಚಾಲಯ ನಿರ್ಮಾಣ, ಸುಸಜ್ಜಿತ ಶಾಲಾ ಕಟ್ಟಡಗಳ ವ್ಯವಸ್ಥೆ, ಆಟದ ಮೈದಾನ ಸೇರಿದಂತೆ ಇನ್ನಿತರ ಸಮಸ್ಯೆಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಇತ್ತೀಚೆಗೆ ಯಲಸತ್ತಿ ಗ್ರಾಮದಲ್ಲಿ ಮೇಲ್ವರ್ಗದ ಜನಾಂಗದಿಂದ ಈ ಬಡ ಸಮುದಾಯದ ಮೇಲೆ ನಡೆದ ದೌರ್ಜನ್ಯದ ತಪ್ಪಿತಸ್ಥರನ್ನು ವಿಶೇಷ ತನಿಖಾ ತಂಡ ರಚಿಸಿ ಶಿಕ್ಷೆಗೆ ಒಳಪಡಿಸಬೇಕು. ಗುರುಮಠಕಲ್ ತಾಲ್ಲೂಕಿನಲ್ಲಿ ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಇಬ್ಬರು ಚಿಂದಿ ಆಯುವ ಮಹಿಳೆಯರ ಸಾವಿನ ಕುರಿತು ಎಫ್.ಎಸ್.ಎಲ್ ವರದಿ ಆಧಾರದ ಮೇಲೆ ನ್ಯಾಯಯುತ ಕ್ರಮ ಕೈಗೊಳ್ಳಲು ಪೊಲೀಸ್ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

**ಹೊಟ್ಟೆಪಾಡಿಗಾಗಿ ಅಲೆದಾಟ ನಡೆಸಿ ಈ ಸಮುದಾಯ ಜೀವನ ಸಾಗಿಸುತ್ತಿದೆ. ಜನಸಂಖ್ಯೆ ಆಧಾರದ ಮೇಲೆ ಸರ್ಕಾರದ ವಿವಿಧ ಸೌಲಭ್ಯಗಳು ದೊರೆಯುವುದರಿಂದ ಈ ಸಮುದಾಯದ ನಿಖರ ಅಂಕಿ ಅಂಶವನ್ನು ಅಧಿಕಾರಿಗಳು ಇಟ್ಟುಕೊಂಡು, ಮಾಹಿತಿ ಹಾಗೂ ವಿವಿಧ ಸೌಕರ್ಯಗಳನ್ನು ಒದಗಿಸಬೇಕು. ಸರ್ಕಾರದ ಮಾರ್ಗಸೂಚಿ ಅನ್ವಯ ಈ ಜನರಿಗೆ ಸೌಲಭ್ಯಗಳ ಲಾಭ ದೊರಕಬೇಕಾದರೆ ದಾಖಲಾತಿಗಳ ಅಗತ್ಯತೆ ಹೆಚ್ಚಾಗಿ ಇರುವುದರಿಂದ ಅಲೆದಾಟದಲ್ಲಿ ದಾಖಲಾತಿ ಇಲ್ಲದೆ ಪರದಾಡುವಂತಹ ಪರಿಸ್ಥಿತಿಇದೆ.**

---

# ಹೆಚ್‌ಡಿಕೆಗೆ ಅನಾರೋಗ್ಯ 3 ದಿನಗಳಿಂದ ಜಿಂದಾಲ್ ಪ್ರಕೃತಿ ಚಿಕಿತ್ಸಾಲಯದಲ್ಲಿ ಚಿಕಿತ್ಸೆ

• ಉದಯವಾಹಿನಿ ಬೆಂಗಳೂರು

ಅನಾರೋಗ್ಯದಿಂದ ಬಳಲುತ್ತಿರುವ ಕೇಂದ್ರ ಹೆಚ್.ಡಿ.ಕುಮಾರಸ್ವಾಮಿ ಅವರು ಜಿಂದಾಲ್ ಪ್ರಕೃತಿ ಚಿಕಿತ್ಸಾಲಯದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ತೀವ್ರ ಕಫಾ, ಕೆಮ್ಮಿನಿಂದ ಬಳಲುತ್ತಿರುವ ಹೆಚ್‌ಡಿಕೆ, ತುಮಕೂರು ರಸ್ತೆಯಲ್ಲಿರುವ ಜಿಂದಾಲ್ ಪ್ರಕೃತಿ ಚಿಕಿತ್ಸಾಲಯದಲ್ಲಿ 3-4 ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದಾರೆ. ಸದ್ಯ ಸ್ವಲ್ಪ ಆರೋಗ್ಯ ಸುಧಾರಣೆ ಆಗಿದೆ ಎಂಬ ಮಾಹಿತಿ ಲಭಿಸಿದೆ. ಇತ್ತೀಚೆಗೆ ಚೆನ್ನೈನ ಅಪೋಲೋ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದಿದ್ದರು. ಆದರೂ ಕಫಾ, ಕೆಮ್ಮು ಕಡಿಮೆಯಾಗದ ಹಿನ್ನೆಲೆ ಪ್ರಕೃತಿ ಚಿಕಿತ್ಸಾಲಯದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹೆಚ್‌ಡಿಕೆ ಇಂದು ದೆಹಲಿಗೆ ತೆರಳಬೇಕಿತ್ತು. ಆದರೆ ಅನಾರೋಗ್ಯದ ಕಾರಣ ನಾಳೆ ದೆಹಲಿಗೆ ತೆರಳಲಿದ್ದಾರೆ.

## ಮೇಘಾ ಲೋಕ್ ಅದಾಲತ್: 03 ನ್ಯಾಯಾಲಯದಲ್ಲಿ 861 ಪ್ರಕರಣಗಳು ಇತ್ಯರ್ಥ

• ಉದಯವಾಹಿನಿ,ಚಿಂಚೋಳಿ

ಪಟ್ಟಣದ ಹಿರಿಯ ಶ್ರೇಣಿ ನ್ಯಾಯಾಲಯ ಮತ್ತು ಪ್ರಧಾನ ಸಿವಿಲ್ ನ್ಯಾಯಾಲಯ ಹಾಗೂ ಹೆಚ್ಚುವರಿ ನ್ಯಾಯಾಲಯ ಸೇರಿ ಮೂರು ನ್ಯಾಯಾಲಯದಿಂದ 861 ಪ್ರಕರಣಗಳು ಇತ್ಯರ್ಥಗೊಂಡಿದ್ದು ಇದರಲ್ಲಿ ನ್ಯಾಯಾಲಯ ಪ್ರಕರಣಗಳು 820 ಹಾಗೂ ವಾಜ್ಯ ಪೂರ್ವ ಪ್ರಕರಣಗಳು 41 ಈ ಎಲ್ಲಾ ಪ್ರಕರಣಗಳಿಂದ ಒಟ್ಟು 2,03,27,820 ರೂ.ಗಳ ವ್ಯವಹಾರವಾಗಿರುತ್ತದೆ ಎಂದು ತಾಲ್ಲೂಕಾ ಕಾನೂನು ಸೇವಾ ಸಮಿತಿ ತಿಳಿಸಿದ್ದಾರೆ.

ಪಟ್ಟಣದ ನ್ಯಾಯಾಲಯದಲ್ಲಿ ಮೇಘಾ ಲೋಕ ಅದಾಲತ್ ಕಾರ್ಯಕ್ರಮವನ್ನು ಹಿರಿಯ ಶ್ರೇಣಿ ನ್ಯಾಯಾಧೀಶ ಜ್ಯೋತಿ ಶಾಂತಪ್ಪ ಕಾಳೆ ಮತ್ತು ಪ್ರಧಾನ ಸಿವಿಲ್ ನ್ಯಾಯಾಧೀಶ ದತ್ತಕುಮಾರ ಜವಳಕರ್ ನೇತೃತ್ವದಲ್ಲಿ ಜರುಗಿತು.

**1) ಹಿರಿಯ ಶ್ರೇಣಿ ನ್ಯಾಯಾಲಯ:-** ಒಟ್ಟು 50 ಪ್ರಕರಣಗಳು ಕೈಗೆತ್ತಿಕೊಂಡು ಅದರಲ್ಲಿ 28 ಪ್ರಕರಣಗಳು ಮುಕ್ತಾಯಗೊಂಡಿವೆ ಅದರಲ್ಲಿ 06 ಹಿರಿಯ ನಾಗರಿಕ ಪ್ರಕರಣಗಳು, ಎರಡು ಪತಿ ಪತ್ನಿ ಹೊಂದಾಣಿಕೆ ಪ್ರಕರಣ ಇತ್ಯರ್ಥಗೊಂಡಿರುತ್ತವೆ, ವಕೀಲ ರಾಜೇಂದ್ರ ಕುಮಾರ ವರ್ಮಾ ರವರ ಒಂದು ಪ್ರಕರಣವು ಇತ್ಯರ್ಥವಾಗಿದೆ,ಹಾಗೂ ಉಳಿದ ಎಂ.ವಿ.ಸಿ ಹಾಗೂ ಇತರೆ ಪ್ರಕರಣಗಳು ಇವುಗಳಿಂದ ಪರಿಹಾರವಾಗಿ ಒಟ್ಟು 1,44,65,005 ರೂಪಾಯಿ ವಸೂಲಾಗಿದೆ.

**2) ಪ್ರಧಾನ ಸಿವಿಲ್ ನ್ಯಾಯಾಲಯ:-** ಒಟ್ಟು 500 ಪ್ರಕರಣಗಳು ಕೈಗೆತ್ತಿಕೊಂಡು ಅದರಲ್ಲಿ ಎನ್.ಐ ಎಕ್ಟ್ ಚೆಕ್ ಬೌನ್ಸ್ ಪ್ರಕರಣಗಳಿಂದ 15,00,000 ರೂ.ಗಳನ್ನು ಪರಿಹಾರವಾಗಿ ಇತ್ಯರ್ಥಗೊಳಿಸಲಾಯಿತು. ಮತ್ತು 125 ಸಿಆರ್.ಪಿಸಿ ಪ್ರಕರಣಗಳಲ್ಲಿ 01ಪ್ರಕರಣ ಇತ್ಯರ್ಥವಾಗಿದ್ದು,182 ಜನನ ಪ್ರಮಾಣ ಪತ್ರಗಳ ಪ್ರಕರಣ ಹಾಗೂ ಪೋಲಿಸ್ ಇಲಾಖೆ 274 ದಂಡ ಪ್ರಕರಣಗಳು ಇತ್ಯರ್ಥವಾಗಿದ್ದು, ಒಟ್ಟು 463 ಪಕ್ರರಣಗಳು ಒಟ್ಟು ಹಣ 23,17,400 ರೂ. ಹಾಗೆಯೇ ಎಸ್.ಬಿ.ಐ ಬ್ಯಾಂಕ್ ವ್ಯಾಜ್ಯ ಪೂರ್ವ ಪ್ರಕರಣಗಳು 41 ಪ್ರಕರಣ ರಾಜಿಯಾಗಿದ್ದು ಒಟ್ಟು 33,63,515 ರೂ.ವಸೂಲಾಗಿರುತ್ತದೆ,ಕಂದಾಯ ಇಲಾಖೆಯ ಪಿಎಲ್.ಸಿ ಪ್ರಕರಣ 1818 ಪ್ರಕರಣಗಳು ಮುಕ್ತಾಯವಾಗಿರುತ್ತದೆ,ಪತಿ ಪತ್ನಿ ಯಾವುದೇ ಪ್ರಕರಣ ಕೈಗೆತ್ತಿಕೊಂಡಿರುವುದಿಲ್ಲಾ.


ಉದಯವಾಹಿನಿ ಚಿತ್ರ

**3) ಹೆಚ್ಚುವರಿ ನ್ಯಾಯಾಲಯ:-** ಒಟ್ಟು 354 ಪ್ರಕರಣಗಳು ಕೈಗೆತ್ತಿಕೊಂಡು ಅದರಲ್ಲಿ 329 ಪ್ರಕರಣಗಳು ಇತ್ಯರ್ಥವಾಗಿರುತ್ತದೆ.

ಅವುಗಳಲ್ಲಿ 01 ಪಾಲುಗಾರಿಕೆ ಪ್ರಕರಣ 01 ಸ್ಪೆಸಿಪಿಕ್ ಪ್ರಕರಣಗಳು ಹಾಗೂ ಇತರೆ ಪ್ರಕರಣಗಳು 02.125 ಸಿ.ಆರ್.ಪಿ.ಸಿ ಪ್ರಕರಣ 01 ಮತ್ತು 144 ಜನನ ಪ್ರಮಾಣ ಪತ್ರ ಹಾಗೂ ಪೊಲೀಸ್ ಇಲಾಖೆಯ ದಂಡದ ಪ್ರಕರಣಗಳು 184 ಇದರಿಂದ ಒಟ್ಟು 1,75,000 ರೂ.ವಸೂಲಾಗಿವೆ ಎಂದು ತಾಲ್ಲೂಕಾ ಕಾನೂನು ಸೇವಾ ಸಮಿತಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷ ಶ್ರೀಮಂತ ಕಟ್ಟಿಮನಿ,ಮಾಜಿ ಅಧ್ಯಕ್ಷ ಸುದರ್ಶನ ಬೀರಾದಾರ,ಜಗನ್ನಾಥ ಅಗ್ನಿಹೋತ್ರಿ, ಶಿವಶರಣಪ್ಪ ಜಾಪಟ್ಟಿ,ವಿಶ್ವನಾಥ ಬೆನಕಿನ್, ನಾಗಭೂಷಣ, ಚಂದ್ರಶೇಟ್ಟಿ ಜಾಧವ, ನೀಲಕಂಠ ರಾಠೋಡ್, ವಿಜಯಕುಮಾರ ರಾಠೋಡ್, ಮಲ್ಲಿಕಾರ್ಜುನ ಸುಕಂದ, ದೀಲೀಪ್ ಚವ್ಹಾಣ, ಜಗನ್ನಾಥ ಗಂಜಗಿರಿ, ಹಣಮಂತ ಹಿರೇಮನಿ,ಇರ್ಫಾನ್ ಪಟೇಲ್, ಸೂರ್ಯಕಾಂತ,ಎಎಸ್ ಹೆಗ್ಡೆ, ವೀರೇಂದ್ರ ಕೋರಿ, ಶಂಕರ ರಾಠೋಡ್, ಸೇರಿದಂತೆ ಅನೇಕ ವಕೀಲರು ಮತ್ತು ಸರ್ಕಾರಿ ವಕೀಲರು ಇದ್ದರು.

## ಮಿನಿ ನ್ಯೂಸ್

### ನಿಂಬೆ ಬೆಲೆ ಏರಿಕೆ

• ಉದಯವಾಹಿನಿ ಲಕ್ಷ್ಮೇಶ್ವರ

ಬಿಸಿಲಿನ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದಂತೆಯೇ ಜನಸಾಮಾನ್ಯರು ತಂಪು ಪಾನೀಯಗಳಿಗೆ ಮೊರೆ ಹೋಗುತ್ತಿದ್ದಾರೆ. ಮಾರುಕಟ್ಟೆಯಲ್ಲಿ ನಿಂಬೆಹಣ್ಣು ಬೆಲೆ ದಿನದಿಂದ ದಿನಕ್ಕೆ ಏರುತ್ತಿದ್ದು, ಮಾರುಕಟ್ಟೆಯಲ್ಲಿ ಅದರ ಕೊರತೆಯೂ ಕೂಡ ಎದ್ದು ಕಾಣುತ್ತಿದೆ. ಪಟ್ಟಣದ ಭಾನು ಮಾರ್ಕೆಟಿನಲ್ಲಿ ನಿಂಬೆಹಣ್ಣಿನ ವ್ಯಾಪಾರಿ ಖಾಲಿದ್ ಮಿರಜಾ ಹೇಳುವಂತೆ ಈಗ ಬೇಸಿಗೆಕಾಲವಾಗಿರುವುದರಿಂದ ಬೆಳೆ ಕುಂಠಿತಗೊಳ್ಳುತ್ತದೆ ಮತ್ತು ಮೂಲ ಬಿಜಾಪುರದಿಂದ ಹುಬ್ಬಳ್ಳಿ ಮಾರುಕಟ್ಟೆಗೆ ನಿಂಬೆಹಣ್ಣಿನ ಆವಕವಾಗುತ್ತಿದೆ ಈಗ ಆವಕದಲ್ಲಿ ಕಡಿಮೆಯಾಗಿರುವುದರಿಂದ ಪ್ರತಿ ಚೀಲಕ್ಕೆ ಗಾತ್ರಗಳಿಗೆ ಅನುಗುಣವಾಗಿ 2000ಗಳಿಂದ 6000 ರೂಗಳಿಗೆ ಮಾರಾಟವಾಗುತ್ತಿದೆ ಇದರಿಂದಾಗಿ ಚಿಲ್ಲರೆ ಮಾರುಕಟ್ಟೆಯಲ್ಲಿ ನಿಂಬೆಹಣ್ಣಿನ ಬೆಲೆ ಗಾತ್ರಕ್ಕನಗುಣವಾಗಿ ಎರಡು ರೂಪಾಯಿಗಳಿಂದ ಐದು ರೂಪಾಯಿಗಳವರೆಗೆ ಒಂದರಂತೆ ಮಾರಾಟವಾಗುತ್ತಿದೆ.

### ಉಪನ್ಯಾಸಕನಿಗೆ ಚಾಕು ಇರಿತ

• ಉದಯವಾಹಿನಿ ಕಲಬುರಗಿ

ಕ್ಷುಲ್ಲಕ ಕಾರಣಕ್ಕೆ ವ್ಯಕ್ತಿಯೊಬ್ಬ ಉಪನ್ಯಾಸಕರೊಬ್ಬರಿಗೆ ಚಾಕುವಿನಿಂದ ಇರಿದ ಘಟನೆ ನಗರದ ಎನ್.ವಿ.ಪಾಲಿಟೆಕ್ನಿಕ್ ಕಾಲೇಜ್ ಎದುರು ನಡೆದಿದೆ. ಎನ್.ವಿ.ಪಾಲಿಟೆಕ್ನಿಕ್ ಕಾಲೇಜಿನ ಉಪನ್ಯಾಸಕ ಶಿವಕುಮಾರ ಓಕಳಿ (45) ಎಂಬುವರು ಗಾಯಗೊಂಡಿದ್ದಾರೆ ಎಂದು ತಿಳಿದು ಬಂದಿದೆ. ಶಿವಕುಮಾರ್ ಅವರು ಮಧ್ಯಾಹ್ನ ತರಗತಿ ಮುಗಿಸಿಕೊಂಡು ಕಾಲೇಜಿನ ಎದುರುಗಡೆ ರಸ್ತೆಗೆ ಬರುತ್ತಿದ್ದಾಗ ಆಕಸ್ಮಿಕವಾಗಿ ವ್ಯಕ್ತಿಯೊಬ್ಬನಿಗೆ ಡಿಕ್ಕಿ ಹೊಡೆದಿದ್ದಾರೆ. ಆಗ ಆ ವ್ಯಕ್ತಿ ಜಗಳ ತೆಗೆದು ಚಾಕುವಿನಿಂದ ಇರಿದು ಪರಾರಿಯಾಗಿದ್ದಾನೆ ಎಂದು ತಿಳಿದು ಬಂದಿದೆ.

ಗಾಯಗೊಂಡ ಶಿವಕುಮಾರ ಅವರು ಸದ್ಯ ನಗರದ ಜಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

## ಸಾಧಕರನ್ನು ಮಾದರಿಯಾಗಿರಿಸಿಕೊಳ್ಳಿ ಗುರುಬಸವ ಪಟ್ಟದ್ದೇವರು ಸಲಹೆ

• ಉದಯವಾಹಿನಿ ಭಾಲ್ಕಿ

ವಿದ್ಯಾರ್ಥಿಗಳು ಸಾಧಕರಾದ ಸ್ವಾಮಿ ವಿವೇಕಾನಂದ, ಭಗತ್ ಸಿಂಗ್, ಅಬ್ದುಲ್ ಕಲಾಂ, ಕಲ್ಪನಾ ಚಾವ್ಲಾ, ಸುನಿತಾ ವಿಲಿಯಮ್ಸ್ ಸೇರಿದಂತೆ ಇತರ ಮಹನೀಯರನ್ನು ಮಾದರಿಯಾಗಿರಿಸಿಕೊಳ್ಳಬೇಕು ಎಂದು ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಸಲಹೆ ನೀಡಿದರು.

ತಾಲ್ಲೂಕಿನ ಖಟಕಚಿಂಚೋಳಿ ಗ್ರಾಮದ ಸಿದ್ದಮ್ಮ ಕಲ್ಯಾಣರಾವ್ ಪಾಟೀಲ ಪ್ರಾಥಮಿಕ, ನೀಲಮ್ಮ ವೀರಬಸಪ್ಪ ಪಾಟೀಲ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು, ಮಹಿಳೆಯರು ದೈಹಿಕವಾಗಿ ಸದೃಢರಾಗಬೇಕಾದರೆ ಒಳ್ಳೆಯ ಆಹಾರಗಳನ್ನು ಸೇವಿಸಬೇಕು. ಮೊಬೈಲ್ ಚಟದಿಂದ ದೂರವಿದ್ದು ಸರಿಯಾಗಿ ಅಭ್ಯಾಸ ಮಾಡಬೇಕು ಎಂದು ತಿಳಿಸಿದರು.

## ಮಹಿಳಾ ದಿನಾಚಾರಣೆ

• ಉದಯವಾಹಿನಿ ಹುಬ್ಬಳ್ಳಿ

ಹಳೇ ಹುಬ್ಬಳ್ಳಿಯ ಅರವಿಂದನಗರದಲ್ಲಿರುವ ಶ್ರೀ ಹುಲಿಗೆಮ್ಮದೇವಿ ದೇವಸ್ಥಾನದಲ್ಲಿ ಮಹಿಳಾ ದಿನಾಚಾರಣೆ ನಿಮಿತ್ತ 90 ವರ್ಷ ಮೇಲ್ಪಟ್ಟ ಹಿರಿಯ ಅಜ್ಜಿಯಂದಿರಿಗೆ ಪಾದಪೂಜೆ ಮಾಡಿ ಗೌರವ ಸಮರ್ಪಿಸಲಾಯಿತು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಮಾತೋಶ್ರೀ ಡಾ. ಹುಲಿಗೆಮ್ಮ ಪೋಸಾ ಅಮ್ಮನವರು ವಹಿಸಿದ್ದರು.

ಕಾರ್ಯಕ್ರಮವನ್ನು ಸಮಾಜ ಸೇವಕಿ ಶ್ರೀಮತಿ. ಜ್ಯೋತಿ ಪ್ರಲ್ಹಾದ ಜೋಶಿರವರು ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾಜಿ ಮಹಾಪೌರರಾದ ವೀಣಾ ಭರದ್ವಾಡ, ಶ್ರೀಮತಿ. ಜ್ಯೋತಿ ಪ್ರಲ್ಹಾದ ಜೋಶಿ, ಧಾರವಾಡದ ಶ್ರೀ ಸಾಯಿ ಪಿಯು ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರರಾದ ವೀಣಾ ಬಿರಾದಾರ, ನ್ಯಾಯವಾದಿ ಅನುಪಮಾ ಅಕ್ಕೂರ ಮಾತನಾಡಿದರು.

## ಮಠದ ಅಭಿವೃದ್ಧಿಗೆ ಅನುದಾನ

• ಉದಯವಾಹಿನಿ ಅಣ್ಣಿಗೇರಿ

ಧಾರವಾಡ ಜಿಲ್ಲೆಯ ಅಣ್ಣಿಗೇರಿ ತಾಲ್ಲೂಕಿನ ಸುಕ್ಷೇತ್ರ ಮಣಕವಾಡ ಗ್ರಾಮದ ಶ್ರೀ ಗುರು ಅನ್ನದಾನೇಶ್ವರ ದೇವ ಮಂದಿರ ಮಹಾಮಠ ಅಭಿವೃದ್ಧಿಗೆ ಸರಕಾರ ಒಂದು ಕೋಟಿ ಅನುದಾನ ಬಿಡುಗಡೆ ಮಾಡಿದ್ದು, ಶಾಸಕ ಎನ್.ಎಚ್.ಕೋನರಡ್ಡಿ ಅವರು ಸರಕಾರದ ಆದೇಶ ಪತ್ರವನ್ನು ಶ್ರೀಗಳಿಗೆ ಹಸ್ತಾಂತರಿಸಿದರು.

ಮಹಾಸ್ವಾಮಿಗಳಾದ ನಿರಂಜನ ಜ್ಯೋತಿ ಮೃತ್ಯುಂಜಯ '' ಅಜ್ಜನ ಸಂಭ್ರಮ 2025 '' ಕಳೆದ ಎಂಟು ದಿನಗಳಿಂದ ನಡೆದ ಈ ಕಾರ್ಯಕ್ರಮ ಪ್ರಯುಕ್ತ ನಡೆದ ಸಮಾರೋಪ ಸಮಾರಂಭ ಸಾನಿಧ್ಯವನ್ನು ಶ್ರೀ ಜಗದ್ಗುರು ಡಾ. ತೋಂಟದ ಸಿದ್ದರಾಮ ಮಹಾಸ್ವಾಮಿಗಳು, ಗದಗ, ಶ್ರೀ ಮಂನಿರಂಜನ್ ಜಗದ್ಗುರು ಡಾ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು, ಶಿವಮೊಗ್ಗ ಶ್ರೀ ಸದಾಶಿವ ಮಹಾಸ್ವಾಮಿಗಳು ಹುಕ್ಕೇರಿಮಠ, ಹಾವೇರಿ, ಶ್ರೀ ಸದಾಶಿವ ಅಭಿನವ್ ಸಿದ್ಧಾರೂಢ ಮಹಾಸ್ವಾಮಿಗಳು ಶಾಂತಾಶ್ರಮ, ಹುಬ್ಬಳ್ಳಿ, ಶ್ರೀ ಚಂದ್ರಶೇಖರ್ ಶಿವಾಚಾರ್ಯ ಸ್ವಾಮಿಗಳು, ಮುತ್ತಿನ ಕಂಠಿಮಠ, ಅಕ್ಕಿ ಆಲೂರ ಹಾಗೂ ಶ್ರೀ ಡಾ ಮಹಾಂತ ಪ್ರಭು ಮಹಾಸ್ವಾಮಿಗಳು ವಿರಕ್ತಮಠ, ಶೇಗುಣಸಿ ವಹಿಸಿದ್ದರು.


ಉದಯವಾಹಿನಿ ಚಿತ್ರ

### ಈ ಹಿಂದೆ ನಿಗದಿಪಡಿಸಿದ್ದ ದರದಲ್ಲಿ ಸಾವಿರ ಲೀಟರಿಗೆ 2 ರೂ. ಕಮ್ಮಿ ಮಾಡಲು ನಗರಸಭೆ ಒಪ್ಪಿಗೆ

## ಕೊನೆಗೂ ನೆಕ್ಕಿಲಾಡಿಗೆ ಸಿಗಲಿದೆ ಕಡಿಮೆ ದರದಲ್ಲಿ ಕುಡಿವ ನೀರು

• ಉದಯವಾಹಿನಿ ಪುತ್ತೂರು

'ದೀಪದ ಕೆಳಗೆ ಕತ್ತಲು' ಎಂಬ ಮಾತಿನಂತೆ ನೆಕ್ಕಿಲಾಡಿ ಪಂಚಾಯಿತಿ ವ್ಯಾಪ್ತಿಯಲ್ಲೇ ಕುಮಾರಧಾರಾ ನದಿಯ ಕಿಂಡಿ ಅಣೆಕಟ್ಟು ಮತ್ತು ರೇಚಕ ಸ್ಥಾವರವಿದ್ದರೂ, ಅದರಿಂದ ನೀರು ಪಡೆಯಲು ಆ ಪಂಚಾಯಿತಿಗೆ ಸಾಧ್ಯವಾಗುತ್ತಿಲ್ಲ. ಇದಕ್ಕಾಗಿ ಅದು ಪುತ್ತೂರು ನಗರಸಭೆಗೆ ದುಡ್ಡು ಪಾವತಿಸಬೇಕು. ಅದರಲ್ಲೂ ಪುತ್ತೂರು ನಗರಸಭೆ ನಿಗದಿ ಮಾಡಿದ್ದ ನೀರಿನ ದರ ತುಟ್ಟಿಯಾಯಿತೆಂದು ನೆಕ್ಕಿಲಾಡಿ ಪಂಚಾಯಿತಿ ಆಕ್ಷೇಪ ವ್ಯಕ್ತಪಡಿಸಿದ್ದು, ಕೊನೆಗೂ ಪುತ್ತೂರು ನಗರಸಭೆ ಅಳೆದೂ ತೂಗಿ ಪ್ರತೀ ಸಾವಿರ ಲೀಟರ್‌ಗೆ 2 ರೂಪಾಯಿ ಕಮ್ಮಿ ಮಾಡಲು ಒಪ್ಪಿಗೆ ನೀಡಿದೆ. ನೆಕ್ಕಿಲಾಡಿ ಬೇಡಿಕೆ: ಪುತ್ತೂರು ನಗರಸಭೆಗೆಂದೇ ಹರಿಸಲಾಗುತ್ತಿರುವ ಶುದ್ಧ ನೀರಿನಲ್ಲಿ ಒಂದು ಪಾಲು ತನಗೆ ನೀಡುವಂತೆ ನೆಕ್ಕಿಲಾಡಿ ಗ್ರಾಪಂ ಬೇಡಿಕೆ ಇಟ್ಟಿದೆ. ಇದನ್ನು ಒಪ್ಪಿದ ನಗರಸಭೆ 2024ರ ಡಿ.12ರಂದು ನಡೆದ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಪ್ರತೀ ಸಾವಿರ ಲೀಟರ್‌ಗೆ 21 ರೂ.ದರ ನಿಗದಿ ಮಾಡಿತ್ತು. ಮೊದಲು ಉಚಿತವಾಗಿ ನೀರು ನೀಡುವಂತೆ ಕೇಳಿದ್ದ ನೆಕ್ಕಿಲಾಡಿ ಕೊನೆಗೆ ಅದು ಸಾಧ್ಯವಿಲ್ಲವೆಂದು ಗೊತ್ತಾದಾಗ ದರ ನಿಗದಿಗೂ ಸಮ್ಮತಿಸಿತ್ತು. ಆದರೆ ಯಾವಾಗ 21ರೂ. ರೇಟ್ ಫಿಕ್ಸ್ ಆಯಿತೋ ಆಗ ಅಸಮಾಧಾನಗೊಂಡು ದರ ಕಮ್ಮಿ ಮಾಡುವಂತೆ ಮನವಿ ಮಾಡಿತು.

> **34 ನೆಕ್ಕಿಲಾಡಿ ಗ್ರಾಪಂ ಜತೆ ಪುತ್ತೂರು ನಗರಸಭೆ ನೀರು ಪೂರೈಕೆ ಸಂಬಂಧ ಒಪ್ಪಂದ ಮಾಡಿಕೊಂಡಿದೆ. 19 ರೂ. ದರ ಅಂತಿಮಗೊಂಡಿದೆ. ಮುಂದಿನ ಒಂದು ವರ್ಷಕ್ಕೆ ಈ ಒಪ್ಪಂದ ಚಾಲ್ತಿಯಲ್ಲಿರುತ್ತದೆ. ಒಂದು ತಿಂಗಳ ಬಿಲ್ ಮೊತ್ತವನ್ನು ಪಂಚಾಯಿತಿಯವರು ಈಗಾಗಲೇ ಭದ್ರತಾ ಠೇವಣಿಯಾಗಿ ನಗರಸಭೆಗೆ ಕಟ್ಟಿದ್ದಾರೆ.**
> -ಮಧು ಎಸ್. ಮನೋಹರ್, ನಗರಸಭೆ ಪೌರಾಯುಕ್ತರು


ಉದಯವಾಹಿನಿ ಚಿತ್ರ

- ನಿತ್ಯ 6.5 ಮೆಗಾ ಲೀಟರ್ ನೀರು ಸರಬರಾಜು
- ಕಿಂಡಿ ಅಣೆಕಟ್ಟಿನಿಂದ ನೆಕ್ಕಿಲಾಡಿ ಗ್ರಾಮಕ್ಕೆ ಕುಡಿಯುವ ನೀರು.
- ಈ ಹಿಂದೆ ನಿಗದಿಪಡಿಸಿದ್ದ ದರದಲ್ಲಿ ಸಾವಿರ ಲೀಟರಿಗೆ 2 ರೂ. ಕಮ್ಮಿ ಮಾಡಲು ನಗರಸಭೆ ಒಪ್ಪಿಗೆ.
- ಇದರಿಂದ ನೆಕ್ಕಿಲಾಡಿಯ ನೀರು ಸರಬರಾಜು ಬೇಡಿಕೆಗೆ ಒಪ್ಪಿಗೆ.

**ಸಭೆಯಲ್ಲಿ ನಿರ್ಣಯ**

**ಫೆ.15ರಂದು ನಡೆದ ನಗರಸಭೆ ಸಾಮಾನ್ಯ ಸಭೆಯಲ್ಲಿನೆಕ್ಕಿಲಾಡಿ ಗ್ರಾಪಂ ಮನವಿ ವಿಚಾರ ಚರ್ಚೆಗೆ ಬಂದು ದರ ಪರಿಷ್ಕರಣೆ ಅಧಿಕಾರವನ್ನು ಅಧ್ಯಕ್ಷರಿಗೆ ನೀಡಲಾಯಿತು. ಅದರಂತೆ ನಗರಸಭೆ ಅಧ್ಯಕ್ಷೆ ಲೀಲಾವತಿ ಅಣ್ಣು ನಾಯ್ಕ, ಉಪಾಧ್ಯಕ್ಷ ಬಾಲಚಂದ್ರ ಕೆಮ್ಮಿಂಜೆ, ಸ್ಥಾಯಿ ಸಮಿತಿ ಅಧ್ಯಕ್ಷ ಸುಂದರ ಪೂಜಾರಿ ಬಡಾವು, ಪೌರಾಯುಕ್ತ ಮಧು ಎಸ್.ಮನೋಹರ್, 34 ನೆಕ್ಕಿಲಾಡಿ ಗ್ರಾಪಂ ಅಧ್ಯಕ್ಷೆ ಸುಜಾತಾ ರೈ, ಪಿಡಿಒ ದೇವಪ್ಪ ನಾಯ್ಕ್ ಅವರು ಸಭೆ ನಡೆಸಿ ಅಂತಿಮವಾಗಿ ಪ್ರತೀ ಸಾವಿರ ಲೀಟರ್‌ಗೆ 19 ರೂ. ದರ ನಿಗದಿ ಮಾಡಿದ್ದಾರೆ. 34 ನೆಕ್ಕಿಲಾಡಿ ಗ್ರಾಪಂಗೆ ದಿನವೊಂದಕ್ಕೆ 3 ಲಕ್ಷ ಲೀಟರ್ ನೀರು ಬೇಕಾಗುತ್ತದೆ.**

**ಏನಿದು ಪ್ರಕರಣ?**

**ಪುತ್ತೂರಿನಿಂದ 11 ಕಿ.ಮೀ. ದೂರದಲ್ಲಿರುವ ನೆಕ್ಕಿಲಾಡಿಯಲ್ಲಿ ಕುಮಾರಧಾರಾ ನದಿಗೆ ಕಟ್ಟಲಾದ ಕಿಂಡಿ ಅಣೆಕಟ್ಟಿನಿಂದ ನಗರಸಭೆ ವ್ಯಾಪ್ತಿಗೆ ನಿತ್ಯ ಸುಮಾರು 6.5 ಎಂಎಲ್‌ಡಿ ನೀರು ಹರಿಯುತ್ತದೆ. ಈ ನೀರನ್ನು ಶುದ್ಧೀಕರಿಸಲೆಂದೇ ನೆಕ್ಕಿಲಾಡಿಯಲ್ಲಿ ರೇಚಕ ಸ್ಥಾವರ ಕಾರ್ಯ ನಿರ್ವಹಿಸುತ್ತಿದೆ. 2004-08ರ ಅವಧಿಯಲ್ಲಿ ಕುಡ್ಸೆಂಪ್ ಯೋಜನೆಯ ಅಡಿಯಲ್ಲಿ ಕೆಯುಐಡಿಎಫ್‌ಸಿನವರು ಈ ಅಣೆಕಟ್ಟು ನಿರ್ಮಿಸಿ ಅಂದಿನ ಪುರಸಭೆಗೆ ಹಸ್ತಾಂತರ ಮಾಡಿದ್ದರು. ಎಡಿಬಿ ಸಾಲ ಯೋಜನೆಯಲ್ಲಿ ಇದನ್ನು ಕಾರ್ಯರೂಪಕ್ಕೆ ತರಲಾಗಿತ್ತು. ಪ್ರಸ್ತುತ ಜಲಸಿರಿ ಯೋಜನೆಯಡಿಯಲ್ಲಿ ರೇಚಕ ಸ್ಥಾವರ ಸಾಮರ್ಥ್ಯ ಹೆಚ್ಚಿಸಲಾಗಿದೆ. ಪೈಪ್‌ಲೈನ್, ಟ್ಯಾಂಕ್‌ಗಳ ಪ್ರಮಾಣ ಮತ್ತು ಸಾಮರ್ಥ್ಯ ಕೂಡ ಅಧಿಕಗೊಂಡಿದೆ.**


### ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ

## ವೈದ್ಯರು ಎರಡನೇಯ ದೇವರು:ಘೋರ್ಪಡೆ

• ಉದಯವಾಹಿನಿ ತಾಳಿಕೋಟೆ

ವೈದ್ಯ ದೇವೋಭವ ಎಂಬ ಈ ಹಿಂದಿನ ಕಾಲದಿಂದ ಕರೆಯುತ್ತಾ ಸಾಗಿರುವ ಈ ಮಾತು ಕಟು ಸತ್ಯವಾಗಿದ್ದು ಭಕ್ತಿಭಾವದಿಂದ ಒಂದೆಡೆ ದೇವನ ವಲುಮೆಗೆ ಮುಂದಾಗಿ ಮೊದಲನೇಯ ದೇವರು ಎಂದು ಎನಿಸಿಕೊಂಡ ಪರಮಾತ್ಮನ ಕೃಪೆ ಒಂದೆಡೆ ಕೋರುತ್ತಾ ಸಾಗಿದರೆ ಮತ್ತೊಂದೆಡೆ ಎರಡನೇ ದೇವರೆಂದು ಹೇಳಲ್ಪಡುವ ವೈದ್ಯ ದೇವೋಭವ ಎಂಬ ಮಾತು ಕಟು ಸತ್ಯವಾಗಿದೆ ಎಂದು ಹಿರಿಯ ಪತ್ರಕರ್ತರಾದ ಜಿ.ಟಿ.ಘೋರ್ಪಡೆ ಅವರು ನುಡಿದರು.

ಪಟ್ಟಣದ ಖ್ಯಾತ ವೈದ್ಯರಾದ ದಿ.ಡಾ.ಎಂ.ಆರ್. ಕೋಳ್ಯಾಳ ಅವರ 24ನೇ ಪುಣ್ಯಸ್ಮರಣೋತ್ಸವ ಅಂಗವಾಗಿ ಅವರ ಪಟ್ಟಣದಲ್ಲಿಯ 3 ಕೋಳ್ಯಾಳ ಆಸ್ಪತ್ರೆಗಳಲ್ಲಿ ಏರ್ಪಡಿಸಲಾದ ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕೀತ್ಸಾ ಶಿಬಿರದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತಿದ್ದ ಅವರು ದಿ.ಡಾ.ಎಂ.ಆರ್.ಕೋಳ್ಯಾಳ ಅವರ ಇರ್ವ ಪುತ್ರರು ತಮ್ಮ ವೈದ್ಯಕೀಯ ಸೇವೆಯಲ್ಲಿ ಮುಂದುವರೆದು ತಂದೆ ದಿ.ಎಂ.ಆರ್.ಕೋಳ್ಯಾಳ ಅವರು ಕಳೆದ 24 ವರ್ಷಗಳ ಹಿಂದೆ ನಿಧನರಾದ ಪ್ರಯುಕ್ತ ಅವರ ಸ್ಮರಣೆಯಲ್ಲಿ ಪ್ರತಿವರ್ಷ ಉಚಿತ ಆರೋಗ್ಯ ತಪಾಸಣೆ ನಡೆಸಿ ಬಡ ಜನತೆಗೆ ಆಸರೆಯಾಗಿರುವದು ಇದು ವೈದ್ಯಕೀಯ ಕ್ಷೇತ್ರದಲ್ಲಿ ಮಾನವೀಯ ಕಾರ್ಯ ಇದಾಗಿದೆ ಎಂದರು. 1966ರಿಂದ ದಿ.ಡಾ. ಎಂ.ಆರ್.ಕೋಳ್ಯಾಳ ಅವರನ್ನು ಹಾಗೂ ಅವರ ಸೇವೆಯನ್ನು ನಾನು ಹತ್ತಿರದಿಂದ ಕಂಡಿದ್ದೇನೆ ಅವರು ನಮ್ಮ ಮನೆಯ ವೈದ್ಯರೆಂದೇ ನಾವು ಪರಿಗಣಿಸಿದ್ದೇವು ಅವರ ನಡೆ ನುಡಿ ತಮ್ಮ ಆಸ್ಪತ್ರೆಗೆ ಬರುವ ರೋಗಿಗಳೊಂದಿಗೆ ಆತ್ಮೀಯ ಭಾವನೆಯಿಂದ ಅವರೊಂದಿಗೆ ಚರ್ಚಿಸಿ ಅವರಿಗೆ ಒಳ್ಳೆಯ ಸಲಹೆಗಳನ್ನು ನೀಡಿ ಔಷಧೋಪಚಾರ ಮಾಡಿ ಅವರವರ ರೋಗಗಳನ್ನು ಕಳೆಯುವಲ್ಲಿ ಯಶಸ್ವಿಯಾಗಿದ್ದ ದಿ.ಡಾ.ಎಂ.ಆರ್.ಕೋಳ್ಯಾಳ ಅವರ ಸೇವೆ ಗುಣಗಾನಮಯವಾಗಿತ್ತೆಂದರು.


ಉದಯವಾಹಿನಿ ಚಿತ್ರ

ಹಿರಿಯ ಪುತ್ರ ಡಾ.ಆರ್.ಎಂ.ಕೋಳ್ಯಾಳ, ಹಾಗೂ ಡಾ.ನಜೀರ ಕೋಳ್ಯಾಳ, ಇಂಜನೀಯರ ಅಬ್ದುಲ್ ಕೋಳ್ಯಾಳ, ಸೋಸೆಯಂದಿರಾದ ಶ್ರೀಮತಿ ಡಾ.ಟಿ.ಎಂ.ಕೋಳ್ಯಾಳ, ಮತ್ತು ಶ್ರೀಮತಿ ಡಾ.ಎನ್.ಆರ್.ಕೋಳ್ಯಾಳ, ಶ್ರೀಮತಿ ಎನ್.ಎ.ಕೋಳ್ಯಾಳ, ಇವರು ತಮ್ಮ 3 ಆಸ್ಪತ್ರೆಗಳಲ್ಲಿ ನಡೆಸಿದ ಉಚಿತ ಆರೋಗ್ಯ ತಪಾಸಣೆಯಲ್ಲಿ ಸುಮಾರು 500ಕ್ಕೂ ಮೇಲ್ಪಟ್ಟು ರೋಗಿಗಳನ್ನು ತಪಾಸಣೆ ನಡೆಸಿ ಉಚಿತ ಔಷಧ ಉಪಚಾರ ಮಾಡಿರುವದು ಮೇಚ್ಚುಗೆಗೆ ಪಾತ್ರವಾಗಿದೆ ಎಂದರು.

### ಜಗದ್ಗುರು ರೇಣುಕಾಚಾರ್ಯ ಹಾಗೂ ಕೈವಾರ ತಾತಯ್ಯ

## ಜಯಂತಿ ಅದ್ದೂರಿ ಆಚರಣೆಗೆ ನಿರ್ಧಾರ

• ಉದಯವಾಹಿನಿ ಚಿತ್ತಾಪುರ

ಆದಿ ಜಗದ್ಗುರು ರೇಣುಕಾಚಾರ್ಯ ಹಾಗೂ ಕಾಲಜ್ಞಾನಿ ಕೈವಾರ ತಾತಯ್ಯ ಅವರ ಜಯಂತಿ ಕ್ರಮವಾಗಿ ಮಾ. 12 ಮತ್ತು ಮಾ. 14 ರಂದು ಅದ್ದೂರಿಯಾಗಿ ಆಚರಣೆ ಮಾಡೋಣ ಎಂದು ತಹಶೀಲ್ದಾರ್ ನಾಗಯ್ಯ ಹಿರೇಮಠ ಹೇಳಿದರು.

ಪಟ್ಟಣದ ತಹಶೀಲ್ ಕಚೇರಿಯ ಸಭಾಂಗಣದಲ್ಲಿ ತಾಲ್ಲೂಕು ಆಡಳಿತದವತಿಯಿಂದ ಹಮ್ಮಿಕೊಂಡಿರುವ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಈರ್ವರು ಮಹನೀಯರ ಜಯಂತಿ ಶಿಷ್ಟಾಚಾರದಂತೆ ಆಚರಿಸಲಾಗುವುದು ಎಂದರು.

ವೀರಶೈವ ಸಮಾಜದ ಮುಖಂಡ ಮಲ್ಲಿಕಾರ್ಜುನ ರೆಡ್ಡಿ ಇಜಾರ್ ಮಾತನಾಡಿ, ಹಿಂದೆ ಹಲವಾರು ಬಾರಿ ಸಾಧು -ಶರಣರ ಜಯಂತಿ ಆಚರಣೆಗೆ ಗೈರು ಮತ್ತು ಕೆಲಕಡೆ ಆಚರಣೆ ಮಾಡದೇ ಇರುವುದು ಅಧಿಕಾರಿಗಳ ಕರ್ತವ್ಯ ಲೋಪಕ್ಕೆ ಸಾಕ್ಷಿ ಆಗಿದೆ. ಅದು ಪುನರಾವರ್ತಿತ ಆಗಬಾರದು ಎಂದು ಹೇಳಿದರು.

ಅದಕ್ಕೆ ಸಕರಾತ್ಮಕವಾಗಿ ಸ್ಪಂದಿಸಿದ ತಹಶೀಲ್ದಾರ್ ಅವರು ಅಧಿಕಾರಿಗಳಿಗೆ ಕಡಕ್ ಸೂಚನೆ ನೀಡಿದರು.


ಉದಯವಾಹಿನಿ ಚಿತ್ರ

> **ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಮಾ. 12 ರಂದು, ಹಾಗೂ ಕೈವಾರ ತಾತಯ್ಯರವರ ಜಯಂತಿ ಮಾ. 14 ರಂದು ಬೆಳಗ್ಗೆ 10ಕ್ಕೆ ತಹಶೀಲ್ ಕಚೇರಿಯಲ್ಲಿ ಮಹನೀಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಗೌರವ ಸಲ್ಲಿಸಲಾಗುವುದು. ವಿವಿಧ ಇಲಾಖೆಯ ಕಚೇರಿಗಳಲ್ಲಿ ಮತ್ತು ಶಾಲಾ ಕಾಲೇಜುಗಳಲ್ಲಿ ಬೆಳಗ್ಗೆ ಪೂಜೆ ಸಲ್ಲಿಸಿ ತಹಶೀಲ್ ಕಚೇರಿಯಲ್ಲಿ ನಡೆಯುವ ಜಯಂತಿ ಕಾರ್ಯಕ್ರಮಕ್ಕೆ ಹಾಜರಾಗಬೇಕು**
> -ನಾಗಯ್ಯ ಹಿರೇಮಠ, ತಹಶೀಲ್ದಾರ್

## ವಿದ್ಯಾರ್ಥಿಗಳಿಗೆ ಪ್ರತ್ಯೇಕ ಹಾಸ್ಟೆಲ್ ಸ್ಥಾಪಿಸಿ: ಶಾಸಕ ಲಕ್ಷ್ಮಣ ಸವದಿ ಆಗ್ರಹ

• ಉದಯವಾಹಿನಿ ಅಥಣಿ

ಜೈನ್ ಸಮುದಾಯದ ವಿದ್ಯಾರ್ಥಿಗಳ ಶೈಕ್ಷಣಿಕ ಅನಕೂಲಕ್ಕಾಗಿ ಮತ್ತು ಇತರ ಅಲ್ಪಸಂಖ್ಯಾತ ಸಮುದಾಯದ ಮಾಂಸಹಾರ ಆಹಾರ ಸ್ವೀಕರಿಸುವ ವಿದ್ಯಾರ್ಥಿಗಳೊಂದಿಗೆ ಹೊಂದಿಕೊಳ್ಳಲು ತೊಂದರೆ ಆಗುತ್ತಿದ್ದು ಹಾಗೂ ಅವರ ಧರ್ಮಾಚರಣೆ ಪಾಲನೆಗಾಗಿ ಅವರಿಗಾಗಿ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಮೂಲಕವಾಗಲಿ ಅಥವಾ ಪ್ರತ್ಯೇಕ ಜೈನ್ ಅಭಿವೃದ್ಧಿ ನಿಗಮ ಪ್ರಾರಂಭಿಸುವ ಮೂಲಕ ಪ್ರತ್ಯೇಕ ವಸತಿ ನಿಲಯಗಳನ್ನು ಪ್ರಾರಂಭಿಸಬೇಕು ಎಂದು ಅಧಿವೇಶನದಲ್ಲಿ ಶಾಸಕ ಲಕ್ಷ್ಮಣ ಸವದಿ ಸರಕಾರವನ್ನು ಆಗ್ರಹಿಸಿದರು. ಜೈನ್ ಸಮುದಾಯ ಸ್ವಾಗತ ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಅಧಿವೇಶನದಲ್ಲಿ ವಿಷಯ ಪ್ರಸ್ತಾಪಿಸಿ ಜೈನ್ ಅಭಿವೃದ್ಧಿ ನಿಗಮ ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಸತಿ ನಿಲಯ ಪ್ರಾರಂಭಿಸಬೇಕು ಎಂದು ಆಗ್ರಹಿಸಿರುವುದು ಜೈನ್ ಸಮುದಾಯ ಸ್ವಾಗತಿಸುತ್ತದೆ ಎಂದು ಜೈನ್ ಸಮಾಜದ ಖ್ಯಾತ ನ್ಯಾಯವಾದಿ ಕೆ.ಎ.ವಣಜೋಳ, ಶೀತಲ್ ಪಾಟೀಲ. ರಾಜು ನಾಡಗೌಡ. ಅಮರ ದುರ್ಗಣ್ಣವರ. ನಿವೃತ್ತ ಅಭಿಯಂತರ ಅರುಣ ಯಲಗುದ್ರಿ, ಹೇಳಿದರು.



> **ಅಲ್ಪ ಸಂಖ್ಯಾತ ಜೈನ ಸಮುದಾಯದ ವಿದ್ಯಾರ್ಥಿಗಳು ಸಾತ್ವಿಕ ಮತ್ತು ಸಸ್ಯಾಹಾರಿಗಳಾಗಿದ್ದರಿಂದ ಸದ್ಯಕ್ಕಿರುವ ಅಲ್ಪ ಸಂಖ್ಯಾತ ವಸತಿ ನಿಲಯಗಳಲ್ಲಿ ಹೊಂದಿಕೊಳ್ಳಲು ಕಷ್ಟವಾಗುತ್ತಿರುವ ವಿಷಯ ಈ ಹಿಂದೆ ಬೆಳಗಾವಿ ಅಧಿವೇಶನದಲ್ಲಿ ಸರಕಾರದ ಗಮನಕ್ಕೆ ತಂದಿದ್ದು, ಜೈನ ಅಭಿವೃದ್ಧಿ ನಿಗಮ ಸ್ಥಾಪಿಸಿ ಅದರ ಮೂಲಕ ಜೈನ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಸತಿ ನಿಲಯ ಪ್ರಾರಂಭಿಸಬೇಕು ಎಂದು ಮಾಜಿ ಉಪ ಮುಖ್ಯ ಮಂತ್ರಿ, ಶಾಸಕ ಲಕ್ಷ್ಮಣ ಸವದಿ ಅಧಿವೇಶನದಲ್ಲಿ ವಿಷಯ ಪ್ರಸ್ತಾಪಿಸುವ ಮೂಲಕ ಮತ್ತೆ ಸರ್ಕಾರದ ಗಮನ ಸೆಳೆದರು.**

## ಮನಸ್ಸು ಶರೀರ ದೃಢವಾಗಿರಲು ಕ್ರೀಡಾಕೂಟಗಳು ಜರಗಬೇಕು

• ಉದಯವಾಹಿನಿ ಕಮಲನಗರ

ಮಕ್ಕಳ ಭವಿಷ್ಯ ಉತ್ತಮ ರೀತಿಯಲ್ಲಿ ಇರಬೇಕಾದರೆ ಮನಸ್ಸು ಶರೀರ ದೃಢವಾಗಿರಲು ಕ್ರೀಡಾಕೂಟಗಳು ಜರಗಬೇಕು ಎಂದು ಶ್ಯಾಮ್ ವೆಲ್ ನುಡಿದರು.

ತಾಲ್ಲೂಕಿನ ಡಾಕ್ಟರ್ ಚನ್ನಬಸವ ಪಟ್ಟದೇವರ ಗುರುಕುಲ ಹಿರಿಯ ಪ್ರಾಥಮಿಕ ಶಾಲೆ, ಖೇಡ್ ಸಂಗಮದಲ್ಲಿ ಮಕ್ಕಳ ಕ್ರೀಡಾಕೂಟದಲ್ಲಿ ಪ್ರಥಮ ದ್ವಿತೀಯ ತೃತೀಯ ಬಂದ ಮಕ್ಕಳಿಗೆ ಬಹುಮಾನ ವಿತರಿಸಿ ಆರೋಗ್ಯವೇ ಭಾಗ್ಯ ಕಾಪಾಡಿಕೊಂಡು ಬರಲು ಕ್ರೀಡಾಕೂಟಗಳು ಮೇಲಿಂದ ಮೇಲೆ ನಡೆಯಬೇಕೆಂದು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನ ವಹಿಸಿಕೊಂಡ ಸಂಜು ಕುಮಾರ್ ಮೆಂಗಾ ಸರ್ ಅವರು ವಿದ್ಯಾರ್ಥಿಗಳ ಬೆಳವಣಿಗೆಗೆ ಕ್ರೀಡಾಕೂಟ ಬಹಳ ಮುಖ್ಯವಾಗಿದೆ ಹಾಗೂ ವಿದ್ಯಾರ್ಥಿಗಳು ಒಳ್ಳೆಯ ರೀತಿಯಿಂದ ಕ್ರೀಡೆಯಲ್ಲಿ ಆಟ ಆಡಿ ಬಹುಮಾನ ಪಡೆದದ್ದು. ನಮ್ಮ ಸಂಗಮ ಶಾಲೆಯ ಮಕ್ಕಳು ಬಹಳಷ್ಟು ಶಿಸ್ತಿನ ಕ್ರಮ ಅನುಸರಿಸುತ್ತಾರೆ ಎಂದು ಮಾತನಾಡಿ ಹರ್ಷ ವ್ಯಕ್ತಪಡಿಸಿದರು


ಉದಯವಾಹಿನಿ ಚಿತ್ರ

ಕಾರ್ಯಕ್ರಮದ ಮೊದಲಿಗೆ ಶಿಕ್ಷಕರಾದ ಬಸವರಾಜ್ ಚಿಂದೆ ವಚನಗಾಯನ ಮಾಡಿದರು.

### ಕುಡಿಯುವ ನೀರಿನ ಕೊರತೆ ನೀಗಿಸಲು ಅಗತ್ಯ ಮುನ್ನೆಚ್ಚರಿಕೆ ಕ್ರಮ

## 253 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ

• ಉದಯವಾಹಿನಿ ಕಲಬುರಗಿ

ಜಿಲ್ಲೆಯಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸುವ 253 ಗ್ರಾಮಗಳನ್ನು ಗುರುತಿಸಿರುವ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಕುಡಿಯುವ ನೀರಿನ ಕೊರತೆ ನೀಗಿಸಲು ಅಗತ್ಯವಾದ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದೆ.



ಕಲಬುರಗಿ ತಾಲ್ಲೂಕಿನ 23 ಗ್ರಾಮಗಳು, ಆಳಂದ ತಾಲ್ಲೂಕಿನ 72, ಚಿಂಚೋಳಿ ತಾಲ್ಲೂಕಿನ 12, ಅಫಜಲಪುರ ತಾಲ್ಲೂಕಿನ 37, ಜೇವರ್ಗಿ ತಾಲ್ಲೂಕಿನ 8, ಚಿತ್ತಾಪುರ ತಾಲ್ಲೂಕಿನ 23, ಶಹಾಬಾದ ತಾಲ್ಲೂಕಿನ 4, ಕಾಳಗಿ ತಾಲ್ಲೂಕಿನ 28, ಯಡ್ರಾಮಿ ತಾಲ್ಲೂಕಿನ 13, ಕಮಲಾಪೂರ ತಾಲ್ಲೂಕಿನ 25 ಮತ್ತು ಸೇಡಂ ತಾಲ್ಲೂಕಿನ 8 ಗ್ರಾಮಗಳನ್ನು ಕುಡಿಯುವ ನೀರಿನ ಸಮಸ್ಯೆ ಉದ್ಭವಿಸುವ ಗ್ರಾಮಗಳೆಂದು ಗುರುತಿಸಲಾಗಿದ್ದು, ಈ ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ನೀಗಿಸಲು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ತಾಲ್ಲೂಕ ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿಯನ್ನು ನಿರ್ಮಿಸಲಾಗಿದ್ದು, ಶಾಸಕರ ಅಧ್ಯಕ್ಷತೆಯಲ್ಲಿ ಮತ್ತು ತಹಶೀಲ್ದಾರ ಹಾಗೂ ತಾಲ್ಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕುಡಿಯುವ ನೀರಿಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಜಂಟಿ ಪರಿಶೀಲನೆ ಮಾಡಿ ಸಮಸ್ಯೆ ಇರುವ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುತ್ತಿದೆ. ಅಲ್ಲದೆ ಜಿಲ್ಲೆಯಲ್ಲಿ ಒಟ್ಟು 328 ಖಾಸಗಿ ಬೋರ್‌ವೆಲ್‌ಗಳನ್ನು ಗುರುತಿಸಲಾಗಿದ್ದು, ಅಗತ್ಯವಿದ್ದಲ್ಲಿ ಹೆಚ್ಚು ನೀರಿನ ಸಮಸ್ಯೆ ಎದುರಿಸುತ್ತಿರುವ ಹಳ್ಳಿಗಳಿಗೆ ನೀರು ಸರಬರಾಜು ಮಾಡಲು ಜಿಲ್ಲಾಡಳಿತವು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ 4 ಟ್ಯಾಂಕರ್ಗಳು ಸಿದ್ದವಿದ್ದು, ಸ್ಥಳೀಯ ಸಂಸ್ಥೆಗಳಲ್ಲಿ 9000 ಲೀಟರ್ ಸಾಮರ್ಥ್ಯವುಳ್ಳ 7 ಟ್ಯಾಂಕರ್‌ಗಳಿದ್ದು, ನೀರಿನ ಕೊರತೆ ಕಂಡುಬಂದ ಗ್ರಾಮಗಳಿಗೆ ಹಾಗೂ ನಗರ ಸ್ಥಳೀಯ ಸಂಸ್ಥೆ ವಾರ್ಡ್‌ಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುವುದು ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಾದ ಬಿ.ಫೌಜಿಯಾ ತರನ್ನುಮ್ ಅವರು ತಿಳಿಸಿದ್ದಾರೆ.

> **ಜಿಲ್ಲೆಯ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರು ಪೂರೈಕೆಗೆ ಮನವಿ ಬಂದ 24 ಗಂಟೆಯೊಳಗಾಗಿ ಕಡ್ಡಾಯವಾಗಿ ಸ್ಪಂದಿಸಬೇಕು ಎಂದು ಎಲ್ಲಾ ತಾಲ್ಲೂಕ ಮಟ್ಟದ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಜಿಲ್ಲಾಧಿಕಾರಿಗಳ ಕಾರ್ಯಾಲಯ ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ ಹಾಗೂ ಜಿಲ್ಲೆಯ ಎಲ್ಲಾ ತಹಶೀಲ್ದಾರರ ಕಚೇರಿಯಲ್ಲಿ ಗ್ರಾಮೀಣ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ ಸಂಬಂಧದಲ್ಲಿ ಸಹಾಯವಾಣಿ ಆರಂಭಿಸಲಾಗಿದೆ. ಸಹಾಯವಾಣಿ ಕೇಂದ್ರಗಳು ಪ್ರತಿದಿನ ಬೆಳಿಗ್ಗೆ 10 ಗಂಟೆಯಿಂದ ಸಾಯಂಕಾಲ 5.30ರವರೆಗೆ ಕಾರ್ಯನಿರ್ವಹಿಸಲಿವೆ** -ಜಿಲ್ಲಾಧಿಕಾರಿ

### ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975ರ ಸೆಕ್ಷನ್ 5ರ ಪ್ರಕಾರ ಜಿಲ್ಲಾ ಮಟ್ಟದ ಸಮಿತಿ ಸಭೆ

## ಅಗತ್ಯ ಸೌಲಭ್ಯ ಒದಗಿಸಲು ಕ್ರಮ ವಹಿಸಿ: ಜಿಲ್ಲಾಧಿಕಾರಿ

• ಉದಯವಾಹಿನಿ ವಿಜಯಪುರ

ನಗರದ ಟಕ್ಕೆಯಲ್ಲಿರುವ ಸ್ಥಳೀಯ ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ನಿರಾಶ್ರಿತರಿಗೆ ಸಂಬಂಧಿಸಿದ ಇಲಾಖೆಗಳು ಅಗತ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ ನಿರಾಶ್ರಿತರಿಗೆ ಆಶ್ರಯ ಒದಗಿಸಲು ಕ್ರಮ ವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬೆಳಿಗ್ಗೆ ನಡೆದ ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975ರ ಸೆಕ್ಷನ್ 5ರ ಪ್ರಕಾರ ಜಿಲ್ಲಾ ಮಟ್ಟದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮದಂತೆ ಭಿಕ್ಷಾಟನೆ ಮಾಡುತ್ತಿರುವವರನ್ನು ರಕ್ಷಿಸಿ ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ಆಶ್ರಯ ಒದಗಿಸಲಾಗುತ್ತದೆ. ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳು ಒಳಗೊಂಡಂತೆ ನಗರದಲ್ಲಿ ಪರಿಹಾರ ಕೇಂದ್ರ ಕಾರ್ಯನಿರ್ವಹಿಸುತ್ತಿದ್ದು, ಈ ಕೇಂದ್ರದಲ್ಲಿ 150 ನಿರಾಶ್ರಿತರಿಗೆ ಆಶ್ರಯ ಒದಗಿಸಲಾಗಿದ್ದು, ಈ ಪೈಕಿ 91 ಬೇರೆ ರಾಜ್ಯದವರಾಗಿದ್ದಾರೆ ಎಂದರು. ಕೇಂದ್ರದಲ್ಲಿನ ನಿರಾಶ್ರಿತರಿಗೆ ಟೇಲರಿಂಗ್, ಲಾಂಡ್ರಿ ಸೇರಿದಂತೆ ಅವರ ಕೌಶಲ್ಯಕ್ಕನುಸಾರವಾಗಿ ಸೂಕ್ತ ತರಬೇತಿ ಒದಗಿಸಲು ಕ್ರಮ ವಹಿಸಬೇಕು.

ಕೇಂದ್ರದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಬೀದಿ ದೀಪಗಳನ್ನು ಸಮರ್ಪ'ವಾಗಿ ನಿರ್ವಹಣೆ ಮಾಡಬೇಕು. ಕೇಂದ್ರದ ಆವರಣದಲ್ಲಿ ಉತ್ತಮವಾದ ಸ್ವಚ್ಛ ಪರಿಸರಕ್ಕೆ ಆದ್ಯತೆ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಭಿಕ್ಷಾಟನೆ ನಿರ್ಮೂಲನೆಯ ಕರಪತ್ರ ಬಿಡುಗಡೆ ಹಾಗೂ ಪ್ರಚಾರ ವಾಹನಕ್ಕೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಚಾಲನೆ ನೀಡಿದರು.

> **ಆಶ್ರಯ ಪಡೆದವರಲ್ಲಿ 45 ಜನ ಮಾನಸಿಕ ಅಸ್ವಸ್ಥರಿದ್ದು, ಕೆಲವರು ವಿವಿಧ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಕಾಲಕಾಲಕ್ಕೆ ಕೌನ್ಸೆಲಿಂಗ್ ನಡೆಸಬೇಕು. ಕಾಲಕಾಲಕ್ಕೆ ಸಮಾಲೋಚನೆ ನಡೆಸಬೇಕು. ಆರೋಗ್ಯ ತಪಾಸಣೆ ನಡೆಸಬೇಕು. ದೀರ್ಘಾವಧಿ ಕಾಯಿಲೆ ಇರುವವರಿಗೆ ಸೂಕ್ತ ಔಷಧೋಪಚಾರ ಒದಗಿಸಿ ಗುಣಪಡಿಸಲು ಕ್ರಮ ವಹಿಸಬೇಕು ಎಂದು ಅವರು ಸೂಚನೆ ನೀಡಿದರು** -ಜಿಲ್ಲಾಧಿಕಾರಿ


ಉದಯವಾಹಿನಿ ಚಿತ್ರ

**ಶೇ3ರಷ್ಟು ಕರ ಆದ್ಯತೆ ಮೇಲೆ ನೀಡಬೇಕು**

**ಭಿಕ್ಷಾಟನೆ ಮಾಡುವವರಿಗೆ ಸಂರಕ್ಷಿಸುವುದು, ರಕ್ಷಿತರನ್ನು ಅವರ ಕೌಶಲ್ಯದ ಆಧಾರದ ಮೇಲೆ ಅವರಿಗೆ ತರಬೇತಿ ನೀಡಿ, ಮುಂದಿನ ದಿನಗಳಲ್ಲಿ ಭಿಕ್ಷಾಟನೆಗಿಳಿಯದೇ ಅವರ ಜೀವನ ಸುಧಾರಿಸಿಕೊಳ್ಳುವ ನಿಟ್ಟಿನಲ್ಲಿ ಕೇಂದ್ರ ಕಾರ್ಯ ನಿರ್ವಹಿಸಲು, ನಿರಾಶ್ರಿತರ ಕೇಂದ್ರದ ಸಮರ್ಪಕ ನಿರ್ವಹಣೆಗೆ ವಿವಿಧ ಇಲಾಖೆಗಳ ಸಹಕಾರವು ಅತ್ಯಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಗ್ರಾಮ ಪಂಚಾಯತ್, ಜಿಲ್ಲಾ ಪಂಚಾಯತ್ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಶೇ3ರಷ್ಟು ಕರ ಆದ್ಯತೆ ಮೇಲೆ ನೀಡಬೇಕು. ಯಾವುದೇ ಕಾರಣಕ್ಕೂ ವಿಳಂಬ ಮಾಡಬಾರದು ಎಂದು ಹೇಳಿದರು.**

**ನಿರಾಶ್ರಿತ ಕೇಂದ್ರ ನಿರ್ವಹಣೆಗೆ ಮೆಚ್ಚುಗೆ**

**ನಿರಾಶ್ರಿತರ ಕೇಂದ್ರಕ್ಕೆ ಇತ್ತೀಚಿಗೆ ಭೇಟಿ ನೀಡಿದಾಗ ಅಲ್ಲಿನ ಸ್ವಚ್ಛ, ಶುದ್ಧ ಪರಿಸರ, ಆವರಣದಲ್ಲಿ ಬೆಳೆದಿರುವ ಗಿಡ-ಮರಗಳ ಹಸಿರು ವಾತಾವರಣ, ಕುರಿತಂತೆ ಮೆಚ್ಚುಗೆ ವ್ಯಕ್ತಪಡಿಸಿದ ಜಿಲ್ಲಾಧಿಕಾರಿಗಳು, ಈ ಮಾದರಿಯಲ್ಲಿಯೇ ಜಿಲ್ಲೆಯಲ್ಲಿನ ಎಲ್ಲಾ ಸರ್ಕಾರಿ ಕಚೇರಿ ಆವರಣದಲ್ಲಿ ಸ್ವಚ್ಛತೆ ಹಾಗೂ ಹಸರೀಕರಣಕ್ಕೆ ಆದ್ಯತೆ ನೀಡುವಂತೆ ಅವರು ಸೂಚನೆ ನೀಡಿದರು.**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ನೀವು ಧೀರ್ಘಕಾಲೀನ ಅನಾರೋಗ್ಯದ ಚೇತರಿಸಿಕೊಳ್ಳುತ್ತೀರಿ. ಆದರೆ ಸ್ವಾರ್ಥಿಗಳಾದ, ಮುಂಗೋಪಿ ವ್ಯಕ್ತಿಯ ಸಹವಾಸವನ್ನು ತಪ್ಪಿಸಿ , ಅವರು ನಿಮ್ಮ ಮೇಲೆ ಒತ್ತಡ ಹಾಕಬಹುದು.

**ವೃಷಭ** ನಿಮ್ಮ ದೊಡ್ಡ ಆಸ್ತಿಯೆಂದರೆ ನಿಮ್ಮ ಹಾಸ್ಯಪ್ರಜ್ಞೆಯಾಗಿದೆ ಇದನ್ನು ನಿಮ್ಮ ಅನಾರೋಗ್ಯ ಗುಣಪಡಿಸಲು ಬಳಸಲು ಪ್ರಯತ್ನಿಸಿ. ದೀರ್ಘ ಕಾಲ ಬಾಕಿಯಿದ್ದ ಬಾಕಿಗಳು ಕೊನೆಗೂ ದೊರಕುತ್ತವೆ.

**ಮಿಥುನ** ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಇಂದು ಆನಂದಿಸಬಹುದು. ಮನರಂಜನೆ ಅಥವಾ ಹೊರನೋಟದ ಸುಧಾರಣೆಗಾಗಿ ಹೆಚ್ಚು ಖರ್ಚು ಮಾಡಬೇಡಿ.

**ಕರ್ಕಾಟಕ** ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ.

**ಸಿಂಹ** ಕೆಲಸದಲ್ಲಿ ಹಿರಿಯರಿಂದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ಹಣಕಾಸು ಸ್ಥಿತಿ ಊಹಾಪೋಹ ಅಥವಾ ಅನಿರೀಕ್ಷಿತ ಲಾಭದ ಮೂಲಕ ಸುಧಾರಿಸುತ್ತವೆ.

**ಕನ್ಯಾ** ನಿಮ್ಮ ಸಂಜೆ ವಿಭಿನ್ನ ಪ್ರತಿಕ್ರಿಯೆಗಳಿಂದ ಗುರುತಿಸಲ್ಪಡುತ್ತದೆ , ಇದು ನಿಮ್ಮನ್ನು ಉದ್ವಿಗ್ನವಾಗಿರಿಸಬಹುದು. ಆದರೆ ಹೆಚ್ಚು ಚಿಂತಿಸುವ ಅಗತ್ಯವಿಲ್ಲ, ನಿಮ್ಮ ಸಂತೋಷ ನಿಮಗೆ ನಿರಾಸೆಗಿಂತ ಹೆಚ್ಚು ಆನಂದ ನೀಡುತ್ತದೆ.

**ತುಲಾ** ನೀವು ಇದು ಒಳ್ಳೆಯ ಆರೋಗ್ಯ ಹೊಂದಿರುವುದರಿಂದ ಅದು ನಿಮಗೆ ಯಶಸ್ಸು ನೀಡುವ ಸಾಧ್ಯತೆಯಿದೆ. ಆದರೆ ನಿಮ್ಮ ಶಕ್ತಿಯನ್ನು ನಾಶ ಪಡಿಸುವ ಎಲ್ಲವನ್ನೂ ನೀವಿಂದು ತಪ್ಪಿಸಬೇಕು.

**ವೃಶ್ಚಿಕ** ನೀವು ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು ಇದು ನಿಮ್ಮನ್ನು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಕ್ರಿಯಗೊಳಿಸುತ್ತದೆ. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು.

**ಧನಸ್ಸು** ವಿಶ್ರಾಂತಿ ಪ್ರಮುಖವಾದ ಒಂದು ದಿನ , ಇತ್ತೀಚೆಗೆ ನೀವು ಬಹಳಷ್ಟು ಮಾ ನಸಿಕ ಒತ್ತಡ ಎದುರಿಸುತ್ತಿದ್ದೀರಿ – ಮನೋಲ್ಲಾಸ ಮತ್ತು ಮನೋ ರಂಜನೆ ನಿಮಗೆ ವಿಶ್ರಾಂತಿ ಪಡೆಯಲು ಸಹಾಯ ಮಾಡುತ್ತದೆ.

**ಮಕರ** ನೀವು ವಿಶ್ರಾಂತಿ ಪಡೆಯಲು ಸಾಧ್ಯವಾಗುವ ಒಂದು ದಿನ. ನಿಮ್ಮ ಸ್ನಾಯುಗಳಿಗೆ ವಿಶ್ರಾಂತಿ ನೀಡಲು ತೈಲದಿಂದ ನಿಮ್ಮ ದೇಹಕ್ಕೆ ಮಸಾಜ್ ಮಾಡಿ. ನೀವು ಸಂಪ್ರದಾಯಬದ್ಧ ಹೂಡಿಕೆಗಳನ್ನು ಮಾಡಿದಲ್ಲಿ ಒಳ್ಳೆಯ ಹಣ ಮಾಡುತ್ತೀರಿ.

**ಕುಂಭ** ನೀವು ಮೊದಲ ನೋಟದಲ್ಲೇ ಪ್ರೀತಿಯಲ್ಲಿ ಬೀಳಬಹುದು. ನಿಮ್ಮ ಬಾಸ್, ಹಿರಿಯರನ್ನು ನಿಮ್ಮಲ್ಲಿ ಆಮಂತ್ರಿಸಲು ಒಳ್ಳೆಯ ದಿನವಲ್ಲ. ನೀವು ಅನೇಕ ಬರಿ ನಿಮಗಾಗಿ ಸಮಯವನ್ನು ನೀಡುವುದು ಮರೆತುಹೋಗುತ್ತೀರಿ.

ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ. ಜನರು ಮತ್ತು ಅವರ ಉದ್ದೇಶಗಳ ಬಗ್ಗೆ ಅವಸರದ ತೀರ್ಮಾನ ಕೈಗೊಳ್ಳಬೇಡಿ.

### ಹಾಸ್ಟೆಲ್‌ಗಳಲ್ಲಿ ಮ್ಯಾನ್ಯುಯಲ್ ಹಾಜರಾತಿ ಮೂಲಕವೇ ವಿದ್ಯಾರ್ಥಿಗಳ ಲೆಕ್ಕ ಕೊಟ್ಟು ಹಣ ಲೂಟಿ:ಪುಲೆ

# ಬಿ.ಸಿ.ಎಮ್ ಜಿಲ್ಲಾಧಿಕಾರಿ ಸಂಗೀತಾರನ್ನು ಕೂಡಲೇ ಅಮಾನತು ಮಾಡಿ

• ಉದಯವಾಹಿನಿ ಬೀದರ್

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳಾದ ಸಂಗೀತಾ ಬಿರಾದಾರ್ ಅವರನ್ನು ಕೂಡಲೇ ಅಮಾನತ್ತು ಮಾಡಬೇಕೆಂದು ಪ್ರಜಾಪ್ರಭುತ್ವ ಸಂರಕ್ಷಣಾ ಸಮಿತಿಯ ಸಂಸ್ಥಾಪಕ ಅಧ್ಯಕ್ಷರಾದ ಗಗನ್ ಫುಲೆ ಆಗ್ರಹಿಸಿದರು

ಮಂಗಳವಾರ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ರಾಜ್ಯ ಸರಕಾರ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿಗೆ ಬಯೋಮೆಟ್ರಿಕ ಕಡ್ಡಾಯಗೊಳಿಸಿದೆ. ಆದರೆ ಬಹುತೇಕ ಹಾಸ್ಟೆಲ್‌ಗಳಲ್ಲಿ ಮ್ಯಾನ್ಯುಯಲ್ ಹಾಜರಾತಿ ಮೂಲಕವೇ ವಿದ್ಯಾರ್ಥಿಗಳ ಲೆಕ್ಕ ಕೊಟ್ಟು ಹಣ ಲೂಟಿ ಹೊಡೆಯುತ್ತಿದ್ದಾರೆ ಎಂದು ಆರೋಪಿಸಿದರು.

ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ಪ್ರಾಥಮಿಕ, ಪ್ರೌಢ ಶಿಕ್ಷಣ ಹಾಗೂ ಮೆಟ್ರಿಕ್ ನಂತರದ ಪಿಯುಸಿ, ಪದವಿ ಶಿಕ್ಷಣ ಮುಂದುವರಿಸುವುದನ್ನು ಪ್ರೋತ್ಸಾಹಿಸಲು ರಾಜ್ಯ ಸರಕಾರ, ಮೆಟ್ರಿಕ್ ಪೂರ್ವ ಹಾಗೂ '' ಮೆಟ್ರಿಕ್ ನಂತರದ ಹಾಸ್ಟೆಲ್‌ಗಳನ್ನು ಪ್ರಾರಂಭಿಸಿದೆ. ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗಳಿಗೆ ಪ್ರವೇಶ ಪಡೆದ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ತಲಾ 1,750 ರೂ ಹಾಗೂ ಮೆಟ್ರಿಕ್ ನಂತರ ವಿದ್ಯಾರ್ಥಿಗಳಿಗೆ ತಲಾ, 1,850 ರೂ, ಊಟ, ತಿಂಡಿಯ ವೆಚ್ಚ ಭರಿಸಲಾಗುತ್ತಿದೆ. 10 ತಿಂಗಳ ಅವಧಿಗೆ ಉಚಿತ ವಸತಿ, ಆಹಾರ, ಸಮವಸ್ತ್ರ ಹಾಗೂ ಇತರೆ ಸೌಲಭ್ಯಗಳಿಗೂ ಹಣ ಒದಗಿಸುತ್ತಿದೆ.


ಉದಯವಾಹಿನಿ ಚಿತ್ರ

**ನೂರಕ್ಕೆ ನೂರರಷ್ಟು ಹಾಜರಾತಿ**

**ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿನದಲ್ಲಿ ಬರುವ ಮೆಟ್ರಿಕ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ದಿನಾಲು 15 ರಿಂದ 20 ವಿದ್ಯಾರ್ಥಿಗಳು ಮಾತ್ರ ಬಯೋಮೆಟ್ರಿಕ ಹಾಜರಾತಿ ಹಾಕಿ ಊಟ ಮಾಡುತ್ತಾರೆ, ಆದರೆ ಎಲ್ಲಾ ಮೆಟ್ರಿಕ ಪೂರ್ವ ವಸತಿ ನಿಲಯಗಳ ಮೇಲ್ವಿಚಾರಕರು ಶೇಕಡಾ ನೂರಕ್ಕೆ ನೂರರಷ್ಟು ನಿಲಯಾರ್ಥಿಗಳ ಮ್ಯಾನುವಲ ಹಾಜರಾತಿ ಪುಸ್ತಕದಲ್ಲಿ ಹಾಜರಾತಿ ಹಾಕುತ್ತಾರೆ.**

**ಆಧಾರ್ ಆಧಾರಿತ ಬಯೋಮೆಟ್ರಿಕ್ ವ್ಯವಸ್ಥೆ ಜಾರಿಗೆ ಆಗ್ರಹ**

**''ಇಲಾಖೆಯ ಹಾಸ್ಟೆಲ್‌ಗಳಲ್ಲಿ ಅಳವಡಿಸಲಾಗಿರುವ ಬಯೋಮೆಟ್ರಿಕ್ ಯಂತ್ರಗಳ ಮೂಲಕ ಒಬ್ಬ ವಿದ್ಯಾರ್ಥಿ ಮೂಲಕವೇ ಐದು ಮಂದಿಯ ಹಾಜರಾತಿ ದಾಖಲು ಮಾಡಲಾಗುತ್ತಿರುವ ಆರೋಪವೂ ಇದೆ. ಹಾಗಾಗಿ ಆಧಾರ್ ಆಧಾರಿತ ಬಯೋಮೆಟ್ರಿಕ್ ವ್ಯವಸ್ಥೆ ಜಾರಿಗೆ ತರಬೇಕು. ಆಗ ಅನುದಾನ ದುರ್ಬಳಕೆ ತಡೆಯಬಹುದಾಗಿದೆ ಎಂದರು.**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು ರಾಜ್ಯದ ಎಲ್ಲಾ ಜಿಲ್ಲಾ ಕಲ್ಯಾಣಾಧಿಕಾರಿಗಳಿಗೆ ಸೂಚಿಸಿರುತ್ತಾರೆ. ಆದರೆ ಬೀದರ ಜಿಲ್ಲೆಯ ಜಿಲ್ಲಾ ಕಲ್ಯಾಣಾಧಿಕಾರಿ ಸಂಗೀತಾ ಎಸ್. ಬಿರಾದಾರ ರವರು 26-07-2022 ರಿಂದ ಮಾರ್ಚ 2025ರ ವರೆಗೆ ಮಾನ್ಯ ಸಚಿವರ ಟಿಪ್ಪಣಿಯನ್ನು ಪಾಲಿಸದೇ ಹಿಂದಿನಂತೆಯೇ ಆಹಾರ ವೆಚ್ಚದ ಬಿಲ್ಲುಗಳನ್ನು ಮ್ಯಾನ್ಯುವಲ ಹಾಜರಾತಿ ಪ್ರಕಾರ ಪಾಸ ಮಾಡುತ್ತಿರುವುದು ಕಂಡು ಬಂದಿದೆ ಎಂದರು.

**ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿರುವ ಹಾಸ್ಟೆಲ್‌ಗಳಲ್ಲಿ ಬಯೋಮೆಟ್ರಿಕ್ ಅಳವಡಿಸಲಾಗಿದೆ.ಆದರೆ, ತಾಂತ್ರಿಕ ಸಮಸ್ಯೆಯ ನೆಪವೊಡ್ಡುತ್ತಿರುವ ಹಾಸ್ಟೆಲ್ ವಾರ್ಡನ್‌ಗಳು, ಮ್ಯಾನ್ಯುಯಲ್ ಮೂಲಕ ವಿದ್ಯಾರ್ಥಿಗಳ ಹಾಜರಾತಿ ಪಡೆಯುತ್ತಿದ್ದಾರೆ. ವಿದ್ಯಾರ್ಥಿಗಳು ಗೈರಾಗಿದ್ದರೂ, ಹಾಜರಾತಿ ಲೆಕ್ಕ ಕೊಡುತ್ತಿದ್ದಾರೆ. ಇದನ್ನು ಪರಿಶೀಲಿಸಿದ ಮೇಲಾಧಿಕಾರಿಗಳು, ಬಿಲ್ ಬಿಡುಗಡೆ ಮಾಡುತ್ತಿದ್ದಾರೆ. ಹೀಗಾಗಿ ಮ್ಯಾನ್ಯುಯಲ್ ಹಾಜರಾತಿ ಸಂಖ್ಯೆ ದ್ವಿಗುಣಗೊಂಡು ಹಣ ಮ್ಯಾನ್ಯುಯಲ್ ದುರ್ಬಳಕೆಯಾಗುತ್ತಿದೆ. ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಅಕ್ರಮದ ಮಾಹಿತಿ ಇದ್ದರೂ ಜಾಣ ಕುರುಡರಾಗಿದ್ದಾರೆ -ಗಗನ್ ಫುಲೆ**

ಪ್ರತಿ ಮೆಟ್ರಿಕ ಪೂರ್ವ ವಸತಿ ನಿಲಯದಲ್ಲಿ ಪ್ರತಿ ತಿಂಗಳು 30-40 ವಿದ್ಯಾರ್ಥಿಗಳ ಆಹಾರ ವೆಚ್ಚದ ಬಿಲ್ಲುಗಳನ್ನು ಭೋಗಸ ಬಿಲ್ಲುಗಳನ್ನು ಮಾಡುತ್ತಿದ್ದಾರೆ. ಅದೇ ರೀತಿ ಮೆಟ್ರಿಕ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಕೂಡಾ ದಿನಾಲು 30-40 ವಿದ್ಯಾರ್ಥಿಗಳು ಮಾತ್ರ ಬಯೋಮೆಟ್ರಿಕ ಹಾಜರಾತಿ ಹಾಕಿ ಬೆಳಗಿನ ಉಪಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟ ಮಾಡುತ್ತಾರೆ ಆದರೆ ಎಲ್ಲಾ ಮೆಟ್ರಿಕ ನಂತರದ ವಸತಿ ನಿಲಯಗಳ ನಿಲಯ ಪಾಲಕರು ಶೇಕಡಾ ನೂರಕ್ಕೆ ನೂರರಷ್ಟು ನಿಲಯಾರ್ಥಿಗಳ ಮ್ಯಾನುವಲ್ ಹಾಜರಾತಿ ಪುಸ್ತಕದಲ್ಲಿ ಹಾಜರಾತಿ ಹಾಕುತ್ತಾರೆ.

ಪ್ರತಿ ಮೆಟ್ರಿಕ ನಂತರ ವಸತಿ ನಿಲಯದಲ್ಲಿ ಪ್ರತಿ ತಿಂಗಳು ಗೈರು ಹಾಜರಾದ 50-60 ವಿದ್ಯಾರ್ಥಿಗಳ ಆಹಾರ ವೆಚ್ಚದ ಬಿಲ್ಲುಗಳನ್ನು ಬೋಗಸ ಮಾಡುತ್ತಿದ್ದಾರೆ.

ಜಿಲ್ಲೆಯ ಕೆಲ ವಸತಿ ನಿಲಯಗಳಲ್ಲಿ ಖಾಯಂ ಅಡುಗೆವರಾಗಿ ನೇಮಕವಾಗಿ ಕೆಲಸ ಮಾಡದೇ ಮನೆಯಲ್ಲಿಯೆ ಕುಳಿತುಕೊಂಡು ಮೇಲಾಧಿಕಾರಿಗಳಿಗೆ ಲಂಚ ಕೊಟ್ಟು ವೇತನ ಪಡೆಯುತ್ತಿದ್ದಾರೆ ಎಂದು ದೂರಿದರು. ವೆಂಕಟರಾವ ಮೋರೆ, ವಿನೋದ ರತ್ನಾಕರ, ಜಯವರ್ಧನ ಫುಲೆ, ಕಲ್ಲಪ್ಪ ಹಾಲಿಪುರ್ಗೆ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ನಗರಸಭೆ ಅಧ್ಯಕ್ಷ ಎಂ ಸಮಿಉಲ್ಲಾ ನೇತ್ರತ್ವದಲ್ಲಿ


### 100% ವಿಕಲಚೇತನರಿಗೆ ರಾಜ್ಯ ಹಣಕಾಸು ಮುಕ್ತ ನಿಧಿ ಅನುದಾನ ಬಳಕೆ

• ಉದಯವಾಹಿನಿ ಅರಸೀಕೆರೆ

ಅರಸಿಕೆರೆ ನಗರಸಭೆ ವತಿಯಿಂದ 2024 25ರ ಸಾಲಿನ ಶೇಕಡ 5% ವಿಕಲ ಚೇತನರಿಗೆ ಅರಸೀಕೆರೆ ನಗರಸಭೆ ವತಿಯಿಂದ 1.5ಲಕ್ಷ ರೂ ಸಬ್ಸಿಡಿ ಹಣ ನೀಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ನಗರಸಭೆಯ ಅಧ್ಯಕ್ಷ ಎಂ ಸಮಿಉಲ್ಲಾ 24-25ರ ಸಾಲಿನ ವಿಕಲನ ಚೇತನರಿಗೆ ಮೀಸಲಾಗಿದ್ದ ಈ ವರ್ಷದ 4 ಲಕ್ಷ ಅನುದಾನ ದಲ್ಲಿ ಈವರೆಗೆ 3ಲಕ್ಷ 30 ಸಾವಿರ ಫಲಾನುಭವಿಗಳಿಗೆ ವಿತರಿಸಲಾಗಿದೆ ಉಳಿದ 70 ಸಾವಿರ ಮಾರ್ಚ್ ಅಂತಕ್ಕೆ ಫಲಾನುಭವಿಗಳಿಗೆ ವಿತರಿಸಲಾಗುವುದು ಎಂದುರು .

ವಿಕಲಚೇತನರಾದ ಜೋ ಫ್ರ್ಯಾನ್ಸಿಸ್ ರವರಿಗೆ 1.50 ಲಕ್ಷ ಚೆಕ್ ವಿತರಿಸಲಾಯಿತು ಅರಸೀಕೆರೆ ನಗರಸಭೆ ವತಿಯಿಂದ ಒಟ್ಟು 3 ಜನ ಫಲಾನುಭವಿಗಳಿಗೆ ಸಬ್ಸಿಡಿ ಹಣ ನೀಡಲಾಗಿದೆ


ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ನಗರಸಭೆ ಪೌರಾಯುಕ್ತ ಕೃಷ್ಣಮೂರ್ತಿ, ನಗರಸಭಾ ಸದಸ್ಯರಾದ ಜಿ ಟಿ ಗಣೇಶ್, ನಗರ ಸಭೆ ವ್ಯವಸ್ಥಾಪಕ ಜಮೀರ್, ಸಮುದಾಯ ಸಂಘಟಕ ರಾಜಶೇಖರ್, ಮುಖಂಡರಾದ ಹರೀಶ್, ಟಿಪ್ಪು, ಜಿಲ್ಲಾ ಒಕ್ಕೂಟ ಅಧ್ಯಕ್ಷರಾದ ಸೈಯದ್ ಸಿಕಂದರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

### ಮುಂದಿನ ದಿನದಲ್ಲಿ ಈ ಕಾರ್ಯಕ್ಕೆ ಯಶಸ್ಸು ಖಚಿತವಾಗಿ ದೊರೆಯಲಿ

# ಉ.ಕ. ಜಿಲ್ಲೆ ಸೈಬರ್ ಅಪರಾಧ ಮುಕ್ತವಾಗಲಿ: ಸತೀಶ ಕೆ. ಸೈಲ್

• ಉದಯವಾಹಿನಿ ಕಾರವಾರ

ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ನೇತೃತ್ವದಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಮಾದಕ ದ್ರವ್ಯ ಹಾಗೂ ಸೈಬರ್ ಅಪರಾಧ ಮುಕ್ತ ಜಿಲ್ಲೆಯನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದು ಮುಂದಿನ ದಿನದಲ್ಲಿ ಈ ಕಾರ್ಯಕ್ಕೆ ಯಶಸ್ಸು ಖಚಿತವಾಗಿ ದೊರೆಯಲಿದೆ ಎಂದು ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕನ್ಸಲ್ಟಂಟ್ ಆಂಡ್ ಏಜೆನ್ಸಿಸ್ ಅಧ್ಯಕ್ಷ ಸತೀಶ ಕೆ. ಸೈಲ್ ಹೇಳಿದರು.

ಅವರು ಉತ್ತರ ಕನ್ನಡ ಜಿಲ್ಲಾ ಪೊಲೀಸ್ ವತಿಯಿಂದ ಕಾರವಾರ ರವೀಂದ್ರನಾಥ ಠಾಗೋರ ಕಡಲ ತೀರದಲ್ಲಿ ಮಾದಕ ದ್ರವ್ಯ ಹಾಗೂ ಸೈಬರ್ ಅಪರಾಧ ಮುಕ್ತ ಕರ್ನಾಟಕ 2025ರ ಮ್ಯಾರಥಾನ್ 5 ಕಿ.ಮೀ. ಓಟಕ್ಕೆ ಚಾಲನೆ ನೀಡಿ ಮಾತನಾಡಿದರು.


ಉದಯವಾಹಿನಿ ಚಿತ್ರ

ಮ್ಯಾರಥಾನ್ ಸ್ಪರ್ಧೆಯಲ್ಲಿ ಉತ್ಸುಕರಾಗಿ 1000 ಅಧಿಕ ಜನರು ನೋಂದಣಿ ಮಾಡಿಕೊಂಡು ಸ್ಪರ್ಧೆಯಲ್ಲಿ ಭಾಗವಹಿಸಿರುವುದನ್ನು ಕಂಡು ಹರ್ಷ ವ್ಯಕ್ತಪಡಿಸಿ ಎಲ್ಲರಿಗೂ ಶುಭ ಕೋರಿದರು.

ಮ್ಯಾರಥಾನ ಓಟವು ರವೀಂದ್ರನಾಥ ಕಡಲ ತೀರದಿಂದ ಪ್ರಾರಂಭವಾಗಿ ಬಿಲ್ಟ್ ಸರ್ಕಲ್, ಸವಿತ, ಮಾಲಾದೇವಿ, ಕಾಜುಭಾಗ್, ಅರ್ಜುನ ಚಿತ್ರಮಂದಿರ, ಎಸ್.ಪಿ. ಆಫೀಸ್ ಮೂಲಕ ರವೀಂದ್ರನಾಥ ಟಾಗೋರ್ ಕಡಲ ತೀರದಲ್ಲಿ ತಲುಪಿ ಮುಕ್ತಾಯವಾಯಿತು.

**ಪ್ರತಿಯೊಬ್ಬರು ದೈಹಿಕ ಆರೋಗ್ಯ ಕಾಪಾಡಿಕೊಳ್ಳುವುದು ಬಹಳ ಮುಖ್ಯ. ಆದ್ದರಿಂದ ದೈಹಿಕವಾಗಿ ಸದೃಢರಾಗಲು ಪ್ರತಿ ದಿನ ಸ್ವಲ್ಪ ಸಮಯವನ್ನು ಮೀಸಲಿಡಿ**
**-ಕೆ. ಲಕ್ಷ್ಮೀಪ್ರಿಯಾ, ಜಿಲ್ಲಾಧಿಕಾರಿ**

### ವಿಶೇಷ ಘಟಕಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ

# ಪತ್ರಕರ್ತರಿಗೆ Mo-Jo-Kit ನೀಡಲು ಅರ್ಜಿ ಆಹ್ವಾನ

• ಉದಯವಾಹಿನಿ ಚಿತ್ರದುರ್ಗ

ಕರ್ನಾಟಕ ಮಾಧ್ಯಮ ಅಕಾಡೆಮಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಪತ್ರಕರ್ತರಿಗೆ ಉತ್ತೇಜನ ನೀಡುವ ಸಲುವಾಗಿ ಉಚಿತವಾಗಿ Mo-Jo-Kit ಗಳನ್ನು ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದ ಅರ್ಜಿದಾರರು ಈ ಕೆಳಕಂಡ ಷರತ್ತು ಗೊಳಪಟ್ಟು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿದಾರರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಮಾನ್ಯತೆ ಪಡೆದ ಪತ್ರಕರ್ತರಾಗಿರಬೇಕು ಅಥವಾ ವಾರ್ತಾ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಪತ್ರಿಕೆಗಳಲ್ಲಿ ಅಥವಾ ಉಪಗ್ರಹ ಸುದ್ದಿ ವಾಹಿನಿಗಳಲ್ಲಿ ಕಾರ್ಯನಿರ್ವಹಿಸುತ್ತಿರಬೇಕು. ಮಾಧ್ಯಮಕ್ಷೇತ್ರದಲ್ಲಿ ಕನಿಷ್ಠ 10 ವರ್ಷಗಳ ಅನುಭವವಿರಬೇಕು ಹಾಗೂ ಇದಕ್ಕೆ ಸಂಬಂಧಿಸಿದ ಪೂರಕ ದಾಖಲೆಗಳನ್ನು ಒದಗಿಸಬೇಕು. ಪತ್ರಿಕೆಯ ಸಂಪಾದಕರಾಗಿದ್ದಲ್ಲಿ ಪತ್ರಿಕೆಯು ವಾರ್ತಾ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿ ಸೇರಿರಬೇಕು.

ಅರ್ಜಿದಾರರು ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯ ವಾಗಿ ಸಲ್ಲಿಸಬೇಕು. ತಾವು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳ ಮುಖ್ಯಸ್ಥರಿಂದ ಸೇವಾ ದೃಢೀಕರಣ ಪತ್ರ ಸಲ್ಲಿಸಬೇಕು. ಈ ಹಿಂದೆ ಕರ್ನಾಟಕ ಮಾಧ್ಯಮ ಅಕಾಡೆಮಿ, ವಾರ್ತಾ ಇಲಾಖೆ ಹಾಗೂ ಇತರೆ ಸರ್ಕಾರಿ ಸಂಸ್ಥೆಗಳಿಂದ ಸೌಲಭ್ಯ ಪಡೆದ ಫಲಾನುಭವಿಗಳಾಗಿದ್ದರೆ, ಅರ್ಜಿ ಸಲ್ಲಿಸುವಂತಿಲ್ಲ.

ಪತ್ರಿಕೆಯು ನಿರಂತರವಾಗಿ ಪ್ರಕಟಗೊಳ್ಳುತ್ತಿದ್ದು, ಪತ್ರಿಕೆ ಮೇಲಾಗಲಿ ಹಾಗೂ ಸಂಪಾದಕರ ಮೇಲಾಗಲಿ ಯಾವುದೇ ರೀತಿಯ ಕ್ರಿಮಿನಲ್ ಅಪರಾಧ ಮೊಕದ್ದಮೆಗಳು ಇರಬಾರದು.

ಸರ್ಕಾರದ ವಿವಿಧ ಸಮಿತಿ/ಸಂಸ್ಥೆಗಳಿಗೆ ನೇಮಕ ಮಾಡಿದ ನಾಮ ನಿರ್ದೇಶಿತ ಸದಸ್ಯರುಗಳನ್ನು ಪರಿಗಣಿಸಲಾಗುವುದಿಲ್ಲ.

ಅಭ್ಯರ್ಥಿಗಳು ಸ್ವಯಂ ಅರ್ಜಿಗಳೊಂದಿಗೆ ಪೂರಕ ದಾಖಲೆಗಳನ್ನು ದಿನಾಂಕ: 20.03.2025 ರೊಳಗಾಗಿ ಇ-ಮೇಲ್ ವಿಳಾಸ: : karnatakamediaacademy@gmail.com ಗೆ ಸಲ್ಲಿಸಬೇಕು ಅಥವಾ ಅಂಚೆ ವಿಳಾಸ: ಕಾರ್ಯದರ್ಶಿಗಳು, ಕರ್ನಾಟಕ ಮಾಧ್ಯಮ ಅಕಾಡೆಮಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ॥. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001 ಇಲ್ಲಿಗೆ ಅರ್ಜಿಗಳನ್ನು ಕಳುಹಿಸಬೇಕು.

## ಅರಣ್ಯ ಇಲಾಖೆ ಕಾರ್ಯಕ್ಕೆ ಕೈ ಜೋಡಿಸಲು ಮನವಿ

• ಉದಯವಾಹಿನಿ ಲಕ್ಷ್ಮೇಶ್ವರ

ತಾಲ್ಲೂಕಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆಯ ಯೋಜನೆಯಡಿ ಸಾಮಾಜಿಕ ಅರಣ್ಯ ಇಲಾಖೆಯಿಂದ ಅರಣ್ಯೀಕರಣಕ್ಕಾಗಿ ಕ್ರಿಯಾಯೋಜನೆಯಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಶೇಕಡ 20ರಷ್ಟು ಕಡ್ಡಾಯವಾಗಿ ಮೀಸಲಿಡಲಾಗುತ್ತಿದೆ.

ತಾಲ್ಲೂಕಿನಲ್ಲಿ ಈಗಾಗಲೇ ಸಾಮಾಜಿಕ ವಲಯ ಅರಣ್ಯ ಇಲಾಖೆಯಿಂದ ರಸ್ತೆ ಬದಿ ಸುಮಾರು 20 ಸಾವಿರಕ್ಕೂ ಹೆಚ್ಚು ಸಸಿಗಳನ್ನು ಬೆಳೆಸಲಾಗುತ್ತದೆ ಈಗ ಬೇಸಿಗೆಕಾಲ ಆಗಿರುವುದರಿಂದ ಹಚ್ಚಿದ ಸಸಿಗಳು ಒಣಗಿ ನಾಶವಾಗಬಾರದು ಎಂಬ ಉದ್ದೇಶದಿಂದ ವಲಯ ಅರಣ್ಯ ಇಲಾಖೆಯ ವತಿಯಿಂದ ಸಸಿಗಳ ಪೋಷಣೆಗಾಗಿ ಟ್ಯಾಂಕರ್‌ಗಳ ಮೂಲಕ ನೀರು ಬಿಡಲಾಗುತ್ತಿದೆ.


ಉದಯವಾಹಿನಿ ಚಿತ್ರ

ಸಾಮಾಜಿಕ ವಲಯ ಅರಣ್ಯ ಇಲಾಖೆಯ ಮೂಲಗಳಿಂದ ಲಭ್ಯವಾಗಿರುವ ಮಾಹಿತಿಯ ಪ್ರಕಾರ ತಾಲ್ಲೂಕಿನಾದ್ಯಂತ ಎಲ್ಲಾ ರಸ್ತೆಗಳ ಬದಿ ಕಳೆದ ನಾಲ್ಕು ವರ್ಷಗಳಿಂದ ಸುಮಾರು 20,000 ಕ್ಕೂ ಹೆಚ್ಚು ಸಸಿಗಳನ್ನು ಬೆಳೆಸಲಾಗುತ್ತಿದ್ದು ಮಳೆಗಾಲದ ವರೆಗೆ ಅವುಗಳನ್ನು ಪೋಷಿಸುವ ಜವಾಬ್ದಾರಿ ಇಲಾಖೆಯ ಹೆಗಲ ಮೇಲಿದೆ.

ಲಕ್ಷಾಂತರ ರೂಪಾಯಿ ಎಂ.ಎನ್.ಆರ್ ಇ.ಜಿ ಯೋಜನೆ ಅಡಿ ಸಸಿಗಳನ್ನು ಬೆಳೆಸಿ ಅವುಗಳನ್ನು ರಸ್ತೆ ಬದಿ ಬೆಳೆಸಲಾಗುತ್ತಿದೆ.

## ಮಾರ್ಚ್ ಮಾಹೆಯಲ್ಲಿ ಪ್ರತಿ ಸದಸ್ಯರಿಗೆ 15 ಕೆ.ಜಿ. ಅಕ್ಕಿ ವಿತರಣೆ

• ಉದಯವಾಹಿನಿ ಚಿತ್ರದುರ್ಗ

ರಾಜ್ಯ ಸರ್ಕಾರದ ಮಹಾತ್ವಾಕಾಂಕ್ಷೆ ಐದು ಗ್ಯಾರಂಟಿ ಯೋಜನೆಯಲ್ಲಿ ಒಂದಾದ ಅನ್ನಭಾಗ್ಯ ಯೋಜನೆಯಡಿ ಪ್ರತಿ ಸದಸ್ಯರಿಗೆ ರೂ.170/-ರಂತೆ ಡಿಬಿಟಿ ಮುಖಾಂತರ ಹಣ ಪಾವತಿಸಲಾಗುತ್ತಿರುತ್ತದೆ. ಫೆಬ್ರವರಿ-2025ರ ಮಾಹೆಯಿಂದ ಪ್ರತಿ ಸದಸ್ಯರಿಗೆ ರೂ.170/-ರ ಡಿಬಿಟಿ ಹಣ ಬದಲಾಗಿ 05 ಕೆ.ಜಿ.ಅಕ್ಕಿಯನ್ನು ವಿತರಿಸಲು ತೀರ್ಮಾನಿಸಲಾಗಿರುತ್ತದೆ.

ಮಾರ್ಚ್-2025ರ ಮಾಹೆಯ ಆಹಾರಧಾನ್ಯ ಬಿಡುಗಡೆಯಾಗಿದ್ದು ಹಾಗೂ ಫೆಬ್ರವರಿ-2025ರ ಮಾಹೆಯ ಆಹಾರಧಾನ್ಯ ಸೇರಿ ಮಾರ್ಚ್-2025ರ ಮಾಹೆಯಲ್ಲಿ ಬಿಪಿಎಲ್ ಪಡಿತರ ಚೀಟಿದಾರರಿಗೆ ಪ್ರತಿ ಸದಸ್ಯರಿಗೆ 15 ಕೆ.ಜಿ.ಅಕ್ಕಿ ಹಾಗೂ ಅಂತ್ಯೋದಯ ಎಎವೈ ಪಡಿತರ ಚೀಟಿದಾರರಿಗೆ 01 ರಿಂದ 03 ಸದಸ್ಯರಿಗೆ 35 ಕೆ.ಜಿ.ಅಕ್ಕಿ, 04 ಸದಸ್ಯರಿಗೆ 45 ಕೆ.ಜಿ.ಅಕ್ಕಿ, 05 ಸದಸ್ಯರಿಗೆ 65 ಕೆ.ಜಿ.ಅಕ್ಕಿ, 06 ಸದಸ್ಯರಿಗೆ 85 ಕೆ.ಜಿ.ಅಕ್ಕಿ, 07 ಸದಸ್ಯರಿಗೆ 105 ಕೆ.ಜಿ.ಅಕ್ಕಿ, 08 ಸದಸ್ಯರಿಗೆ 125 ಕೆ.ಜಿ.ಅಕ್ಕಿ, 09 ಸದಸ್ಯರಿಗೆ 145 ಕೆ.ಜಿ.ಅಕ್ಕಿ ಹಾಗೂ 10 ಸದಸ್ಯರಿಗೆ 165 ಕೆ.ಜಿ ಅಕ್ಕಿ ಮುಂದುವರೆದು 10ಕ್ಕಿಂತ ಮೇಲ್ಪಟ್ಟ ಪಡಿತರ ಚೀಟಿಗೆ ಇದೇ ಅನುಪಾತದಂತೆ ಅಕ್ಕಿ ವಿತರಣೆ ಮಾಡಲಾಗುತ್ತದೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

## ಜೂಜಾಟ:8 ಜನರ ಬಂಧನ

• ಉದಯವಾಹಿನಿ ಕಲಬುರಗಿ

ಕಲಬುರಗಿ-ಜೇವರ್ಗಿ ಮುಖ್ಯ ರಸ್ತೆಯ ರೆಸ್ಟೋರಂಟ್ ಹತ್ತಿರದ ಸಾರ್ವಜನಿಕ ರಸ್ತೆಯ ಮೇಲೆ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಸಿಸಿಬಿ ಘಟಕದ ಪಿಐ ದಿಲೀಪಕುಮಾರ ಬಿ.ಸಾಗರ, ಸಿಬ್ಬಂದಿಗಳಾದ ಮೃತ್ಯುಂಜಯ, ಯಲ್ಲಪ್ಪ, ಅಶೋಕ ಕಟಕೆ, ನಾಗರಾಜ, ಸುನೀಲಕುಮಾರ ಅವರು ದಾಳಿ ನಡೆಸಿ 8 ಜನ ಜೂಜುಕೋರರನ್ನು ಬಂಧಿಸಿದ್ದಾರೆ. ಮಹ್ಮದ್ ಅಜರೋದ್ದಿನ್, ಸಂಗಪ್ಪ ನಾಟೀಕಾರ, ಸಿದ್ದಣಗೌಡ ಪೊಲೀಸ್ ಪಾಟೀಲ, ಮಹಾಂತೇಶ ಜಾಧವ, ಸುರೇಶ ಚವ್ಹಾಣ್, ಯಲ್ಲಪ್ಪ ಪೂಜಾರಿ, ಗಿರೀಶ ರಾಠೋಡ್, ವಿಜಯಕುಮಾರ ರಾಠೋಡ್ ಎಂಬುವವರನ್ನು ಬಂಧಿಸಿ 6,260 ರೂ.ನಗದು ಮತ್ತು 52 ಇಸ್ಪೀಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ.

## ಕಾರು ಜೀಪ್ ಮುಖಾ ಮುಖಿ ಡಿಕ್ಕಿ: ನಾಲ್ವರ ಸ್ಥಿತಿ ಗಂಭೀರ

• ಉದಯವಾಹಿನಿ, ಆಳಂದ

ಸ್ಥಳೀಯ ಪೊಲೀಸ್ ಠಾಣೆಯ ವ್ಯಾಪ್ತಿಯ ಉಮರಗಾ ಹೆದ್ದಾರಿ ಮಾರ್ಗದ ತೆಲಾಕು ಮತ್ತು ಚಿತಲಿ ಗ್ರಾಮದ ನಡುವೆ ಸಂಜೆ ಕಾರು ಮತ್ತು ಕಮಾಂಡರ್ ಜೀಪ್ ನಡುವೆ ಮುಖಾ ಮುಖಿ ಡಿಕ್ಕಿ ಸಂಭವಿಸಿದ ಪರಿಣಾಮ ಜೀಪ್‌ನಲ್ಲಿದ್ದ ಆರು ಕೃಷಿ ಕಾರ್ಮಿಕ ಮಹಿಳೆಯರ ಗಂಭೀರವಾಗಿ ಗಾಯಗೊಂಡು ಘಟನೆ ನಡೆದಿದೆ. ಸರುಬಾಯಿ ಗಿಡ್ಡಪ್ಪ ಕುಶಾಳಕರ್ (35), ಶೋಭಾ ತಿಮ್ಮಣಣಾ ದಂಡಗುಲೆ (35), ಈರಮ್ಮಾ ಮಾರುತಿ ದಂಡಗುಲೆ (42), ಜೀವನ್ಮರಣದ ನಡುವೆ ಹೋರಾಟ ನಡೆಸುತ್ತಿದ್ದು ಪರಿಸ್ಥಿತಿ ಗಂಭೀರವಾಗಿದೆ ಎನ್ನಲಾಗಿದೆ.

### ಕೇವಲ ಶೇ.12ರ ಆಸುಪಾಸಿನಲ್ಲಿದ್ದ ಸಾಕ್ಷರತೆ ಇಂದು ಶೇ. 79.7 ಹಂತಕ್ಕೆ ತಲುಪಿದೆ

# ಸಮಾಜದ ಋಣ ತೀರಿಸುವ ಹೊಣೆ ಮರೆಯದಿರಿ

• ಉದಯವಾಹಿನಿ ಕಲಬುರಗಿ

ಉನ್ನತ ಶಿಕ್ಷಣ ಪಡೆದು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಿಂದ ಹೊರಬರುವ ವಿದ್ಯಾರ್ಥಿಗಳು ಹಡೆದವರ ಋಣದಿಂದ ಹಿಡಿದು ತಮ್ಮನ್ನು ಬೆಳೆಸುವಲ್ಲಿ ಪ್ರಧಾನ ಪಾತ್ರ ವಹಿಸಿದ ಸಮಾಜದ ಋಣ ತೀರಿಸುವ ಹೊಣೆ ನಿಭಾಯಿಸಬೇಕೆಂದು ಇಸ್ರೋ ಅಧ್ಯಕ್ಷ ಹಾಗೂ ಬಾಹ್ಯಾಕಾಶ ಇಲಾಖೆಯ ಕಾರ್ಯದರ್ಶಿ, ಹಿರಿಯ ವಿಜ್ಞಾನಿ ಡಾ.ವಿ.ನಾರಾಯಣನ್ ಕರೆ ನೀಡಿದರು.

ಇಲ್ಲಿನ ಕಡಗಂಚಿ ಸಮೀಪದ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ವಿವಿಧೋದ್ದೇಶ ಸಭಾ ಭವನದಲ್ಲಿ ಎಂಟನೇ ಘಟಿಕೋತ್ಸವ ಉದ್ಘಾಟಿಸಿ ಪ್ರಧಾನ ಭಾಷಣ ಪ್ರಸ್ತುತಪಡಿಸಿದ ಅವರು, ಒಬ್ಬ ಸಮರ್ಥ ವಿದ್ಯಾರ್ಥಿ ರೂಪುಗೊಳ್ಳಬೇಕಾದರೆ ಆತನ ಪೋಷಕರು ತಮ್ಮ ವರ್ತಮಾನ ಮತ್ತು ಭವಿಷ್ಯ ಒಳಗೊಂಡಂತೆ ಬದುಕಿನ ಎಲ್ಲವನ್ನೂ ವ್ಯಯಿಸುತ್ತಾರೆ.

ಇದರ ಜೊತೆಗೆ ದೇಶದ ಅಭಿವೃದ್ಧಿಗಾಗಿ ತೆರಿಗೆ ಪಾವತಿಸುವ ಜನಸಾಮಾನ್ಯನಿಂದ ಹಿಡಿದು ಸಮಾಜದ ಪ್ರತಿಯೊಂದು ವಿಭಾಗ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಆತನ ಕೈ ಹಿಡಿದು ನಡೆಸಿರುತ್ತದೆ. ಹಾಗಾಗಿ, ಎಂಥದ್ದೇ ಪರಿಸ್ಥಿತಿ ಎದುರಾದರೂ ಸಮಾಜದ ಋಣ ತೀರಿಸುವ ನಿಟ್ಟಿನಲ್ಲಿ ಹಿಂದೆ ಬೀಳಬಾರದು ಎಂದು ಕಿವಿಮಾತು ಹೇಳಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಶೇ.97.5ರಷ್ಟು ಜನಸಂಖ್ಯೆ ಬಡತನ ರೇಖೆಗಿಂತಲೂ ಕೆಳಗಿತ್ತು. ಮೇಲಾಗಿ, ಕೇವಲ 32 ವರ್ಷವಿದ್ದ ಜನರ ಜೀವಿತಾವಧಿ ಈಗ 71 ವರ್ಷಕ್ಕೆ ತಲುಪಿದೆ. ಆ ಅವಧಿಯಲ್ಲಿ ಕೇವಲ ಶೇ.12ರ ಆಸುಪಾಸಿನಲ್ಲಿದ್ದ ಸಾಕ್ಷರತೆ ಇಂದು ಶೇ. 79.7 ಹಂತಕ್ಕೆ ತಲುಪಿದೆ. ಇಂತಹ ಸಾಧನೆಯ ಹಿಂದೆ ದೇಶವು ಎಲ್ಲಾ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆಯೇ ಪ್ರಮುಖ ಕಾರಣವಾಗಿದೆ. ಅದರಲ್ಲೂ ಮುಖ್ಯವಾಗಿ ಹಸಿರುಕ್ರಾಂತಿಯ ಮೂಲಕ ಆಹಾರ ಉತ್ಪಾದನೆಯಲ್ಲಿ ಗಣನೀಯ ಸಾಧನೆ ಮಾಡಿದೆ.

ಇದರ ಜೊತೆಗೆ, ಶ್ವೇತಕ್ರಾಂತಿ, ಬೂದುಕ್ರಾಂತಿ, ನೀಲಿಕ್ರಾಂತಿ ಹಾಗೂ ಹಳದಿ ಕ್ರಾಂತಿಯ ಮೂಲಕ ದೇಶ ಬಹುತೇಕ ಎಲ್ಲ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವುದರ ಹಿಂದೆ ಈ ದೇಶದ ರೈತರು, ವಿಜ್ಞಾನಿಗಳು, ತೆರಿಗೆ ಪಾವತಿಸುವ ಜನಸಾಮಾನ್ಯರ ಕೊಡುಗೆ ಸಾಕಷ್ಟಿದೆ ಎಂಬುದನ್ನು ಯಾರೂ ಮರೆಯುವಂತಿಲ್ಲ ಎಂದರು. ಸ್ವಾತಂತ್ರ್ಯದ ಸಂದರ್ಭದಲ್ಲಿ ಕೇವಲ 2825 ಪ್ರಾಥಮಿಕ ಶಾಲೆಗಳಿದ್ದ ದೇಶದಲ್ಲಿ ಇಂದು 8.40 ಲಕ್ಷ ಶಾಲೆಗಳು, 742 ಮೆಡಿಕಲ್ ಕಾಲೇಜುಗಳು, 4351 ಇಂಜಿನಿಯರಿಂಗ್ ಕಾಲೇಜುಗಳಿದ್ದು, ಬಾಹ್ಯಾಕಾಶ ಸಂಶೋಧನಾ ಕ್ಷೇತ್ರ, ಪರಮಾಣು ಶಕ್ತಿ, ಕೃಷಿ ಸೇರಿದಂತೆ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಯಾಗಿದೆ.

ಈ ಸಾಧನೆ ಇದೇ ರೀತಿ ಮುಂದೆ ಸಾಗುತ್ತಾ ಹೋಗಬೇಕಾದರೆ ಉನ್ನತ ಶಿಕ್ಷಣ ಪಡೆದ ವಿದ್ಯಾರ್ಥಿಗಳು ತಮ್ಮ ತಮ್ಮ ಆಸಕ್ತ ಕ್ಷೇತ್ರದಲ್ಲಿ ಗಣನೀಯ ಕೊಡುಗೆ ನೀಡಬೇಕೆಂದು ಸಲಹೆ ನೀಡಿದರು.

ಇದೇವೇಳೆ, 197 ವಿದ್ಯಾರ್ಥಿಗಳು ಪದವಿ ಹಾಗೂ 627 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಪ್ರಮಾಣ ಪತ್ರ ಸ್ವೀಕರಿಸಿದರು. ಸಿಯುಕೆ ಕುಲಾಧಿಪತಿ ವಿಜಯಕೇಶವ ಗೋಖಲೆ ಅಧ್ಯಕ್ಷತೆ ವಹಿಸಿದ್ದರು. ವಿವಿ ಕುಲಪತಿ ಪ್ರೊ .ಬಟ್ಟು ಸತ್ಯ ನಾರಾಯಣ ಪ್ರಾಸ್ತಾವಿಕವಾಗಿ ಮಾತನಾಡಿದರು.


ಉದಯವಾಹಿನಿ ಚಿತ್ರ

**36 ಪಿಎಚ್‌ಡಿ ಪದವಿ ಪ್ರದಾನ**

**ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ 8ನೇ ಘಟಿಕೋತ್ಸವದಲ್ಲಿ ಈ ಬಾರಿ 36 ಸಂಶೋಧನಾರ್ಥಿಗಳು ಪಿ.ಎಚ್.ಡಿ ಪದವಿ ಸ್ವೀಕರಿಸಿದರು. ಡಾ.ಅಪ್ಪಗೆರೆ ಸೋಮಶೇಖರ ಮಾರ್ಗದರ್ಶನದಲ್ಲಿ ಕನ್ನಡ ಅಧ್ಯಯನ ವಿಭಾಗದ ಸಂಶೋಧನಾ ವಿದ್ಯಾರ್ಥಿ ನಂದಪ್ಪ ಮಂಡಿಸಿದ 'ದಲಿತ ಚಳವಳಿಯ ಅನುಭವ ಕಥನ' ಮಹಾಪ್ರಬಂಧಕ್ಕೆ ಪಿ.ಎಚ್.ಡಿ ಪದವಿ ಸ್ವೀಕರಿಸಿದರು. ಇದರ ಜೊತೆಗೆ, ಭೂಗೋಳ, ಇಂಗ್ಲಿಷ್, ಅರ್ಥಶಾಸ್ತ್ರ, ವಾಣಿಜ್ಯ, ಮನಃಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ ಸೇರಿದಂತೆ ವಿವಿಧ ವಿಷಯಗಳ ಮೇಲೆ ಸಂಶೋಧನಾರ್ಥಿಗಳು ಪಿ.ಎಚ್.ಡಿ ಪದವಿ ಸ್ವೀಕರಿಸಿದರು.**

**35 ವಿದ್ಯಾರ್ಥಿಗಳಿಗೆ ಚಿನ್ನದ ಪದಕ**

**ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಎಂಟನೇ ಘಟಿಕೋತ್ಸವದಲ್ಲಿ 35 ವಿದ್ಯಾರ್ಥಿಗಳು ಚಿನ್ನದ ಪದಕ ಸ್ವೀಕರಿಸಿದರು. ಈ ಪೈಕಿ ಬಿ.ಟೆಕ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿ ಬುರ್ರ ಮಸ್ತಾನ್ ವೇದಸಾಯಿ ಸಾಹಿತ್ಯ ನಿತಿನ್ ಪ್ರಥಮ ರ‍್ಯಾಂಕ್ ಜೊತೆಗೆ ಎರಡು ಚಿನ್ನದ ಪದಕಗಳನ್ನು ಸ್ವೀಕರಿಸಿದರು. ಎರಡು ಚಿನ್ನದ ಪದಕಗಳ ಪೈಕಿ ಪ್ರತಿಷ್ಠಿತ ಪ್ರೊ.ಎ.ಎಂ.ಪಠಾಣ್ ಚಿನ್ನದ ಪದಕವನ್ನು ಸಹ ಅವರು ಸ್ವೀಕರಿಸಿದರು. ಕನ್ನಡ ವಿಭಾಗದ ವಿದ್ಯಾರ್ಥಿನಿ ಶೋಭಾ ಪ್ರಥಮ ರ‍್ಯಾಂಕ್ ಪಡೆದಿದ್ದು, ಚಿನ್ನದ ಪದಕಕ್ಕೆ ಭಾಜನರಾದರು. ಇದೇವೇಳೆ, ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದಲ್ಲಿ ಪ್ರಥಮ ರ‍್ಯಾಂಕ್ ನೊಂದಿಗೆ ಪದ್ಮಜಾ ಪಿ.ಜಿ. ಹಾಗೂ ಇಂಗ್ಲಿಷ್ ವಿಭಾಗದಲ್ಲಿ ಪ್ರಥಮ ರ‍್ಯಾಂಕ್ ಜೊತೆಗೆ ಎಚ್. ವಾಣಿ ಚಿನ್ನದ ಪದಕ ಸ್ವೀಕರಿಸಿದರು.**

## ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

• ಉದಯವಾಹಿನಿ, ಚಿಂಚೋಳಿ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಸುಲೇಪೇಟ ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಎಲ್ ಆಂಡ್ ಟಿ,ಫೈನಾನ್ಸ್-ಎಕ್ಸೆಸ್ ಲೈವ್ ಹೂರ್ - ಡಿಜಿಟಲ್ ಸಹಿ ಯೋಜನೆ ಬೀದರ್ ಮತ್ತು ಕಲಬುರಗಿ,ವತಿಯಿಂದ ಹಮ್ಮಿಕೊಂಡ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಸ್ತ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷೆ ನರಸಮ್ಮ ಲಕ್ಷ್ಮಣ ಆವುಂಟಿ ಉಧ್ಘಾಟಿಸಿದರು. ಸುಲೇಪೇಟ ಗ್ರಾಪಂ ಅಧ್ಯಕ್ಷ ಸಂತೋಷ ರಾಠೋಡ್ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಮಹ್ಮದ್ ಸಿರಾಜ್,ಗ್ರಾಪಂ ಮಾಜಿ ಅಧ್ಯಕ್ಷೆ ಸರಸ್ವತಿ ಮಲ್ಲಿಕಾರ್ಜುನ ಗಿರಿ, ಜ್ಯೋತಿ ಎನ್.ಲಿಂಗಂಪಲ್ಲಿ,ಸಂಗೀತಾ ರುದ್ರಮುನಿ,ಗುರುಬಸಮ್ಮ,ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ರೇವತಿ,ಮಮತಾ,ಸುಹಾಸಿನಿ, ಅಶೋಕ ಕುಮಾರ ಗುಲಗುಂಜಿ,ಅಶೋಕ ಕುಮಾರ, ರೇಣುಕಮ್ಮ ಕಟ್ಟಿಮನಿ, ಸೇರಿದಂತೆ ಅನೇಕರಿದ್ದರು.

## ರೇವಣಸಿದ್ಧೇಶ್ವರ ಜಾತ್ರಾ ಮಹೋತ್ಸವ ಪ್ರಾರಂಭ

• ಉದಯವಾಹಿನಿ, ಚಿಟಗುಪ್ಪ

ತಾಲ್ಲೂಕಿನ ಬೇಳಕೇರಾ ಗ್ರಾಮದ ಬೆಟ್ಟದ ಮೇಲಿರುವ ಐತಿಹಾಸಿಕ ಜಗದ್ಗುರು ರೇವಣಸಿದ್ಧೇಶ್ವರ ದೇವಸ್ಥಾನದ 16ನೇ ಜಾತ್ರಾ ಮಹೋತ್ಸವ ಮಾ.11ರಿಂದ 12ರ ವರೆಗೆ ನಡೆಯಲಿದೆ ಎಂದು ದೇವಸ್ಥಾನ ಕಮಿಟಿ ಅಧ್ಯಕ್ಷ ಅನಿಲಕುಮಾರ ರವಿಕಾಂತ ಪೊಲೀಸ್ ಪಾಟೀಲ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 7 ಗಂಟೆಗೆ ರೇವಣಸಿದ್ಧೇಶ್ವರ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕ, ಗ್ರಾಮದ ನಂದಿ ಬಸವೇಶ್ವರ ದೇವಸ್ಥಾನದಿಂದ ರೇವಣಸಿದ್ಧೇಶ್ವರ ದೇವಸ್ಥಾನದವರೆಗೆ ಕಳಸ ಹಾಗೂ ಪಲ್ಲಕ್ಕಿ ಮೆರವಣಿಗೆ ನಡೆಯಲಿದೆ. ನಂತರ 10 ಗಂಟೆಗೆ ಪಂಚಾಚಾರ್ಯರ ಧ್ವಜಾರೋಹಣ ಹಾಗೂ ರಥದ ಕಳಸಾರೋಹಣ ಕಾರ್ಯಕ್ರಮ ಜರುಗಲಿದೆ. ದಿ. 12ರಂದು ರೇವಣಸಿದ್ಧೇಶ್ವರ ಲಿಂಗೋದ್ಭವ ಮೂರ್ತಿಗೆ ಸಂಗೀತ ರುದ್ರಾಭಿಷೇಕ, ಮಧ್ಯಾಹ್ನ 3 ಗಂಟೆಗೆ ಧರ್ಮ ಸಭೆ , 4 ಗಂಟೆಗೆ ಪಲ್ಲಕ್ಕಿ ಉತ್ಸವ ಹಾಗೂ ಸಂಜೆ ರಥೋತ್ಸವ ನಡೆಯಲಿ ಎಂದು ಅವರು ತಿಳಿಸಿದ್ದಾರೆ.

## 4 ಬಾಂಗ್ಲಾ ನುಸುಳುಕೋರರ ಬಂಧನ

**ಗುವಾಹಟಿ:** ಬಾಂಗ್ಲಾದೇಶದಿಂದ ನಾಲ್ವರು ನುಸುಳುಕೋರರನ್ನು ಬಂಧಿಸಿ ನೆರೆಯ ದೇಶಕ್ಕೆ ಗಡಿಪಾರು ಮಾಡಲಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ತಿಳಿಸಿದ್ದಾರೆ. ಅವರನ್ನು ಅಬ್ದುಲ್ ಕಬೀರ್, ಬೋದಿಯುರ್ ರೆಹಮಾನ್, ಎಂಡಿ ತಯೂಬ್ ಮತ್ತು ಅಬ್ದುಲ್ ಕಲಾಂ ಎಂದು ಗುರುತಿಸಲಾಗಿದೆ. ಮಧ್ಯರಾತ್ರಿಯ ಎಕ್ಸ್‌ನ ಪೋಸ್ಟ್‌ನಲ್ಲಿ, ನಾಲ್ವರು ಅಕ್ರಮ ನುಸುಳುಕೋರರನ್ನು ಬಂಧಿಸಿ ಗಡಿ ಪಾರು ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಒಳನುಸುಳುವಿಕೆಯನ್ನು ಎದುರಿಸಲು ತಮ ಪ್ರಯತ್ನಗಳನ್ನು ಮುಂದುವರೆಸುತ್ತಾ, 4 ಬಾಂಗ್ಲಾದೇಶಿ ಪ್ರಜೆಗಳನ್ನು ಬಂಧಿಸಿ ಗಡಿಯುದ್ದಕ್ಕೂ ಹಿಂದಕ್ಕೆ ತಳ್ಳಲಾಗಿದೆ.

ಆದಾಗ್ಯೂ, ಅವರನ್ನು ಎಲ್ಲಿ ಬಂಧಿಸಲಾಯಿತು ಅಥವಾ ಯಾವ ಗಡಿ ಜಿಲ್ಲೆಯ ಮೂಲಕ ಅವರನ್ನು ಗಡಿಪಾರು ಮಾಡಲಾಯಿತು ಎಂಬುದನ್ನು ಶರ್ಮಾ ಉಲ್ಲೇಖಿಸಲಿಲ್ಲ. ಕಳೆದ ಏಳು ತಿಂಗಳಲ್ಲಿ ಬಾಂಗ್ಲಾದೇಶದಿಂದ 305 ನುಸುಳುಕೋರರನ್ನು ಬಂಧಿಸಿ ಅವರ ದೇಶಕ್ಕೆ ವಾಪಸ್ ಕಳುಹಿಸಲಾಗಿದೆ ಮತ್ತು ರಾಜ್ಯ ಸರ್ಕಾರವು ಒಳನುಸುಳುವಿಕೆ ಮುಕ್ತ ಅಸ್ಸಾಂಗೆ ಬದ್ಧವಾಗಿದೆ ಎಂದು ಸಿಎಂ ಈ ಹಿಂದೆ ಹೇಳಿದ್ದರು.

## ಎರಡು ದಿನಗಳ ಭೇಟಿಗಾಗಿ ಪ್ರಧಾನಿ ನರೇಂದ್ರ ಮೋದಿ ಮಾರಿಷಸ್‌ಗೆ

**ಪೋರ್ಟ್ ಲೂಯಿಸ್:** ಎರಡು ದಿನಗಳ ಭೇಟಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಮಾರಿಷಸ್ ಗೆ ಆಗಮಿಸಿದ್ದಾರೆ. ದ್ವೀಪ ರಾಷ್ಟ್ರದ ರಾಷ್ಟ್ರೀಯ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಅವರು ಭಾಗವಹಿಸಲಿದ್ದಾರೆ ಮತ್ತು ದೇಶದ ಉನ್ನತ ನಾಯಕರೊಂದಿಗೆ ಸಭೆ ನಡೆಸಲಿದ್ದಾರೆ. ಮಾರಿಷಸ್ ಪ್ರಧಾನಿ ನವೀನ್ ರಾಮ್ ಗೂಲಮ್ ಅವರ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಅವರ ಭೇಟಿಯ ಸಂದರ್ಭದಲ್ಲಿ, ಸಾಮರ್ಥ್ಯ ವರ್ಧನೆ, ವ್ಯಾಪಾರ ಮತ್ತು ಗಡಿಯಾಚೆಗಿನ ಆರ್ಥಿಕ ಅಪರಾಧಗಳನ್ನು ನಿಭಾಯಿಸುವ ಕ್ಷೇತ್ರಗಳಲ್ಲಿ ಸಹಕಾರವನ್ನು ಒದಗಿಸುವ ಹಲವಾರು ಒಪ್ಪಂದಗಳಿಗೆ ಉಭಯ ದೇಶಗಳು ಸಹಿ ಹಾಕಲಿವೆ. ಮಾರಿಷಸ್‌ಗೆ ತೆರಳುವ ಮೊದಲು, ಮೋದಿ ತಮ್ಮ ಭೇಟಿಯು ಉಭಯ ದೇಶಗಳ ನಡುವಿನ ಸಂಬಂಧದಲ್ಲಿ ಹೊಸ ಮತ್ತು ಪ್ರಕಾಶಮಾನವಾದ ಅಧ್ಯಾಯವನ್ನು ತೆರೆಯುತ್ತದೆ ಎಂದು ಹೇಳಿದ್ದರು.

## ಲವ್ ಜಿಹಾದ್ ಮೂಲಕ 400 ಹುಡುಗಿಯರ ಮತಾಂತರ

**ಕೊಚ್ಚಿ:** ಭಾರತೀಯ ಜನತಾ ಪಕ್ಷದ ಕೇರಳ ಘಟಕದ ನಾಯಕರೊಬ್ಬರು ಪೋಷಕರು ತಮ್ಮ ಹೆಣ್ಣುಮಕ್ಕಳನ್ನು 24 ವರ್ಷ ತುಂಬುವ ಮೊದಲೇ ಮದುವೆ ಮಾಡಬೇಕೆಂದು ಸಲಹೆ ನೀಡಿದ್ದಾರೆ. ಬಿಜೆಪಿ ನಾಯಕ ಪಿ.ಸಿ. ಜಾರ್ಜ್ ಕೂಡ 'ಲವ್ ಜಿಹಾದ್' ಬಗ್ಗೆ ಕ್ರಿಶ್ಚಿಯನ್ ಸಮುದಾಯಕ್ಕೆ ಎಚ್ಚರಿಕೆ ನೀಡಿದ್ದಾರೆ. ಮೀನಚಿಲ್ ತಾಲ್ಲೂಕಿನಲ್ಲಿಯೇ 400 ಹುಡುಗಿಯರು 'ಲವ್ ಜಿಹಾದ್'ಗೆ ಬಲಿಯಾಗಿದ್ದಾರೆ ಎಂದು ಅವರು ಹೇಳಿದ್ದಾರೆ.

ಪಾಲಾದಲ್ಲಿ ನಡೆದ ವಿಶೇಷ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ ಜಾರ್ಜ್ ಈ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ಪಾಲಾ ಡಯಾಸಿಸ್‌ನ ಬಿಷಪ್ ಜೋಸೆಫ್ ಕಲ್ಲರಂಗಟ್ ಮತ್ತು ಕೇರಳ ಕ್ಯಾಥೋಲಿಕ್ ಬಿಷಪ್ಸ್ ಕೌನ್ಸಿಲ್ (ಕೆಸಿಬಿಸಿ) ಯ ಆತ್ಮಸಂಯಮ ಆಯೋಗದ ನೇತೃತ್ವದಲ್ಲಿ ಮಾದಕ ವ್ಯಸನದ ಪಿಡುಗಿನ ವಿರುದ್ಧ ಈ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮಾತನಾಡಿದ ಬಿಜೆಪಿ ಮುಖಂಡರು, ಕೊಟ್ಟಾಯಂನ ಮೀನಾಚಿಲ್ ತಾಲ್ಲೂಕಿನಲ್ಲಿಯೇ ಸುಮಾರು 400 ಹುಡುಗಿಯರು ಲವ್ ಜಿಹಾದ್‌ನಲ್ಲಿ ಸಿಕ್ಕಿಬಿದ್ದಿದ್ದಾರೆ. ಅವರಲ್ಲಿ ಕೇವಲ 41 ಮಂದಿ ಮಾತ್ರ ಹಿಂತಿರುಗಿದ್ದಾರೆ. ಕ್ರಿಶ್ಚಿಯನ್ ಹುಡುಗಿಯರ ಪೋಷಕರು ತಮ್ಮ ಹೆಣ್ಣುಮಕ್ಕಳಿಗೆ 25 ವರ್ಷ ತುಂಬುವವರೆಗೆ ಅವರ ಮದುವೆ ಮಾಡಲು ಕಾಯುವುದು ಬೇಡ ನಾನು ಪೋಷಕರಿಗೆ ಹೇಳುವುದೇನೆಂದರೆ, ತಮ್ಮ ಹೆಣ್ಣುಮಕ್ಕಳಿಗೆ 24 ವರ್ಷ ತುಂಬುವ ಮೊದಲೇ ಮದುವೆ ಮಾಡಿಸಿ. ಮದುವೆಯ ನಂತರವೂ ಅವಳು ತನ್ನ ಅಧ್ಯಯನವನ್ನು ಮುಂದುವರಿಸಬಹುದು.

### ಸಪ್ಟೆಂಬರ್ ವೇಳೆಗೆ ಅಮೆರಿಕ–ಭಾರತ ವಾಣಿಜ್ಯ ವ್ಯವಹಾರಗಳ ಒಪ್ಪಂದ ಅಂತಿಮ ಸಾಧ್ಯತೆ

# ಭಾರತದಿಂದ ಸುಂಕ ಕಡಿತದ ಭರವಸೆ ಕೊಟ್ಟಿಲ್ಲ




- ತೆರಿಗೆ ಕಡಿತ ಬಗ್ಗೆ ಭಾರತ ಯಾವುದೇ ಭರವಸೆ ನೀಡಿಲ್ಲ
- ಟ್ರಂಪ್ ಹೇಳಿಕೆಗೆ ಭಾರತದ ಸ್ಪಷ್ಟನೆ
- ಸಪ್ಟೆಂಬರ್ ವೇಳೆಗೆ ಅಮೆರಿಕ-ಭಾರತ ವಾಣಿಜ್ಯ ವ್ಯವಹಾರಗಳ ಒಪ್ಪಂದ ಅಂತಿಮ ಸಾಧ್ಯತೆ

**ದೆಹಲಿ:** ಅಮೆರಿಕದ ಉತ್ಪನ್ನಗಳ ಮೇಲಿನ ಆಮದು ಸುಂಕವನ್ನು ಕಡಿಮೆ ಮಾಡುವುದಾಗಿ ಭಾರತ ಒಪ್ಪಿಕೊಂಡಿಲ್ಲ ಎಂದು ಭಾರತ ಸ್ಪಷ್ಟನೆ ನೀಡಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತವು ತಮ್ಮ ಸುಂಕಗಳನ್ನು ತೀರಾ ಕಡಿಮೆ ಮಾಡಲು ಒಪ್ಪಿಕೊಂಡಿದೆ ಎಂದು ಹೇಳಿಕೆ ನೀಡಿದ ಬೆನ್ನಲ್ಲೇ ಸ್ಪಷ್ಟೀಕರಣ ನೀಡಲಾಗಿದೆ. ಟ್ರಂಪ್ ಎರಡನೇ ಅವಧಿಯಲ್ಲಿ ಅಧಿಕಾರ ಸ್ವೀಕರಿಸಿದ ಬಳಿಕ, ಜಾಗತಿಕ ವ್ಯವಹಾರದಲ್ಲಿ ಅಲ್ಲೋಲ ಕಲ್ಲೋಲ ಉಂಟಾಗಿದೆ. ನಿರಂತರವಾಗಿ ಭಾರತದ ತೆರಿಗೆ ಪದ್ಧತಿಯ ವಿರುದ್ಧ ಹೇಳಿಕೆ ಗಳನ್ನು ಕೊಡುತ್ತಲೇ ಬಂದಿದ್ದಾರೆ. ಅಲ್ಲದೆ ಸುಂಕ ಕಡಿತಕ್ಕೆ ಒತ್ತಡ ಹೇರುತ್ತಿದ್ದಾರೆ.

ಅಮೆರಿಕದ ಅಧಿಕಾರ ವಹಿಸಿದ ಬಳಿಕ ಮಿತ್ರ ಹಾಗೂ ಶತ್ರು ರಾಷ್ಟ್ರಗಳನ್ನು ಗುರಿಯಾಗಿಸಿ ಅವರ ನೀತಿಗಳು ಬದಲಾಗುತ್ತಿವೆ.

ಅಮೆರಿಕದ ಜೊತೆಗೆ ವಾಣಿಜ್ಯ ವಹಿವಾಟಿನಲ್ಲಿರುವ ದೇಶಗಳಿಂದ ಅನ್ಯಾಯದ ವ್ಯಾಪಾರ ಆಗುತ್ತಿದೆ ಎಂದು ಧೂಷಿರುವ ಟ್ರಂಪ್, ಭಾರತ ಸೇರಿದಂತೆ ಹಲವು ದೇಶಗಳ ಮೇಲೆ ಪ್ರತೀಕಾರದ ತೆರಿಗೆಯನ್ನು ಹೇರುತ್ತಿದೆ. ಕಳೆದ ವಾರ ಟ್ರಂಪ್ ಮತ್ತೊಮ್ಮೆ ಭಾರತದ ಬೃಹತ್ ಸುಂಕಗಳ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದರು.

ನೀವು ಭಾರತದಲ್ಲಿ ಏನನ್ನೂ ಮಾರಾಟ ಮಾಡಲು ಸಾಧ್ಯವಿಲ್ಲ, ಅದು ಬಹುತೇಕ ನಿರ್ಬಂಧಿತವಾಗಿದೆ, ಎಂದು ಟ್ರಂಪ್ ಹೇಳಿದ್ದರು. ಆದರೆ ಕೊನೆಗೂ ಸುಂಕ ಕಡಿತಕ್ಕೆ ಭಾರತ ಒಪ್ಪಿದ್ದು, ಅವರ ಕೆಲಸ ಬಹಿರಂಗ ಮಾಡುತ್ತಿರೋದ್ರಿಂದ ಈ ನಿರ್ಧಾರಕ್ಕೆ ಬಂದಿದ್ದಾರೆ ಎಂದು ಟ್ರಂಪ್ ಹೇಳಿಕೆ ನೀಡಿದ್ದರು. ಆದರೆ ಇದನ್ನು ನಿರಾಕರಿಸಿರುವ ಭಾರತ ಸರ್ಕಾರ ಈ ರೀತಿಯ ಯಾವುದೇ ನಿರ್ಧಾರವನ್ನು ದೇಶ ತೆಗೆದುಕೊಂಡಿಲ್ಲ. ತೆರಿಗೆ ಕಡಿತ ಮಾಡಿಲ್ಲ ಎಂದು ಪಾರ್ಲಿಮೆಂಟರಿ ಪ್ಯಾನಲ್‌ನಲ್ಲಿ ಹೇಳಿದೆ. ಅಲ್ಲದೆ ಸಪ್ಟೆಂಬರ್ ವರೆಗೆ ತೆರಿಗೆ ಪದ್ಧತಿಯ ಕುರಿತು ನಿರ್ಧಾರಕ್ಕೆ ಬರಲು ಸಮಯಾವಕಾಶ ಕೇಳಲಾಗಿದೆ ಎಂದೂ ಹೇಳಿದ್ದಾರೆ.

ಕಳೆದ ತಿಂಗಳು ವೈಟ್ ಹೌಸ್‌ಗೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ, ಟ್ರಂಪ್ ಜೊತೆ ಉತ್ತಮ ಸಂಬಂಧವನ್ನು ಹೊಂದಿದ್ದಾರೆ. ಟ್ರಂಪ್ ಅವರು ಭಾರತೀಯ ಪ್ರಧಾನಿ ಜೊತೆ ವಿಶೇಷ ಬಾಂಧವ್ಯ ಹೊಂದಿದ್ದಾರೆ ಎಂದು ಹೇಳಿದ್ದಾರೆ. ಪ್ರಧಾನಿ ಮೋದಿ, ಪರಸ್ಪರ ಲಾಭದಾಯಕ ವ್ಯಾಪಾರ ಒಪ್ಪಂದ ದ ಕುರಿತು ವಿಶ್ವದ ಅತಿದೊಡ್ಡ ಮತ್ತು ಐದನೇ ಅತಿದೊಡ್ಡ ಆರ್ಥಿಕತೆಗಳು ಕೆಲಸ ಮಾಡುತ್ತವೆ. ಇದನ್ನು ಬಹಳ ಬೇಗ ಸಿದ್ದಪಡಿಸಲಾಗುವುದು ಎಂದು ಹೇಳಿದ್ದಾರೆ.

ಅಮೆರಿಕವು, ಭಾರತದ ಮಾಹಿತಿ ತಂತ್ರಜ್ಞಾನ ಮತ್ತು ಸೇವೆಗಳ ವಲಯಗಳಿಗೆ ನಿರ್ಣಾಯಕ ಮಾರುಕಟ್ಟೆಯಾಗಿದೆ. ಇನ್ನು ಅಮೆರಿಕವು ಭಾರತಕ್ಕೆ ಶತಕೋಟಿ ಡಾಲರ್‌ಗಳ ರಕ್ಷಣಾ ವಲಯದ ಸಲಕರಣೆಗಳ ಮಾರಾಟವನ್ನು ಮಾಡಿದೆ.

ಟ್ರಂಪ್ ಈ ವರ್ಷದ ಕೊನೆಯಲ್ಲಿ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆಗಳೂ ಇವೆ. ಆಸ್ಟ್ರೇಲಿಯಾ, ಭಾರತ, ಜಪಾನ್ ಮತ್ತು ಯುನೈಟೆಡ್ ಸ್ಟೇಟ್ಸ್‌ನ ರಾಷ್ಟ್ರಗಳ ಮುಖ್ಯಸ್ಥರ ಶೃಂಗಸಭೆಗಾಗಿ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆಗಳಿವೆ ಎನ್ನಲಾಗಿದೆ.

> ಅಮೆರಿಕ ಅಧ್ಯಕ್ಷರ ಹೇಳಿಕೆ ಬಳಿಕ, ತತ್‌ಕ್ಷಣವೇ ಸುಂಕ ಹೊಂದಾಣಿಕೆ ಮಾಡಲು ಸಾಧ್ಯವಿಲ್ಲ. ಇದರ ಹೊರತಾಗಿ ಅಮೆರಿಕ ಹಾಗೂ ಭಾರತದ ನಡುವೆ ದೀರ್ಘಕಾಲೀನ ವ್ಯಾಪಾರ ಸಹಕಾರದ ಮೇಲೆ ಕೇಂದ್ರೀಕರಿಸಿ , ಎರಡೂ ದೇಶಗಳಿಗೆ ಪರಸ್ಪರ ಲಾಭದಾಯಕ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಮಾಡುವ ಬಗ್ಗೆ ನೀತಿ ರೂಪಿಸಲಾಗುತ್ತಿದೆ ಎಂದು ಹೇಳಿದ್ದಾರೆ.
> –ಸುನಿಲ್ ಬಾರ್ತ್ವಾಲ್, ಭಾರತದ ವಾಣಿಜ್ಯ ಕಾರ್ಯದರ್ಶಿ

## ಮಿನಿ ನ್ಯೂಸ್

### ಬಿಜೆಪಿ ನಾಯಕ ಸಾವು

**ಸಂಭಾಲ್:** ಉತ್ತರ ಪ್ರದೇಶದ ಸಂಭಾಲ್ ಜಿಲ್ಲೆಯ ಬಿಜೆಪಿ ನಾಯಕನೊಬ್ಬನಿಗೆ ಮೂವರು ಅಪರಿಚಿತ ವ್ಯಕ್ತಿಗಳು ವಿಷಕಾರಿ ವಸ್ತುವನ್ನು ಚುಚ್ಚಿದ್ದರಿಂದ ಅವರು ಸಾವಿಗೀಡಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ವೃತ್ತ ಅಧಿಕಾರಿ (ಗುನ್ನೌರ್) ದೀಪಕ್ ತಿವಾರಿ ಮಾತನಾಡಿ, 'ಸೋಮವಾರ ಸಂಜೆ ಜುನಾವೈ ಪೊಲೀಸ್ ಠಾಣೆ ವ್ಯಾಪ್ತಿಯ ದಫ್ತಾರಾ ಗ್ರಾಮದಲ್ಲಿರುವ ತಮ್ಮ ಜಮೀನಿನಲ್ಲಿ ಗುಲ್ಫಾಮ್ ಸಿಂಗ್ ಯಾದವ್ (60) ಕುಳಿತಿದ್ದಾಗ, ಮೂವರು ವ್ಯಕ್ತಿಗಳು ಮೋಟಾರ್ ಸೈಕಲ್‌ನಲ್ಲಿ ಅಲ್ಲಿಗೆ ಬಂದಿದ್ದಾರೆ. ಬಳಿಕ ವಿಷದ ಇಂಜೆಕ್ಷನ್ ಚುಚ್ಚಿ ಅಲ್ಲಿಂದ ಪರಾರಿಯಾಗಿದ್ದಾರೆ ಎಂದು ತಿಳಿಸಿದ್ದಾರೆ. ಯಾದವ್ ಅವರನ್ನು ಕೂಡಲೇ ಚಿಕಿತ್ಸೆಗಾಗಿ ಆಲಿಘರ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಮಾರ್ಗಮಧ್ಯೆಯಲ್ಲಿಯೇ ಅವರು ಕೊನೆಯುಸಿರೆಳೆದಿದ್ದಾರೆ. ಸದ್ಯ ಸಂತ್ರಸ್ತರ ಕುಟುಂಬಸ್ಥರಿಂದ ಯಾವುದೇ ಔಪಚಾರಿಕ ದೂರು ದಾಖಲಾಗಿಲ್ಲ. ಪ್ರಕರಣದ ತನಿಖೆಗಾಗಿ ಪೊಲೀಸ್ ತಂಡವನ್ನು ನಿಯೋಜಿಸಲಾಗಿದೆ' ಎಂದು ತಿಳಿಸಿದರು.

### ಕೆನಡಾ ಸಂಸದರಿಗೆಗೆ ಕುರ್ಚಿ ತೆಗೆದುಕೊಂಡು ಹೋಗುವ ಅವಕಾಶ ಇದೆಯಾ?

# ಕೆನಡಾ ಸಂಸತ್ತಿನಿಂದ ಕುರ್ಚಿ ಹೊತ್ತೊಯ್ದ ಜಸ್ಟಿನ್ ಟ್ರುಡೋ

**ಒಟ್ಟಾವೋ:** ಜಸ್ಟಿನ್ ಟ್ರುಡೊ ಕೆನಡಾ ಪ್ರಧಾನ ಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ ನಂತರ, ಪಾರ್ಲಿಮೆಂಟ್‌ನಿಂದ ಕುರ್ಚಿಯೊಂದಿಗೆ ಹೊರ ನಡೆದ ಚಿತ್ರ ಇದೀಗ ಭಾರೀ ವೈರಲ್ ಆಗಿದೆ. ಟ್ರುಡೊ ತಮ್ಮ ನಾಲಿಗೆಯನ್ನು ಹೊರಚಾಚಿ ಕುರ್ಚಿ ಹಿಡಿದುಕೊಂಡು ಹೊರಹೋಗಿದ್ದು, ಟ್ರುಡೋ ತಮ್ಮ ಮರಳುವಿಕೆಯ ಸಂದೇಶ ಸಾರಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ.

ಇನ್ನು ಕೆನಡಾದ ಸಂಸದರು ಪಾರ್ಲಿಮೆಂಟ್ ತೊರೆದಾಗ ತಮ್ಮ ಕುರ್ಚಿಗಳನ್ನು ತೆಗೆದುಕೊಂಡು ಹೋಗಲು ಅವಕಾಶವಿದೆ ಎಂದು 'ಟೊರೊಂಟೊ ಸನ್' ರಾಜಕೀಯ ಅಂಕಣಕಾರ ಬ್ರಿಯಾನ್ ಲಿಲ್ಲಿ ಹೇಳಿದ್ದಾರೆ. ಮುಂದುವರೆದು, ಟ್ರುಡೊ ಅವರ ಈ ವರ್ತನೆ ಚುನಾವಣೆ ಸಮೀಪಿಸುತ್ತಿದೆ ಎಂಬುದರ ಸೂಚನೆ ಎಂದು ಲಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಜಸ್ಟಿನ್ ಟ್ರುಡೊ ಅವರು ಕಳೆದ ಜನವರಿ 6ರಂದು ಕೆನಡಾದ ಪ್ರಧಾನಿ ಮತ್ತು ಲಿಬರಲ್ ಪಕ್ಷದ ನಾಯಕ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದರು. ವಸತಿ ಬಿಕ್ಕಟ್ಟು ಮತ್ತು ಜೀವನ ವೆಚ್ಚ ಏರಿಕೆ ನಿಭಾಯಿಸುವಲ್ಲಿ ವೈಫಲ್ಯ ಕಂಡಿದ್ದು, ಜಸ್ಟಿನ್ ಟ್ರುಡೋ ಅವರ ಸರ್ಕಾರದ ವಿರುದ್ಧ ಜನರಲ್ಲಿ ವ್ಯಾಪಕ ಅಸಮಾಧಾನಕ್ಕೆ ಕಾರಣವಾಗಿತ್ತು.

**ಜಾಗತಿಕವಾಗಿ ಗಮನ ಸೆಳೆದಿದೆ**

ಸದ್ಯ ಜಸ್ಟಿನ್ ಟ್ರುಡೊ ಪಕ್ಷದ ನಾಯಕತ್ವದಿಂದ ಕೆಳಗಿಳಿದ ನಂತರ, ಮಾರ್ಕ್ ಕಾರ್ನಿ ಹೊಸ ನಾಯಕರಾಗಿ ಆಯ್ಕೆಯಾಗಿದ್ದಾರೆ. ಕಾರ್ನಿ ಅವರು ಈ ವರ್ಷದ ಅಂತ್ಯದಲ್ಲಿ ನಡೆಯಲಿರುವ ಫೆಡರಲ್ ಚುನಾವಣೆಯಲ್ಲಿ ಲಿಬರಲ್ ಪಕ್ಷವನ್ನು ಮುನ್ನಡೆಸಲಿದ್ದಾರೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜೊತೆಗಿನ ವ್ಯಾಪಾರ ಯುದ್ಧವನ್ನು ಎದುರಿಸಲು ಕೆನಡಾ ಸಜ್ಜಾಗುತ್ತಿರುವ ಸಂದರ್ಭದಲ್ಲಿ, ಮಾರ್ಕ್ ಕಾರ್ನಿ ಕೆನಡಾದ ನಾಯಕತ್ವ ವಹಿಸಿಕೊಂಡಿರುವುದು ಜಾಗತಿಕವಾಗಿ ಗಮನ ಸೆಳೆದಿದೆ.



ಲಿಬರಲ್ ಪಕ್ಷದ ನಾಯಕತ್ವ ಸಮಾವೇಶದಲ್ಲಿ ಮಾತನಾಡಿದ ಜಸ್ಟಿನ್ ಟ್ರುಡೊ, ಕಳೆದ ದಶಕದಲ್ಲಿ ತಮ್ಮ ಪಕ್ಷದ ಸಾಧನೆಗಳನ್ನು ಎತ್ತಿ ತೋರಿಸುತ್ತಾ, ಲಿಬರಲ್ ಪಕ್ಷ ಹೊಸ ಯುಗಕ್ಕೆ ಕಾಲಿಡುತ್ತಿರುವಾಗ ಕೆನಡಾವನ್ನು ವಿಶ್ವದಲ್ಲೇ ಅತ್ಯುತ್ತಮ ದೇಶವನ್ನಾಗಿ ಉಳಿಸಿಕೊಳ್ಳುವ ಜವಾಬ್ದಾರಿಯನ್ನು ನಾನು ಸಮರ್ಥವಾಗಿ ನಿಭಾಯಿಸಿದ್ದೇನೆ ಎಂದು ಹೇಳಿದ್ದರು. ಸದ್ಯ ಕೆನಡಾದ ಸಂಸದರು ತಮ್ಮ ಕುರ್ಚಿಯನ್ನು ಹೊತ್ತೊಯ್ಯುವುದಕ್ಕೆ ಕಾನೂನಿನಲ್ಲಿ ಅವಕಾಶವಿದ್ದರೂ, ಜಸ್ಟಿನ್ ಟ್ರುಡೊ ಅವರ ಈ ವರ್ತನೆ ಚರ್ಚೆಗೆ ಗ್ರಾಸವಾಗಿದೆ.

- ಕೆನಡಾ ಪಾರ್ಲಿಮೆಂಟ್‌ನಿಂದ ಕುರ್ಚಿ ಹೊತ್ತೊಯ್ದ ಜಸ್ಟಿನ್ ಟ್ರುಡೋ
- ಜಸ್ಟಿನ್ ಟ್ರುಡೋ ಕುರ್ಚಿ ಹೊತ್ತೊಯ್ಯುತ್ತಿರುವ ಫೋಟೋ ವೈರಲ್
- ತಮ್ಮ ಮರಳುವಿಕೆಯ ಸಂದೇಶ ರವಾನಿಸಲು ಕುರ್ಚಿ ಹೊತ್ತೊಯ್ದರಾ ಟ್ರುಡೋ
- ಕೆನಡಾ ಸಂಸದರಿಗೆಗೆ ಕುರ್ಚಿ ತೆಗೆದುಕೊಂಡು ಹೋಗುವ ಅವಕಾಶ ಇದೆಯಾ?

ಕೆಲವರು ಇದನ್ನು ಅಪಕ್ವ ವರ್ತನೆ ಎಂದು ಟೀಕಿಸಿದರೆ, ಮತ್ತೆ ಕೆಲವರು ಇದನ್ನು ಹಾಸ್ಯ ಪ್ರಜ್ಞೆ ಎಂದು ಸಮರ್ಥಿಸಿಕೊಂಡಿದ್ದಾರೆ. ಏನೇ ಇರಲಿ, ಟ್ರುಡೊ ಅವರ ಈ ನಡೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಕಾರಣವಾಗಿದೆ.


ಕೆನಡಾ ಈಗ ಹೊಸ ನಾಯಕತ್ವವನ್ನು ಬರಮಾಡಿಕೊಂಡಿದ್ದು, ಮಾರ್ಕ್ ಕಾರ್ನಿ ಅವರು ದೇಶವನ್ನು ಯಾವ ದಿಕ್ಕಿನಲ್ಲಿ ಕೊಂಡೊಯ್ಯುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ. ಅಮೆರಿಕದೊಂದಿಗಿನ ವ್ಯಾಪಾರ ಯುದ್ಧ, ವಸತಿ ಬಿಕ್ಕಟ್ಟು ಮತ್ತು ಜೀವನ ವೆಚ್ಚ ಏರಿಕೆಯು, ಮಾರ್ಕ್ ಕಾರ್ನಿ ಅವರ ಮುಂದಿರುವ ಪ್ರಮುಖ ಸವಾಲುಗಳಾಗಿವೆ.

ಈ ಮಧ್ಯೆ, ಭಾರತದೊಂದಿಗೆ ಸಂಬಂಧ ಸುಧಾರಣೆಗೆ ಒತ್ತು ನೀಡಿರುವುದಾಗಿ ಹೇಳಿರುವ ಮಾರ್ಕ್ ಕಾರ್ನಿ, ಭಾರತ ನಮ್ಮ ವ್ಯೂಹಾತ್ಮಕ ಪಾಲುದಾರ ಎಂದು ಹೇಳಿರುವುದು ಜಾಗತಿಕವಾಗಿ ಗಮನ ಸೆಳೆದಿದೆ.

### ಭಾರತಕ್ಕೆ ಬರುತ್ತಿದ್ದಾರೆ ಅಮೆರಿಕದ ಗುಪ್ತಚರ ಇಲಾಖೆ

# ನಿರ್ದೇಶಕಿ ತುಳಸಿ ಗಬ್ಬಾರ್ಡ್

**ನ್ಯೂಯಾರ್ಕ್:** ಇಂಡೋ ಪೆಸಿಫಿಕ್‌ಗೆ ಬಹುರಾಷ್ಟ್ರೀಯ ಪ್ರವಾಸ ಕೈಗೊಂಡಿರುವ ಅಮೆರಿಕದ ರಾಷ್ಟ್ರೀಯ ಗುಪ್ತಚರ ಇಲಾಖೆಯ ನಿರ್ದೇಶಕಿ ತುಳಸಿ ಗಬ್ಬಾರ್ಡ್ ಅವರು ತಾವು ಭಾರತಕ್ಕೂ ಭೇಟಿ ನೀಡುವುದಾಗಿ ತಿಳಿಸಿದ್ದಾರೆ.



ನಾನು ಇಂಡೋ ಪೆಸಿಫಿಕ್ ಪ್ರಾಂತ್ಯಕ್ಕೆ ಬಹುರಾಷ್ಟ್ರೀಯ ಪ್ರವಾಸ ಕೈಗೊಂಡಿದ್ದೇನೆ. ಪೆಸಿಫಿಕ್ ಮಗುವಾಗಿ ಬೆಳೆದಿರುವ ನಾನು ಈ ಪ್ರದೇಶವನ್ನು ಚೆನ್ನಾಗಿ ಬಲ್ಲೆ, ಜಪಾನ್, ಥಾಯ್ಲೆಂಡ್ ಮತ್ತು ಭಾರತಕ್ಕೆ ತೆರಳಲಿರುವ ನಾನು ವಾಷಿಂಗ್ಟನ್ ಡಿಸಿಗೆ ಹಿಂದಿರುಗುವ ಹಾದಿಯಲ್ಲಿ ಫ್ರಾನ್ಸ್ ಗೆ ಸಂಕ್ಷಿಪ್ತ ಭೇಟಿ ನೀಡಲಿದ್ದೇನೆ ಎಂದು ಗಬ್ಬಾರ್ಡ್ ಅವರು ವಿಮಾನ ಏರುತ್ತಿರುವ ಚಿತ್ರದ ಸಹಿತ ಎಕ್ಸ್‌ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ವಿವರಿಸಿದ್ದಾರೆ.

ಸದೃಢ ಸಂಬಂಧಗಳು, ತಿಳಿವಳಿಕೆ ಮತ್ತು ಸಂಪರ್ಕದ ಮುಕ್ತ ಮಾರ್ಗಗಳನ್ನು ಸ್ಥಾಪಿಸುವುದು ಶಾಂತಿ, ಸ್ವಾತಂತ್ರ್ಯ ಮತ್ತು ಸಮೃದ್ಧಿ ಸಾಧಿಸುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರಯತ್ನದ ಭಾಗವಾಗಿ ನಾನು ಈ ಪ್ರವಾಸ ಕೈಗೊಂಡಿದ್ದೇನೆ ಎಂದು ಗಬ್ಬಾರ್ಡ್ ಹೇಳಿದ್ದಾರೆ. ತುಳಸಿ ಅವರು ಮೊದಲನೆಯದಾಗಿ ಹೊನಲುಲುವಿನಲ್ಲಿ ಬಂದಿಳಿಯಲಿದ್ದಾರೆ.

ಅಲ್ಲಿ ಅವರು ಐಸಿ ಸಹಭಾಗಿಗಳು ಮತ್ತು ಇಂಡೋಪಾಕಾರ (ಯುಎಸ್ ಇಂಡೋ ಪೆಸಿಫಿಕ್ ಕಮ್ಯಾಂಡ್) ಧುರೀಣರನ್ನು ಮತ್ತು ತರಬೇತಿ ನಿರತರಾಗಿರುವ ಅವರ ಪಡೆಗಳನ್ನು ಭೇಟಿಯಾಗಲಿದ್ದಾರೆ. ಸೆನೆಟ್ ದೃಢೀಕರಿಸಿದ ಮತ್ತು ಮೊದಲ ಮಹಿಳಾ ಹಿರಿಯ ರಾಷ್ಟ್ರೀಯ ಗುಪ್ತಚರ ನಿರ್ದೇಶಕಿಯಾಗಿ ನೇಮಕಗೊಂಡ ಬಳಿಕ ಇದು ತುಳಸಿ ಅವರ ಪ್ರಥಮ ಭಾರತ ಭೇಟಿಯಾಗಿದೆ.

ತುಳಸಿ ಅವರು ಈ ಮುನ್ನ ಟ್ರಂಪ್ ರೊಂದಿಗೆ ದ್ವಿಪಕ್ಷೀಯ ಮಾತುಕತೆಗಾಗಿ ಅಮೆರಿಕ ಪ್ರವಾಸ ಕೈಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಫೆಬ್ರವರಿಯಲ್ಲಿ ಶ್ವೇತಭವನದಲ್ಲಿ ಭೇಟಿಯಾಗಿದ್ದರು. ಫೆಬ್ರವರಿ 12 ರಂದು ಭಾರತೀಯ ನೇತಾರ ಅಮೆರಿಕ ರಾಜಧಾನಿಗೆ ಬಂದಿಳಿದ ಕೂಡಲೇ ಅವರನ್ನು ಭೇಟಿಯಾದ ಮೊದಲ ಅಮೆರಿಕದ ಅಧಿಕಾರಿ ಗಬ್ಬಾರ್ಡ್ ಅವರಾಗಿದ್ದರು.

### ರೇಪಿಸ್ಟ್‌ಗಳಿಗೆ ನಾಯಿಗಳ ರೀತಿ

## ಸಂತಾನಹರಣ ಚಿಕಿತ್ಸೆ ಮಾಡಬೇಕು

**ಭರತ್‌ಪುರ:** ಅತ್ಯಾಚಾರ ಆರೋಪಿಗಳನ್ನು ಸ್ಥಳದಲ್ಲೇ ಥಳಿಸಬೇಕು ಮತ್ತು ಅವರಿಗೆ ನಾಯಿಗಳಂತೆ ಸಂತಾನಶಕ್ತಿ ಹರಣ ಚಿಕಿತ್ಸೆ ಮಾಡಬೇಕು ಎಂದು ರಾಜಸ್ಥಾನದ ರಾಜ್ಯಪಾಲ ಹರಿಭಾವು ಕಿಶನಾವ್ ಬಗಾಡೆ ಭರತ್ಪುರದಲ್ಲಿ ಹೇಳಿದ್ದಾರೆ. ಮಹಾತ್ಮ ಗಾಂಧಿ ಪಶುವೈದ್ಯಕೀಯ ಕಾಲೇಜಿನಲ್ಲಿ ಭರತ್ಪುರ ಬಾರ್ ಕೌನ್ಸಿಲ್‌ನ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ಹಲವಾರು ಕಾನೂನುಗಳು ಮತ್ತು ಶಿಕ್ಷೆಗಳಿವೆ. ಆದರೆ ಅಪರಾಧಿಗಳಿಗೆ ಇನ್ನೂ ಅವರ ಮನಸ್ಸಿನಲ್ಲಿ ಯಾವುದೇ ಭಯವಿಲ್ಲ. ಅತ್ಯಾಚಾರಿಗಳನ್ನು ಸ್ಥಳದಲ್ಲೇ ಹಿಡಿದು ಜನರು ಥಳಿಸಬೇಕು. ನಾಯಿಗಳ ಸಂಖ್ಯೆ ಅನಿಯಂತ್ರಿತ ರೀತಿಯಲ್ಲಿ ಹೆಚ್ಚಾದಾಗ ಪುರಸಭೆಯು ನಾಯಿಗಳನ್ನು ಕ್ರಿಮಿನಾಶಕಗೊಳಿಸುತ್ತದೆ. ಅತ್ಯಾಚಾರಿಗಳನ್ನು ನಾಯಿಗಳಂತೆ ಸಂತಾನಶಕ್ತಿ ಹರಣ ಚಿಕಿತ್ಸೆ ಗೆ ಒಳಪಡಿಸಬೇಕು ಎಂದಿದ್ದಾರೆ. ಸಂತ್ರಸ್ತರಿಗೆ ಸಹಾಯ ಮಾಡುವ ಬದಲು ಇಂತಹ ಘೋರ ಅಪರಾಧಗಳ ವಿಡಿಯೋಗಳನ್ನು ರೆಕಾರ್ಡ್ ಮಾಡುವವರ ವಿರುದ್ಧವೂ ಕ್ರಮ ತೆಗೆದುಕೊಳ್ಳಬೇಕು ಎಂದು ಬಗಾಡೆ ಹೇಳಿದರು. ಮಹಿಳೆಯರು ಸಾರ್ವಜನಿಕವಾಗಿ ಕಿರುಕುಳ ಮತ್ತು ಅತ್ಯಾಚಾರಕ್ಕೆ ಒಳಗಾಗುತ್ತಾರೆ, ಅವರು ವಿಡಿಯೋ ಕ್ಲಿಪ್‌ಗಳನ್ನು ಕ್ಲಿಕ್ ಮಾಡುತ್ತಾರೆ ಅಂತಹ ಅಪರಾಧಗಳನ್ನು ಸಕ್ರಿಯಗೊಳಿಸಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.




## ಟ್ರಂಪ್‌ಗೆ ಝೆಲೆನ್ಸ್ಕಿ ಪತ್ರ: ಕ್ಷಮೆಯಾಚನೆ

**ವಾಷಿಂಗ್ ಟನ್:** ಓವಲ್ ಕಚೇರಿ ಸಭೆಯ ಸಂದರ್ಭದಲ್ಲಿ ಸಾರ್ವಜನಿಕವಾಗಿ ನಡೆದ ವಾಗ್ವಾದದ ನಂತರ ಉಕ್ರೇನಿಯನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗೆ ಪತ್ರ ಬರೆದು ಕ್ಷಮೆಯಾಚಿಸಿದ್ದಾರೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್ ಹೇಳಿದ್ದಾರೆ ಎಂದು ದಿ ಹಿಲ್ ವರದಿ ಮಾಡಿದೆ. ಝೆಲೆನ್ಸ್ಕಿ ಅಧ್ಯಕ್ಷರಿಗೆ ಪತ್ರ ಕಳುಹಿಸಿದ್ದಾರೆ. ಓವಲ್ ಕಚೇರಿಯಲ್ಲಿ ನಡೆದ ಆ ಸಂಪೂರ್ಣ ಘಟನೆಗೆ ಅವರು ಕ್ಷಮೆಯಾಚಿಸಿದ್ದಾರೆ ಎಂದು ವಿಟ್ಕಾಫ್ ಹೇಳಿರುವುದನ್ನು ದಿ ಹಿಲ್ ವರದಿ ಮಾಡಿದೆ.

ಇದು ಒಂದು ಪ್ರಮುಖ ಹೆಜ್ಜೆ ಎಂದು ನಾನು ಭಾವಿಸುತ್ತೇನೆ ಮತ್ತು ನಮ್ಮ ತಂಡಗಳು, ಉಕ್ರೇನಿಯನ್ನರು ಮತ್ತು ಈ ಚರ್ಚೆಗೆ ಸಂಬಂಧಿಸಿದ ಯುರೋಪಿಯನ್ನರ ನಡುವೆ ಸಾಕಷ್ಟು ಚರ್ಚೆ ನಡೆದಿದೆ. ಕಾಂಗ್ರೆಸ್ ಅನ್ನು ಉದ್ದೇಶಿಸಿ ಟ್ರಂಪ್ ಮಾಡಿದ ಜಂಟಿ ಭಾಷಣದಲ್ಲಿ, ದೇಶಗಳ ನಡುವಿನ ಸಂಬಂಧಗಳನ್ನು ಸುಗಮಗೊಳಿಸುವ ಪ್ರಯತ್ನದಲ್ಲಿ ಝೆಲೆನ್ಸ್ಕಿ ಅವರಿಂದ ಪತ್ರವನ್ನು ಸ್ವೀಕರಿಸಿರುವ ಮಾಹಿತಿಯನ್ನು ಅವರು ಹಂಚಿಕೊಂಡರು. ಉಕ್ರೇನ್‌ಗೆ ಅಮೆರಿಕ ಮಿಲಿಟರಿ ಸಹಾಯವನ್ನು ನಿಲ್ಲಿಸಿದ ಕೆಲವೇ ದಿನಗಳಲ್ಲಿ ಬಂದ ಪತ್ರವನ್ನು ಶ್ಲಾಘಿಸುವುದಾಗಿ ಟ್ರಂಪ್ ಹೇಳಿದ್ದಾರೆ. ಝೆಲೆನ್ಸ್ಕಿ ಮತ್ತು ಟ್ರಂಪ್ ನಡುವಿನ ಉದ್ವಿಗ್ನ ಸಭೆಯ ಸ್ವಲ್ಪ ಸಮಯದ ನಂತರ ಪ್ರತಿಕ್ರಿಯೆ ನೀಡಿದ್ದ ಉಕ್ರೇನಿಯನ್ ನಾಯಕ ಇದನ್ನು ವಿಷಾದನೀಯ ಸಭೆ ಎಂದು ಕರೆದರು ಆದರೆ ಕ್ಷಮೆಯಾಚಿಸಲು ನಿರಾಕರಿಸಿದ್ದರು.

ಸ್ಕೈ ನ್ಯೂಸ್ ಪ್ರಕಾರ, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರೊಂದಿಗಿನ ಸಭೆಯಲ್ಲಿ ಝೆಲೆನ್ಸ್ಕಿ ಇರುವುದಿಲ್ಲ, ಆದರೆ ಅವರ ತಂಡವು ವಾಷಿಂಗ್ಟನ್‌ಗೆ ಅವರ ವಿನಾಶಕಾರಿ ಭೇಟಿಯ ನಂತರ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ಪ್ರಯತ್ನಿಸುತ್ತದೆ.



> ರಷ್ಯಾದೊಂದಿಗಿನ ಸಂಘರ್ಷವನ್ನು ಕೊನೆಗೊಳಿಸಲು ಶಾಂತಿ ಮಾತುಕತೆಗಳನ್ನು ಕೈಗೊಳ್ಳಲು ಯುಎಸ್ ಮತ್ತು ಉಕ್ರೇನಿಯನ್ ಅಧಿಕಾರಿಗಳು ಈ ವಾರ ಸೌದಿ ಅರೇಬಿಯಾದಲ್ಲಿ ಭೇಟಿಯಾಗಲಿದ್ದಾರೆ ಎಂದು ದಿ ಹಿಲ್ ವರದಿ ಮಾಡಿದೆ. ಉದ್ರಿಕ್ತ ಸಭೆಗೆ ಕ್ಷಮೆಯಾಚಿಸಲು ಝೆಲೆನ್ಸ್ಕಿ ಪತ್ರವನ್ನು ಕಳುಹಿಸುವ ಕ್ರಮವನ್ನು ಪ್ರಗತಿಯ ಸಂಕೇತ ಎಂದು ವಿಟ್ಕಾಫ್ ಹೇಳಿದ್ದಾರೆ.

### ಒತ್ತೆಯಾಳುಗಳಾಗಿ 100ಕ್ಕೂ ಹೆಚ್ಚು ಪ್ರಯಾಣಿಕರು, ಎಲ್ಲರನ್ನೂ ಕೊಲ್ಲುವ ಬೆದರಿಕೆ

# ರೈಲಿನ ಮೇಲೆ ಬಲೋಚ್ ಹೋರಾಟಗಾರರು ದಾಳಿ

**ಬಲೂಚಿಸ್ತಾನ:** ಪಾಕಿಸ್ತಾನ ರೈಲ್ವೆಯ 'ಜಾಫರ್ ಎಕ್ಸ್‌ಪ್ರೆಸ್ ಪ್ರಯಾಣಿಕ ರೈಲನ್ನು ಬಲೂಚ್ ಲಿಬರೇಶನ್ ಆರ್ಮಿಯ ಹೋರಾಟಗಾರರು ಅಪಹರಿಸಿದ್ದಾರೆ. ರೈಲಿನಲ್ಲಿದ್ದ 100ಕ್ಕೂ ಹೆಚ್ಚು ಪ್ರಯಾಣಿಕರನ್ನು ಒತ್ತೆಯಾಳುಗಳಾಗಿ ಇರಿಸಿಕೊಳ್ಳಲಾಗಿದೆ. ಈ ವೇಳೆ 6 ಮಂದಿ ಸೇನಾ ಸಿಬ್ಬಂದಿಗಳನ್ನು ಹತ್ಯೆ ಮಾಡಲಾಗಿದೆ ಎಂದು ಬಿಎಲ್‌ಎ ಹೇಳಿಕೊಂಡಿದೆ.

ರೈಲನ್ನು ಅಪಹರಿಸಿರುವ ಬಲೋಚ್ ಹೋರಾಟಗಾರರು, ಮಹಿಳೆಯರು, ಮಕ್ಕಳು ಮತ್ತು ಬಲೂಚ್ ಪ್ರಯಾಣಿಕರನ್ನು ಬಿಡುಗಡೆ ಮಾಡಿದೆ. ಅಪಹರಿಸಲ್ಪಟ್ಟವರಲ್ಲಿ ಪಾಕಿಸ್ತಾನಿ ಸೇನೆ, ಪೊಲೀಸ್, ಭಯೋತ್ಪಾದನಾ ನಿಗ್ರಹ ಪಡೆ ಮತ್ತು ಇಂಟರ್ ಸರ್ವೀಸಸ್ ಇಂಟೆಲಿಜೆನ್ಸ್‌ನ ಸಕ್ರಿಯ ಕರ್ತವ್ಯ ನಿರತ ಸಿಬ್ಬಂದಿ ಸೇರಿದ್ದಾರೆ. ಅವರೆಲ್ಲರೂ ರಜೆಯ ಮೇಲೆ ಪಂಜಾಬ್‌ಗೆ ತೆರಳುತ್ತಿದ್ದರು ಎನ್ನಲಾಗಿದೆ. ಪರಿಸ್ಥಿತಿ ನಿಭಾಯಿಸಲು ಪಾಕಿಸ್ತಾನ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ.

ಜಾಫರ್ ಎಕ್ಸ್‌ಪ್ರೆಸ್ ಬಲೂಚಿಸ್ತಾನದ ರಾಜಧಾನಿ ಕ್ವೆಟ್ಟಾದಿಂದ ಪೇಶಾವರಕ್ಕೆ ಹೋಗುತ್ತಿದ್ದಾಗ, ರೈಲನ್ನು ನಿಲ್ಲಿಸಲು ಬಲೂಚ್ ಹೋರಾಟಗಾರು ಮಷ್ಕಾಫ್, ಧದರ್ ಮತ್ತು ಬೋಲನ್ ಬಳಿ ರೈಲ್ವೆ ಹಳಿಗಳನ್ನು ಸ್ಫೋಟಿಸಿದ್ದಾರೆ. ತಕ್ಷಣ ರೈಲು ನಿಂತಿದೆ.

ಬಳಿಕ ಗುಂಡಿನ ದಾಳಿ ನಡೆಸಿ ನಂತರ 400ಕ್ಕೂ ಹೆಚ್ಚು ಪ್ರಯಾಣಿಕರಿದ್ದ ರೈಲನ್ನು ತಮ್ಮ ವಶಕ್ಕೆ ತೆಗೆದುಕೊಂಡರು. 'ನಮ್ಮ ಸ್ವಾತಂತ್ರ್ಯ ಹೋರಾಟಗಾರರು ರೈಲ್ವೆ ಹಳಿಯನ್ನು ಸ್ಫೋಟಿಸಿದ್ದಾರೆ. ಜಾಫರ್ ಎಕ್ಸ್‌ಪ್ರೆಸ್ ರೈಲು ನಿಲ್ಲುವಂತೆ ಮಾಡಿದ್ದಾರೆ. ಹೋರಾಟಗಾರರು ರೈಲನ್ನು ವಶಪಡಿಸಿಕೊಂಡು ಎಲ್ಲಾ ಪ್ರಯಾಣಿಕರನ್ನು ಒತ್ತೆಯಾಳಾಗಿಟ್ಟುಕೊಳ್ಳಲಾಗಿದೆ ಎಂದು ಬಲೂಚ್ ವಿಮೋಚನಾ ಸೇನೆಯ ಹೋರಾಟಗಾರರು ಹೇಳಿಕೆಯಲ್ಲಿ ತಿಳಿಸಿದ್ದಾರೆ. 'ಸೇನಾ ಪಡೆಗಳು ಮಿಲಿಟರಿ ಕಾರ್ಯಾಚರಣೆ ನಡೆಸಲು ಪ್ರಯತ್ನಿಸಿದರೆ, ಪರಿಣಾಮಗಳು ತೀವ್ರವಾಗಿರುತ್ತವೆ. ಒತ್ತೆಯಾಳು ಗಳನ್ನು ಗಲ್ಲಿಗೇರಿಸಲಾಗುವುದು.

ಈ ರಕ್ತಪಾತಕ್ಕೆ ಭದ್ರತಾ ಪಡೆಗಳು ಮಾತ್ರ ಜವಾಬ್ದಾರರಾಗಿರುತ್ತವೆ ಎಂದು ಎಚ್ಚರಿಕೆ ಸಂದೇಶ ರವಾನಿಸಿದೆ.

ಈ ಕಾರ್ಯಾಚರಣೆಯನ್ನು ಬಲೂಚ್ ಲಿಬರೇಶನ್ ಆರ್ಮಿಯ ಮಜೀದ್ ಬ್ರಿಗೇಡ್, ಎಸ್‌ಟಿಓಎಸ್ ಮತ್ತು ಫತೇಹ್ ಸ್ಕ್ವಾಡ್ ನಡೆಸಿದೆ. ದಾಳಿಯ ಬಗ್ಗೆ ಬಲೋಚ್ ಹೋರಾಟಗಾರರು ಸಾಮಾಜಿಕ ಮಾಧ್ಯಮಗಳಲ್ಲಿ ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ಪ್ರಯಾಣಿಕರು ಮತ್ತು ಸಿಬ್ಬಂದಿಯನ್ನು ಸಂಪರ್ಕಿಸಲು ಪ್ರಯತ್ನಿಸಲಾಗುತ್ತಿದೆ ಎಂದು ರೈಲ್ವೆ ನಿಯಂತ್ರಕ ಮುಹಮ್ಮದ್ ಕಾಶಿಫ್ ತಿಳಿಸಿದ್ದಾರೆ. ಪರಿಸ್ಥಿತಿ ಗಂಭೀರವಾಗಿದ್ದು, ಸರ್ಕಾರವು ಸಿಬಿ ಆಸ್ಪತ್ರೆಯಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದೆ. ಭದ್ರತಾ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿದ್ದಾರೆ.

**ಮುಂದುವರಿದ ಕಾರ್ಯಾಚರಣೆ**

ಬಲೂಚ್ ಹೋರಾಟಗಾರು ರೈಲಿನ ಮೇಲೆ ಮನಬಂದಂತೆ ಗುಂಡು ಹಾರಿಸಿದ್ದಾರೆ. ಇದರಿಂದಾಗಿ ಲೋಕೋಪೈಲಟ್ ಗಂಭೀರವಾಗಿ ಗಾಯಗೊಂಡರು. ಕೆಲ ಪ್ರಯಾಣಿಕರ ಮೇಲೂ ಗುಂಡು ಹಾರಿಸಿದ್ದಾರೆ. ಘಟನೆಯ ನಂತರ ಇಡೀ ಪ್ರದೇಶವನ್ನು ಭದ್ರತಾ ಪಡೆಗಳು ಸುತ್ತುವರೆದಿದ್ದು, ಭಯೋತ್ಪಾದಕರ ವಿರುದ್ಧ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ ಎಂದು ಪಾಕಿಸ್ತಾನದ ಮಾಧ್ಯಮಗಳು ವರದಿ ಮಾಡಿವೆ.




### ವಾಟ್ಸ್ ಆ್ಯಪ್ ಗ್ರೂಪ್‌ನಿಂದ ಹೊರಹಾಕಿದ್ದಕ್ಕೆ

# ಗ್ರೂಪ್ ಅಡ್ಮಿನ್‌ಗೆ ಗುಂಡು ಹಾರಿಸಿ ಕೊಲೆ

**ಇಸ್ಲಾಮಾಬಾದ್:** ವಾಟ್ಸ್ ಆ್ಯಪ್ ಗ್ರೂಪ್ ನಿಂದ ತನ್ನನ್ನು ಹೊರ ಹಾಕಿದ ಕಾರಣಕ್ಕೆ ಸಿಟ್ಟಿಗೆದ್ದ ವ್ಯಕ್ತಿಯೊಬ್ಬ, ವಾಟ್ಸ್ ಆ್ಯಪ್‌ಗ್ರೂಪ್‌ನ ಅಡ್ಮಿನ್ ನನ್ನು ತನ್ನಲ್ಲಿದ್ದ ಪಿಸ್ತೂಲಿನಿಂದ ಶೂಟ್ ಮಾಡಿ ಕೊಲೆ ಮಾಡಿರುವ ಘಟನೆ ಪಾಕಿಸ್ತಾನದ ಪಶ್ಚಿಮ ಭಾಗದಲ್ಲಿರುವ ಪೆಶಾವರ್ ನಲ್ಲಿ ನಡೆದಿದೆ. ಕೊಲೆಯಾಗಿರುವವನ ಹೆಸರು ಮುಷ್ತಾಕ್ ಅಹ್ಮದ್. ಆತನನ್ನು ಕೊಂದಿರುವ ವ್ಯಕ್ತಿಯನ್ನು ಅಶ್ತಾಫ್ ಖಾನ್ ಎಂದು ಹೇಳಲಾಗಿದೆ. ಈತನೇ ತನ್ನಲ್ಲಿದ್ದ ಪಿಸ್ತೂಲಿನಿಂದ ಮುಷ್ತಾಕ್ ಅಹ್ಮದ್ ಮೇಲೆ ಗುಂಡು ಹಾರಿಸಿದ್ದಾನೆ.





ಘಟನೆಗೆ ಸಂಬಂಧಿಸಿದಂತೆ ಮುಷ್ತಾಕ್ ಅಹ್ಮದ್ ನ ಸಹೋದರ ಹುಮಾಯೂನ್ ಅವರು ನೀಡಿರುವ ದೂರಿನನ್ವಯ, ಪೆಶಾವರ್ ನಗರದ ಹೊರವಲಯದಲ್ಲಿರುವ ರೇಗಿ ಎಂಬಲ್ಲಿ ಈ ಘಟನೆ ನಡೆದಿದೆ. ಅಶ್ತಾಫ್ ಖಾನ್ ಅವರು ತಮ್ಮ ಸ್ಥಳೀಯ ಸ್ನೇಹಿತರು, ಸಮುದಾಯದವರನ್ನೆಲ್ಲಾ ಹಾಕಿಕೊಂಡು ಒಂದು ಗ್ರೂಪ್ ರಚಿಸಿದ್ದರು. ಆ ಗ್ರೂಪ್ ನಲ್ಲಿ ಕೊಲೆ ಆರೋಪಿ, ಅಶ್ಫಾಕ್ ಖಾನ್ ಕೂಡ ಇದ್ದ. ಇತ್ತೀಚೆಗೆ, ಗ್ರೂಪ್‌ನಲ್ಲಿ ಇಲ್ಲಸಲ್ಲದ ಮೆಸೇಜ್ ಗಳನ್ನು ಮಾಡುತ್ತಿದ್ದ ಆತನ ವಿರುದ್ಧ ಗ್ರೂಪ್ ಸದಸ್ಯರು ತೀವ್ರ ಅಸಮಾಧಾನ ಹೊಂದಿದ್ದರು.

ಅಂಥ ಮೆಸೇಜ್‌ಗಳನ್ನು ಕಳಿಸದಂತೆ ಗ್ರೂಪ್ ಅಡ್ಮಿನ್ ಆದ ಮುಷ್ತಾಕ್ ಅಹ್ಮದ್ ಹಲವಾರು ಬಾರಿ ಸೂಚನೆಗಳನ್ನು ಕೊಟ್ಟಿದ್ದರು. ಆದರೆ, ಅಶ್ತಾಫ್ ಅದನ್ನು ಲೆಕ್ಕಿಸಲಿಲ್ಲ. ಗ್ರೂಪ್ ನಲ್ಲಿ ಕಿರಿಕಿರಿಯುಂಟು ಮಾಡುವಂಥ ಮೆಸೇಜ್‌ಗಳನ್ನು ಹಾಕುತ್ತಲೇ ಮುಂದುವರಿದಿದ್ದರು. ಆತನ ಉಪಟಳವನ್ನು ನೋಡಿ ನೋಡಿ ಸಾಕಾಗಿ, ಇತ್ತೀಚೆಗೆ, ಮುಷ್ತಾಕ್ ಅವರು ಅಶ್ತಾಫ್ ನನ್ನು ಗ್ರೂಪ್ ನಿಂದ ಹೊರಹಾಕಿದ್ದರು. ಇದರಿಂದ ರೊಚ್ಚಿಗೆದ್ದಿದ್ದ ಅಶ್ತಾಫ್, ಕೂಡಲೇ ಫೋನ್ ಮಾಡಿ, ಮುಷ್ತಾಕ್ ಜೊತೆಗೆ ಜಗಳವಾಡಿದ್ದ. ಫೋನ್ ನಲ್ಲಿ ವಾದ – ಪ್ರತಿವಾದಗಳು ನಡೆದು ಕಡೆಗೆ ಫೋನಿನಲ್ಲಿ ಆಗಲ್ಲ ನೇರವಾಗಿ ಮುಖಾಮುಖಿಯಾಗಿ ಮಾತನಾಡೋಣ. ನನ್ನದೇನಾದರೂ ತಪ್ಪಿದ್ದರೆ ಕ್ಷಮೆ ಕೋರುತ್ತೇನೆ. ಆನಂತರ, ನಿಮಗೆ ಸರಿ ಅನ್ನಿಸಿದರೆ ನನ್ನನ್ನು ಮತ್ತೆ ಗ್ರೂಪ್ ಗೆ ಸೇರಿಸಿಕೊಳ್ಳಿ ಎಂದು ಅಶ್ತಾಫ್ ಕೇಳಿಕೊಂಡಿದ್ದ. ಅದಕ್ಕೆ ಒಪ್ಪಿದ ಮುಷ್ತಾಕ್, ರೇಗಿಯಲ್ಲಿ ಅಶ್ತಾಫ್ ಸೂಚಿಸಿದ್ದ ಜಾಗಕ್ಕೆ ಹೋಗಿ ಮಾತುಕತೆಗೆ ಮುಂದಾಗಿದ್ದರು.

ಜೊತೆಯಲ್ಲಿ ತಮ್ಮ ಸಹೋದರ ಹುಮಾಯೂನ್ ರನ್ನೂ ಕರೆದುಕೊಂಡು ಹೋಗಿದ್ದರು. ಅಲ್ಲಿಗೆ ಬಂದಿದ್ದ ಅಶ್ತಾಫ್, ಮಾತುಕತೆ ವೇಳೆ ಜಗಳ ಆರಂಭಿಸಿದ. ಇದಕ್ಕೆ ಮುಷ್ತಾಕ್ ಕೂಡ ಪ್ರತಿರೋಧ ವ್ಯಕ್ತಪಡಿಸುತ್ತಿದ್ದಾಗ ಅಶ್ತಾಫ್, ತಾನು ಜೇಬಿನಲ್ಲಿಟ್ಟುಕೊಂಡು ಬಂದಿದ್ದ ಪಿಸ್ತೂಲನ್ನು ಹೊರ ತೆಗೆದು ಮುಷ್ತಾಕ್ ಮೇಲೆ ಗುಂಡು ಹಾರಿಸಿಯೇಬಿಟ್ಟ. ತೀವ್ರವಾಗಿ ಗಾಯಗೊಂಡ ಮುಷ್ತಾಕ್ ಸ್ಥಳದಲ್ಲೇ ಸಾವಿಗೀಡಾದ ಎಂದು ಪೊಲೀಸರಿಗೆ ಹುಮಾಯೂನ್ ನೀಡಿದ ದೂರಿನಲ್ಲಿ ವಿವರಿಸಿದ್ದಾರೆ. ಅಶ್ತಾಫ್ ಇಂಥದ್ದೊಂದು ಕೃತ್ಯ ಮಾಡಬಹುದು ಎಂದು ತಾವು ಕನಸಿನಲ್ಲೂ ಎಣಿಸಿರಲಿಲ್ಲ ಎಂದು ಅವರು ಹೇಳಿದ್ದಾರೆ.

# ‘ಜೈಲರ್ 2’ ಸಿನಿಮಾ ಶೂಟಿಂಗ್ ಪ್ರಾರಂಭ ತಲೈವಾ ಭಾಗಿ

ಕಾಲಿವುಡ್ ಸೂಪರ್ ಸ್ಟಾರ್ ರಜನಿಕಾಂತ್ ನಟನೆಯ ‘ಜೈಲರ್ 2’ ಚಿತ್ರದ ಶೂಟಿಂಗ್ ಆರಂಭವಾಗಿದೆ. ಈ ಸಿನಿಮಾದ ಶೂಟಿಂಗ್‌ಗೆ ತಲೈವಾ ಕೂಡ ಭಾಗಿಯಾಗಿದ್ದಾರೆ.



ಬಹುನಿರೀಕ್ಷಿತ ‘ಜೈಲರ್ 2’ ಸಿನಿಮಾದ ಚಿತ್ರೀಕರಣಕ್ಕೆ ಚಾಲನೆ ಸಿಕ್ಕಿದೆ. ಚೆನ್ನೈನಲ್ಲಿ ಚಿತ್ರೀಕರಣ ಭರದಿಂದ ನಡೆಯುತ್ತಿದೆ. ಈ ಕುರಿತು ಸ್ವತಃ ಚಿತ್ರದ ನಿರ್ಮಾಣ ಸಂಸ್ಥೆ ಅಪ್‌ಡೇಟ್ ಹಂಚಿಕೊಂಡಿದೆ.

ಶೂಟಿಂಗ್‌ನಲ್ಲಿ ತಲೈವಾ ಕೂಡ ಭಾಗಿಯಾಗಿದ್ದಾರೆ ಎಂದು ವರದಿಯಾಗಿದೆ. 14 ದಿನಗಳ ಕಾಲ ಶೂಟಿಂಗ್ ನಡೆಯಲಿದ್ದು, ಚಿತ್ರದ ಪ್ರಮುಖ ದೃಶ್ಯ ಶೂಟಿಂಗ್ ಮಾಡಲಾಗುತ್ತದೆ ಎಂದು ವರದಿ ತಿಳಿಸಿದೆ. ನೆಲ್ಸನ್ ದಿಲೀಪ್ ಕುಮಾರ್ ನಿರ್ದೇಶನದಲ್ಲಿ ‘ಜೈಲರ್’ ಸಿನಿಮಾ 2022ರಲ್ಲಿ ಮೂಡಿ ಬಂದಿತ್ತು. ಈ ಚಿತ್ರ ಸೂಪರ್ ಹಿಟ್ ಆಗಿತ್ತು. ಇದರ ಪಾರ್ಟ್ 2ಗೆ ಇಂದು ಚಾಲನೆ ಸಿಕ್ಕಿರುವ ಸುದ್ದಿ ಕೇಳಿ ಅಭಿಮಾನಿಗಳು ಥ್ರಿಲ್ ಆಗಿದ್ದಾರೆ. ‘ಜೈಲರ್ ಪಾರ್ಟ್ 1’ರಲ್ಲಿ ಮೋಹನ್ ಲಾಲ್, ಜಾಕಿ ಶ್ರಾಫ್, ಶಿವಣ್ಣ ನಟಿಸಿದ್ದರು. ಭಾಗ 2ರಲ್ಲೂ ಇವರೆಲ್ಲಾ ನಟಿಸಲಿದ್ದಾರೆ ಎನ್ನಲಾಗಿದೆ.



# ಡಿಜಿಪಿ ಅಪ್ಪನಿಗೆ ಮಗಳು ತಂದ ಸಂಕಷ್ಟ

**ಇದೀಗ ತಂದೆಗೂ ಸಹ ವಿಚಾರಣೆ**

ಸ್ಯಾಂಡಲ್‌ವುಡ್ ನಟಿ ರನ್ಯಾಳಿಂದ ಚಿನ್ನ ಕಳ್ಳಸಾಗಣೆ ಪ್ರಕರಣ ಸಂಬಂಧ ಡಿಜಿಪಿ ರಾಮಚಂದ್ರ ರಾವ್‌ಗೆ ಮಗಳಿಂದ ಸಂಕಷ್ಟ ಶುರುವಾಗಿದೆ. ಮಗಳಿಂದ ಇದೀಗ ತಂದೆಗೂ ಸಹ ವಿಚಾರಣೆ ಭಾಗ್ಯ ಬಂದೊದಗಿದೆ. ಐಎಎಸ್ ಅಧಿಕಾರಿ ಗೌರವ್ ಗುಪ್ತ ನೇತೃತ್ವದಲ್ಲಿ ತನಿಖೆ ನಡೆಸಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಮಚಂದ್ರರಾವ್‌ಗೆ ಕೊಟ್ಟಿದ್ದ ಪ್ರೋಟೋಕಾಲ್‌ಗಳನ್ನು ದುರುಪಯೋಗ ಪಡಿಸಿಕೊಂಡು ವಿಮಾನ ನಿಲ್ದಾಣಗಳಲ್ಲಿ ಅಧಿಕಾರಿಗಳ ಕಣ್ತಪ್ಪಿಸಿಕೊಂಡು ಅಕ್ರಮ ಅಪರಾಧ ಎಸಗಿರುವ ಆರೋಪ ಇದೆ. ಸದ್ಯ ರಾಮಚಂದ್ರರಾವ್ ಅವರನ್ನು ತನಿಖೆ ನಡೆಸುವುದು ಅಗತ್ಯವೆಂದು ಸರ್ಕಾರ ಪರಿಗಣಿಸಿದೆ. ತನಿಖೆಗೆ ಅಗತ್ಯವಿರುವ ದಾಖಲೆಗಳನ್ನು ಮತ್ತು ನೆರವನ್ನು ನೀಡಲು ಡಿಜಿಐಜಿಪಿ ಅಲೋಕ್ ಮೋಹನ್‌ಗೆ ಸೂಚನೆ ನೀಡಲಾಗಿದ್ದು, ತನಿಖೆ ನಡೆಸಿ ಒಂದು ವಾರದಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಖಡಕ್ ಸೂಚನೆ ನೀಡಲಾಗಿದೆ.

ಇದಲ್ಲದೇ, ಪೊಲೀಸ್ ಸಿಬ್ಬಂದಿ ಪ್ರೋಟೋಕಾಲ್ ಉಲ್ಲಂಘನೆಯಲ್ಲಿ ಭಾಗಿಯಾಗಿರುವ ಬಗ್ಗೆ ಸಿಐಡಿ ತನಿಖೆ ನಡೆಸುವಂತೆ ಸಹ ಸರ್ಕಾರ ಆದೇಶ ನೀಡಿದೆ. ಇಬ್ಬರು ಪೊಲೀಸ್ ಕಾನ್‌ಸ್ಟೇಬಲ್‌ಗಳಿಗೆ ಇದರಿಂದ ಸಂಕಷ್ಟ ಎದುರಾಗಿದೆ. ಓರ್ವ ಪ್ರೋಟೋಕಾಲ್‌ನ ಹೆಡ್ ಕಾನ್‌ಸ್ಟೇಬಲ್, ಇನ್ನೊಬ್ಬ ಗುಪ್ತಚರ ಇಲಾಖೆ ಕಾನ್‌ಸ್ಟೇಬಲ್ ಆಗಿದ್ದರು. ರನ್ಯಾ ರಾವ್ ಏರ್‌ಪೋರ್ಟ್‌ಗೆ ಬಂದಾಗ ಪಾಳಿಯಲ್ಲಿ ಈ ಇಬ್ಬರೂ ಇದ್ದರು. ಪ್ರೋಟೋಕಾಲ್ ಕಾನ್‌ಸ್ಟೇಬಲ್ ಕರೆದ ಅಂತ ಗುಪ್ತಚರ ಇಲಾಖೆಯ ಅಧಿಕಾರಿಯೂ ರನ್ಯಾ ರಾವ್ ಭೇಟಿಗೆ ಹೋಗಿದ್ದರು.





# ಹಾಲಿವುಡ್ ಆಕ್ಷನ್ ಡೈರೆಕ್ಟರ್ ಬರ್ತ್‌ಡೇಗೆ ರಿಷಬ್ ಶೆಟ್ಟಿ ಪತ್ನಿ ವಿಶ್



ಹಾಲಿವುಡ್‌ನ ಖ್ಯಾತ ಸಾಹಸ ನಿರ್ದೇಶಕ ಟೋಡರ್ ಲಜರೋವ್ ಹುಟ್ಟುಹಬ್ಬಕ್ಕೆ ರಿಷಬ್ ಶೆಟ್ಟಿ ಪತ್ನಿ ಪ್ರಗತಿ ಶುಭಕೋರಿದ್ದಾರೆ. ಸಾಹಸ ನಿರ್ದೇಶಕ ಎನರ್ಜಿ, ಡೆಡಿಕೇಷನ್ ಸೂಪರ್ ಎಂದು ಪ್ರಗತಿ ಕೊಂಡಾಡಿದ್ದಾರೆ. ಮಾರ್ಚ್ 10ರಂದು ಹಾಲಿವುಡ್ ಆಕ್ಷನ್ ಡೈರೆಕ್ಟರ್ ಟೋಡರ್ ಲಜರೋವ್ ಬರ್ತ್‌ಡೇ ಹಿನ್ನೆಲೆ ರಿಷಬ್ ಪತ್ನಿ ವಿಶೇಷವಾಗಿ ಶುಭಕೋರಿದ್ದಾರೆ. ಹುಟ್ಟುಹಬ್ಬದ ಶುಭಾಶಯಗಳು. ನಿಮ್ಮ ಡೆಡಿಕೇಷನ್ ಮತ್ತು ಎನರ್ಜಿಗೆ ಸಾಟಿಯೇ ಇಲ್ಲ. ನಿಮ್ಮ ಈ ಒಂದು ಪವರ್‌ನಿಂದಲೇ ‘ಕಾಂತಾರ ಚಾಪ್ಟರ್ 1’ ಆಕ್ಷನ್ ಅದ್ಭುತವಾಗಿಯೇ ಬಂದಿದೆ ಎಂದು ಹೊಗಳಿ ಶುಭಕೋರಿದ್ದಾರೆ. ಟೋಡರ್ ಜೊತೆ ರಿಷಬ್ ಮತ್ತು ಪ್ರಗತಿ ಇರುವ ಫೋಟೋವನ್ನು ಹಂಚಿಕೊಂಡಿದ್ದಾರೆ. ‘ಕಾಂತಾರ ಚಾಪ್ಟರ್ 1’ಕ್ಕಾಗಿ ಹಾಲಿವುಡ್ ಸಾಹಸ ನಿರ್ದೇಶಕ ಟೋಡರ್ ಕೆಲಸ ಮಾಡಿದ್ದಾರೆ. ಅದಕ್ಕಾಗಿ ಅವರು ಭಾರತದಲ್ಲೇ ಇದ್ದಾರೆ. ಇನ್ನೂ ಈ ಹಿಂದೆ ಟೋಡರ್ ಅವರು ರಾಜಮೌಳಿ ನಿರ್ದೇಶನದ ಆರ್‌ಆರ್‌ಆರ್ ಚಿತ್ರಕ್ಕೂ ಸಾಹಸ ನಿರ್ದೇಶನ ಮಾಡಿ ಸೈ ಎನಿಸಿಕೊಂಡಿದ್ದಾರೆ.

# ತಮಿಳಿನತ್ತ ನಟಿ ಬಿಗ್ ಚಾನ್ಸ್ ಬಾಚಿಕೊಂಡ ಮೇಘಾ

‘ಜೊತೆ ಜೊತೆಯಲಿ’ ಸೀರಿಯಲ್ ಖ್ಯಾತಿಯ ಮೇಘಾ ಶೆಟ್ಟಿ ಕಾಲಿವುಡ್‌ನತ್ತ ಮುಖ ಮಾಡಿದ್ದಾರೆ. ಕನ್ನಡದಲ್ಲೇ ಹಲವು ಅವಕಾಶಗಳು ಇರುವಾಗಲೇ ತಮಿಳಿನಲ್ಲಿ ಬಿಗ್ ಆಫರ್‌ವೊಂದು ಸಿಕ್ಕಿದೆ. ತಮಿಳಿನ ನಟ ಕಮ್ ನಿರ್ದೇಶಕ ಶಶಿಕುಮಾರ್ ಅವರ ಹೊಸ ಸಿನಿಮಾದಲ್ಲಿ ನಾಯಕಿಯಾಗಿ ನಟಿಸುವ ಅವಕಾಶವನ್ನು ಮೇಘಾ ಶೆಟ್ಟಿ ಗಿಟ್ಟಿಸಿಕೊಂಡಿದ್ದಾರೆ. ಈ ಮೂಲಕ ಕಾಲಿವುಡ್‌ಗೆ ಮತ್ತೋರ್ವ ಕನ್ನಡತಿ ಪಾದಾರ್ಪಣೆ ಮಾಡುತ್ತಿದ್ದಾರೆ. ಇದೀಗ ಈ ಚಿತ್ರದ ಮುಹೂರ್ತ ಸಮಾರಂಭ ಸರಳವಾಗಿ ಜರುಗಿದೆ. ಈ ಪ್ರಾಜೆಕ್ಟ್ ಕುರಿತು ಮಾಹಿತಿಯನ್ನು ಸೋಶಿಯಲ್ ಮೀಡಿಯಾದಲ್ಲಿ ನಟಿ ಹಂಚಿಕೊಂಡಿದ್ದಾರೆ. ಸದ್ಯ ಹೊಸ ಬಗೆಯ ಪಾತ್ರ ಹಾಗೂ ಕಥೆಗೆ ಮೇಘಾ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಾರೆ. ಕನ್ನಡದ ಆಪರೇಷನ್ ಲಂಡನ್ ಕೆಫೆ, ಗ್ರಾಮಾಯಣ, ಚೀತಾ ಸೇರಿದಂತೆ ಹಲವು ಚಿತ್ರಗಳು ನಟಿಯ ಕೈಯಲ್ಲಿವೆ. ಅಂದಹಾಗೆ, ‘ಜೊತೆ ಜೊತೆಯಲಿ’ ಸೀರಿಯಲ್‌ನಲ್ಲಿ ಅನಿರುದ್ಧಗೆ ನಾಯಕಿಯಾಗಿ ಕಿರುತೆರೆ ಪ್ರವೇಶಿಸಿದರು. ಆ ನಂತರ ‘ತ್ರಿಬಲ್ ರೈಡಿಂಗ್’, ದಿಲ್ ಪಸಂದ್, ಕೈವ ಸಿನಿಮಾಗಳಲ್ಲಿ ಮೇಘಾ ನಟಿಸಿದ್ದಾರೆ

# ಅಭಿಮಾನಿಗೆ ರಾಗಿಣಿ ಕಪಾಳಮೋಕ್ಷ

**ಕೈ ಹಿಡಿದು ಎಳೆದ ಆ ವ್ಯಕ್ತಿ**

ಸ್ಯಾಂಡಲ್‌ವುಡ್ ನಟಿ ರಾಗಿಣಿ ದ್ವಿವೇದಿ ಜೊತೆ ಅಭಿಮಾನಿಯೋರ್ವ ಅನುಚಿತವಾಗಿ ವರ್ತಿಸಿದ ಘಟನೆ ನಡೆದಿದೆ. ಕಾರ್ಯಕ್ರಮವೊಂದರಲ್ಲಿ ಬಲವಂತವಾಗಿ ಕೈ ಹಿಡಿದು ಎಳೆದ ಅಭಿಮಾನಿಗೆ ರಾಗಿಣಿ ಕಪಾಳಮೋಕ್ಷ ಮಾಡಿದ್ದಾರೆ. ಅಭಿಮಾನ ಅನ್ನೋ ಹೆಸರಲ್ಲಿ ಕೆಲ ನಟ ನಟಿಯರ ಜೊತೆ ಕೆಲವರು ಅಸಭ್ಯವಾಗಿ ವರ್ತಿಸುತ್ತಾರೆ. ಅಂತಹದ್ದೇ ಘಟನೆ ರಾಗಿಣಿ ಎದುರಿಸಿದ್ದಾರೆ. ಅಭಿಮಾನಿಯೊಬ್ಬ ಫೋಟೋ ತೆಗೆಸಿಕೊಳ್ಳುವ ನೆಪದಲ್ಲಿ ರಾಗಿಣಿಯ ಕೈ ಹಿಡಿದು ಎಳೆದಿದ್ದಾರೆ. ಕೂಡಲೇ ನಟಿ ರಾಂಗ್ ಆಗಿದ್ದಾರೆ. ಕೈ ಹಿಡಿದು ಎಳೆದ ಆ ವ್ಯಕ್ತಿಗೆ ರಫ್ ಅಂತ ಕೆನ್ನೆಗೆ ಬಾರಿಸಿ ಕ್ಲಾಸ್ ತೆಗೆದುಕೊಂಡಿದ್ದಾರೆ. ಈ ಕ್ಷಣ ಘಟನೆ ನೋಡಿ ಸೇರಿದ್ದ ಜನ ಶಾಕ್ ಆಗಿದ್ದಾರೆ. ಆ ಕೂಡಲೇ ಆ ವ್ಯಕ್ತಿಯನ್ನು ಹೊರ ದಬ್ಬಲಾಗಿದೆ. ಇತ್ತೀಚೆಗೆ ಸಾಂಗ್ ಲಾಂಚ್ ಕಾರ್ಯಕ್ರಮಕ್ಕೆ ಬಂದ ವೇಳೆ ಈ ಘಟನೆ ನಡೆದಿದೆ. ರಾಗಿಣಿಯ ನಡೆಗೆ ಅನೇಕರು ಮೆಚ್ಚುಗೆ ಸೂಚಿಸಿದ್ದಾರೆ. ಸರಿಯಾಗಿ ಮಾಡಿದ್ದೀರಿ ನೀವು ಅಂತ ನಟಿಯ ಪರ ನಿಂತಿದ್ದಾರೆ ಫ್ಯಾನ್ಸ್.

# ದಿ ಡೆವಿಲ್ ಮತ್ತೆ ಆರಂಭ

**12ರಿಂದ 15ರವರೆಗೆ ಮೈಸೂರಿನಲ್ಲಿ ಶೂಟಿಂಗ್**



ನಟ ದರ್ಶನ್ ಮತ್ತೆ ‘ದಿ ಡೆವಿಲ್’ ಶೂಟಿಂಗ್‌ಗೆ ಎಂಟ್ರಿ ಕೊಡಲಿದ್ದಾರೆ. ಮೈಸೂರಿನಲ್ಲಿ ಸ್ಥಗಿತಗೊಂಡಿದ್ದ ಶೂಟಿಂಗ್ ಮತ್ತೆ ಚಾಲನೆ ನೀಡಲಾಗುತ್ತಿದೆ. ರೇಣುಕಾಸ್ವಾಮಿ ಪ್ರಕರಣದ ಆರೋಪಿ ದರ್ಶನ್ ಭದ್ರತೆಗಾಗಿ ಭಾರೀ ಮೊತ್ತ ಹಣವನ್ನು ಚಿತ್ರತಂಡ ಖರ್ಚು ಮಾಡಿದ್ದಾರೆ. ಮಾರ್ಚ್ 12ರಿಂದ 15ರವರೆಗೆ ಮೈಸೂರಿನಲ್ಲಿ ‘ದಿ ಡೆವಿಲ್’ ಚಿತ್ರದ ಶೂಟಿಂಗ್ ಮಾಡಲು ಅನುಮತಿ ಸಿಕ್ಕಿದೆ. ಮಾ.12ರಿಂದ ಮಾ.14ರವರೆಗೆ ಸರ್ಕಾರಿ ಅಥಿತಿ ಗೃಹದಲ್ಲಿ ಚಿತ್ರತಂಡ ಬೆಳಿಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆವರೆಗೆ ಶೂಟಿಂಗ್ ಮಾಡಲಿದ್ದಾರೆ. ಮಾ.15ರಂದು ಲಲಿತಮಹಲ್ ಪ್ಯಾಲೆಸ್‌ನಲ್ಲಿ ಬೆಳಿಗ್ಗೆ 7 ಗಂಟೆಯಿಂದ ರಾತ್ರಿ 9 ಗಂಟೆವರೆಗೂ ಚಿತ್ರೀಕರಣಕ್ಕೆ ಪ್ಲ್ಯಾನ್ ಮಾಡಲಾಗಿದೆ. ಕಾನೂನು ಸುವ್ಯವಸ್ಥೆ ಡಿಸಿಪಿ ಮುತ್ತುರಾಜ್ ಚಿತ್ರೀಕರಣಕ್ಕೆ ಅನುಮತಿ ನೀಡಿದ್ದಾರೆ. ಒಂದು ಪಾಳಿಯಲ್ಲಿ 10 ಮಂದಿ ಪೊಲೀಸ್ ಸಿಬ್ಬಂದಿಯಂತೆ ಒಟ್ಟು 32 ಸಿಬ್ಬಂದಿ ಶೂಟಿಂಗ್ ಭದ್ರತೆಗೆ ನಿಯೋಜನೆ ಮಾಡಲಾಗಿದೆ. ನಟನ ಭದ್ರತೆಗಾಗಿ ಸಿಬ್ಬಂದಿ ನಿಯೋಜಿಸಲು 1,64,785 ರೂ. ‘ದಿ ಡೆವಿಲ್’ ಚಿತ್ರತಂಡ ಪಾವತಿಸಿದೆ. ಅಂದಹಾಗೆ, 10 ತಿಂಗಳ ಹಿಂದೆ ಮೈಸೂರಿನಲ್ಲಿ ರೇಣುಕಾಸ್ವಾಮಿ ಪ್ರಕರಣದ ಸಂಬಂಧ ದರ್ಶನ್ ಬಂಧನವಾಗಿತ್ತು. ‘ಡೆವಿಲ್’ ಸಿನಿಮಾಗೆ ಚಿತ್ರೀಕರಣಕ್ಕೆಂದು ರಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ತಂಗಿದ್ದ ವೇಳೆ ದರ್ಶನ್ ಅವರನ್ನು ಅರೆಸ್ಟ್ ಮಾಡಲಾಗಿತ್ತು. ಇದೀಗ 10 ತಿಂಗಳ ಬಳಿಕ ಮತ್ತೆ ಮೈಸೂರಿನಲ್ಲಿ ‘ದಿ ಡೆವಿಲ್’ ಶೂಟಿಂಗ್ ನಡೆಯಲಿದೆ. ಇನ್ನೂ ಈ ಸಿನಿಮಾಗೆ ಮಿಲನಾ ಪ್ರಕಾಶ್ ನಿರ್ದೇಶನ ಮಾಡುತ್ತಿದ್ದಾರೆ. ದರ್ಶನ್‌ಗೆ ರಚನಾ ರೈ ಜೋಡಿಯಾಗಿದ್ದಾರೆ. ‘ಬಿಗ್ ಬಾಸ್ ಕನ್ನಡ 10’ರ ಸ್ಪರ್ಧಿ ವಿನಯ್ ಗೌಡ ಕೂಡ ಈ ಚಿತ್ರದಲ್ಲಿ ನಟಿಸಲಿದ್ದಾರೆ.

# ಟೀಮ್ ಇಂಡಿಯಾವನ್ನು ನಾವು ಮಕಾಡೆ ಮಲಗಿಸುತ್ತಿದ್ದೆವು



**ಈಗ ಏನಾಗಿದೆ ನೋಡಿ**

ಭಾರತ ಮತ್ತು ಪಾಕಿಸ್ತಾನ್ ತಂಡಗಳು ಒಟ್ಟು 208 ಪಂದ್ಯಗಳಲ್ಲಿ ಮುಖಾಮುಖಿಯಾಗಿವೆ. ಈ ವೇಳೆ ಪಾಕಿಸ್ತಾನ್ ತಂಡ 88 ಮ್ಯಾಚ್‌ಗಳಲ್ಲಿ ಜಯ ಸಾಧಿಸಿದರೆ, ಭಾರತ ತಂಡ ಗೆದ್ದಿರುವುದು 76 ಪಂದ್ಯಗಳನ್ನು ಮಾತ್ರ.

ಇದಾಗ್ಯೂ 2000 ರಿಂದ ಟೀಮ್ ಇಂಡಿಯಾ ಪಾಕ್ ವಿರುದ್ಧ ಪಾರುಪತ್ಯ ಮರೆಯುತ್ತಾ ಬರುತ್ತಿದೆ. ಚಾಂಪಿಯನ್ಸ್ ಟ್ರೋಫಿಯಲ್ಲಿ ಟೀಮ್ ಇಂಡಿಯಾ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಈ ಮೂಲಕ ಮೂರು ಬಾರಿ ಚಾಂಪಿಯನ್ಸ್ ಟ್ರೋಫಿ ಗೆದ್ದ ವಿಶ್ವದ ಏಕೈಕ ತಂಡವೆಂಬ ಹೆಗ್ಗಳಿಕೆಯನ್ನು ಟೀಮ್ ಇಂಡಿಯಾ ತನ್ನದಾಗಿಸಿಕೊಂಡಿದೆ.

ಇದಕ್ಕೂ ಮುನ್ನ 2002 ರಲ್ಲಿ ಸೌರವ್ ಗಂಗೂಲಿ ನಾಯಕತ್ವದಲ್ಲಿ ಭಾರತ ತಂಡ ಚಾಂಪಿಯನ್ಸ್ ಟ್ರೋಫಿ ಜಯಿಸಿತ್ತು. ಇದಾದ ಬಳಿಕ 2013 ರಲ್ಲಿ ಧೋನಿ ಮುಂದಾಳತ್ವದಲ್ಲಿ ಟೀಮ್ ಇಂಡಿಯಾ ಚಾಂಪಿಯನ್ಸ್ ಟ್ರೋಫಿ ಎತ್ತಿ ಹಿಡಿಯಿತು.

ಇಂತಹ ಯಶಸ್ಸಿಗೆ ಕಾರಣ ಭಾರತೀಯ ಕ್ರಿಕೆಟ್ ಮಂಡಳಿಯ ವ್ಯವಸ್ಥೆ ಎಂದು ಅಭಿಪ್ರಾಯಪಟ್ಟಿದ್ದಾರೆ ಪಾಕಿಸ್ತಾನ್ ತಂಡದ ಮಾಜಿ ವೇಗಿ ಶೊಯೆಬ್ ಅಖ್ತರ್. ಚಾಂಪಿಯನ್ಸ್ ಟ್ರೋಫಿ ಫೈನಲ್ ಪಂದ್ಯದ ಬಳಿಕ ಚಾನೆಲ್ ಚರ್ಚೆಯೊಂದರಲ್ಲಿ ಮಾತನಾಡಿದ ಶೊಯೆಬ್ ಅಖ್ತರ್, 2000 ಕ್ಕಿಂತ ಮೊದಲು 2002 ರವರೆಗೆ ಪಾಕಿಸ್ತಾನ್ ವಿರುದ್ಧ ಗೆಲ್ಲುವ ಬಗ್ಗೆ ಭಾರತಕ್ಕೆ ಯೋಚಿಸಲೂ ಸಾಧ್ಯವಾಗುತ್ತಿರಲಿಲ್ಲ. ಇದಂತು ನಿಜ. ನಾವು ಅವರನ್ನು ಅವರ ಮನೆಯಲ್ಲಿ ಸಾಧ್ಯವಾದಷ್ಟು ಸೋಲಿಸಿದ್ದೆವು. ಆದರೆ ಆ ಬಳಿಕ ಎಲ್ಲಾವೂ ಬದಲಾಯಿತು. ಇದ್ದಕ್ಕಿದ್ದಂತೆ ಭಾರತ ತಂಡದ ನಾಯಕ ಬದಲಾಯಿತು. ಟೀಮ್ ಇಂಡಿಯಾಗೆ ಸೌರವ್ ಗಂಗೂಲಿ ನಾಯಕರಾದರು.

ಅವರು ಹೊಸ ತಂಡವನ್ನು ಕಟ್ಟಿದರು. ಸೌರವ್ ಗಂಗೂಲಿ ಮುಂದಾಳತ್ವದಲ್ಲಿ ಭಾರತ ತಂಡಕ್ಕೆ ಹೊಸ ಕಾಯಕಲ್ಪ ಲಭಿಸಿತು. ಆ ಬಳಿಕ ಧೋನಿ ನಾಯಕರಾದರು. ಅವರು ಸಹ ಇದೇ ಯೋಜನೆಯನ್ನು ಮುಂದುವರೆಸಿದರು. ಗಂಭೀರ್ ಅವರ ಒಂದು ದೃಢ ನಿರ್ಧಾರ ಚಾಂಪಿಯನ್ಸ್ ಟ್ರೋಫಿಯ ಚಿತ್ರಣ ಬದಲಿಸಿತು ಹೊಸ ಸಿಬ್ಬಂದಿಗಳು ಬಂದರು. ಹೊಸ ಹೊಸ ಯೋಜನೆಗಳು ರೂಪುಗೊಂಡವು. ಕೋಚ್ ಆಗಿ ಬಂದ ರವಿಶಾಸ್ತ್ರಿ ತಂಡವನ್ನು ಮತ್ತಷ್ಟು ಬಲಿಷ್ಠಗೊಳಿಸಿದರು. ಇದೀಗ ಅದರ ಫಲವಾಗಿ ಟೀಮ್ ಇಂಡಿಯಾ ವಿಶ್ವದ ಅತ್ಯುತ್ತಮ ತಂಡವಾಗಿ ಗುರುತಿಸಿಕೊಂಡಿದೆ. ಹೀಗೆ ಬಲಿಷ್ಠ ತಂಡದ ಯಶಸ್ಸಿನ ಹಿಂದೆ ಟೀಮ್ ಇಂಡಿಯಾದ 20 ವರ್ಷಗಳ ಕಠಿಣ ಪರಿಶ್ರಮವಿದೆ ಎಂದು ಶೊಯೆಬ್ ಅಖ್ತರ್ ಹೇಳಿದ್ದಾರೆ. ಈ 20 ವರ್ಷಗಳ ಕಠಿಣ ಪರಿಶ್ರಮದ ಫಲವಾಗಿ ನಾವು ಸತತವಾಗಿ ಸೋಲಿಸುತ್ತಿದ್ದ ಟೀಮ್ ಇಂಡಿಯಾ ಇಂದು ನಮ್ಮ ವಿರುದ್ಧ ಅತ್ಯಂತ ಸುಲಭವಾಗಿ ಗೆಲ್ಲುತ್ತಿದೆ. ವಿಶ್ವದ ಅತ್ಯುತ್ತಮ ತಂಡವಾಗಿ ಗುರುತಿಸಿಕೊಂಡಿದೆ. ಇದಕ್ಕೆ ಸಾಕ್ಷಿ ಈ ಬಾರಿಯ ಚಾಂಪಿಯನ್ಸ್ ಟ್ರೋಫಿಯಲ್ಲಿನ ಪ್ರದರ್ಶನ ಎಂದು ಶೊಯೆಬ್ ಅಖ್ತರ್ ಅಭಿಪ್ರಾಯಪಟ್ಟಿದ್ದಾರೆ.

# ಪ್ಲೇಆಫ್‌ಗೆ ಮೂರು ತಂಡಗಳು ಎಂಟ್ರಿ



**2 ತಂಡಗಳು ಟೂರ್ನಿಯಿಂದ ಹೊರಕ್ಕೆ**


ವುಮೆನ್ಸ್ ಪ್ರೀಮಿಯರ್ ಲೀಗ್‌ನ ಮೂರನೇ ಆವೃತ್ತಿಯು ಮುಕ್ತಾಯದ ಹಂತಕ್ಕೆ ಬಂದು ನಿಂತಿದೆ. ಈಗಾಗಲೇ 3 ತಂಡಗಳು ಪ್ಲೇಆಫ್‌ಗೆ ಅರ್ಹತೆ ಪಡೆದರೆ, 2 ತಂಡಗಳು ಟೂರ್ನಿಯಿಂದ ಹೊರಬಿದ್ದಿದೆ. ಹೀಗೆ ಹೊರಬಿದ್ದ ತಂಡಗಳೆಂದರೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಯುಪಿ ವಾರಿಯರ್ಸ್.

ಲೀಗ್ ಹಂತದಲ್ಲಿ 8 ಪಂದ್ಯಗಳನ್ನಾಡಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡ 5 ಜಯ ಹಾಗೂ 3 ಸೋಲುಗಳೊಂದಿಗೆ ಒಟ್ಟು 10 ಅಂಕಗಳನ್ನು ಕಲೆಹಾಕಿದೆ. ಈ ಮೂಲಕ ಅಂಕ ಪಟ್ಟಿಯಲ್ಲಿ ಅಗ್ರಸ್ಥಾನ ಅಲಂಕರಿಸಿ ಪ್ಲೇಆಫ್‌ಗೆ ಪ್ರವೇಶಿಸಿದೆ.

ಇನ್ನು ಮುಂಬೈ ಇಂಡಿಯನ್ಸ್ ತಂಡವು ಈವರೆಗೆ 7 ಪಂದ್ಯಗಳನ್ನಾಡಿದ್ದು, ಈ ಪಂದ್ಯಗಳಲ್ಲಿ 5 ಜಯ ಸಾಧಿಸಿ ಒಟ್ಟು 10 ಪಾಯಿಂಟ್ಸ್ ಕಲೆಹಾಕಿದೆ. ಈ ಮೂಲಕ +0.298 ನೆಟ್ ರನ್ ರೇಟ್‌ನೊಂದಿಗೆ ಪ್ಲೇಆಫ್‌ಗೆ ಅರ್ಹತೆಗಿಟ್ಟಿಸಿಕೊಂಡಿದೆ. ಹಾಗೆಯೇ ಗುಜರಾತ್ ಜೈಂಟ್ಸ್ ತಂಡವು ಆಡಿರುವ 8 ಪಂದ್ಯಗಳಲ್ಲಿ 4 ಜಯ ಹಾಗೂ 4 ಸೋಲುಗಳೊಂದಿಗೆ ಒಟ್ಟು 8 ಅಂಕಗಳನ್ನು ಪಡೆದುಕೊಂಡಿದೆ. ಈ ಮೂಲಕ ಅಂಕ ಪಟ್ಟಿಯಲ್ಲಿ ಮೂರನೇ ಸ್ಥಾನ ಅಲಂಕರಿಸಿ ಪ್ಲೇಆಫ್‌ಗೆ ಪ್ರವೇಶಿಸಿದೆ.



# ಡೆಲ್ಲಿ ಕ್ಯಾಪಿಟಲ್ಸ್ ತಂಡದ ಬಿಗ್ ಆಫರ್ ತಿರಸ್ಕರಿಸಿದ ಕೆಎಲ್ ರಾಹುಲ್



ಕೆಎಲ್ ರಾಹುಲ್ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಎರಡು ತಂಡಗಳನ್ನು ಮುನ್ನಡೆಸಿದ್ದಾರೆ. ಈ ಹಿಂದೆ ಪಂಜಾಬ್ ಕಿಂಗ್ ತಂಡದ ಕ್ಯಾಪ್ಟನ್ ಆಗಿ ಕಾಣಿಸಿಕೊಂಡಿದ್ದ ರಾಹುಲ್, ಆ ಬಳಿಕ ಲಕ್ನೋ ಸೂಪರ್ ಜೈಂಟ್ಸ್ ತಂಡದ ಸಾರಥ್ಯವಹಿಸಿಕೊಂಡಿದ್ದರು. ಇದೀಗ ಡೆಲ್ಲಿ ಕ್ಯಾಪಿಟಲ್ಸ್ ಪಾಲಾಗಿರುವ ಕನ್ನಡಿಗನಿಗೆ ಡಿಸಿ ಫ್ರಾಂಚೈಸಿ ಬಿಗ್ ಆಫರ್ ನೀಡಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-18 ಕ್ಕಾಗಿ 9 ಫ್ರಾಂಚೈಸಿಗಳು ತಮ್ಮ ತಂಡಗಳ ನಾಯಕರನ್ನು ಘೋಷಿಸಿದೆ. ಇದಾಗ್ಯೂ, ಡೆಲ್ಲಿ ಕ್ಯಾಪಿಟಲ್ಸ್ ತಂಡದ ಕ್ಯಾಪ್ಟನ್ ಯಾರಾಗಲಿದ್ದಾರೆ ಎಂಬುದು ಇನ್ನೂ ಸಹ ಬಹಿರಂಗವಾಗಿಲ್ಲ. ಇದರ ನಡುವೆ ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸಿಯು ಕನ್ನಡಿಗ ಕೆಎಲ್ ರಾಹುಲ್‌ಗೆ ನಾಯಕತ್ವ ನೀಡಲು ಆಸಕ್ತಿ ತೋರಿರುವ ವಿಚಾರ ಬಹಿರಂಗವಾಗಿದೆ.

ಆದರೆ ಕೆಎಲ್ ರಾಹುಲ್ ಈ ನಾಯಕತ್ವದ ಆಫರ್ ಅನ್ನು ನಯವಾಗಿ ತಿರಸ್ಕರಿಸಿದ್ದಾರೆ. ಡೆಲ್ಲಿ ಕ್ಯಾಪಿಟಲ್ಸ್ ಪರ ಆಟಗಾರನಾಗಿ ಕೊಡುಗೆ ನೀಡಲು ಬಯಸುತ್ತೇನೆ. ನನಗೆ ಯಾವುದೇ ಹೆಚ್ಚುವರಿ ಜವಾಬ್ದಾರಿ ಬೇಡ ಎಂದು ರಾಹುಲ್ ಹೇಳಿದ್ದಾರೆ ಎಂದು ವರದಿಯಾಗಿದೆ.

ಇದಾಗ್ಯೂ, ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸಿ ಇನ್ನೂ ಕೂಡ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ ಎಂದು ತಿಳಿದು ಬಂದಿದೆ. ಹೀಗಾಗಿ ಮತ್ತೊಮ್ಮೆ ರಾಹುಲ್ ಅವರ ಮನವೊಲಿಸಲು ಮುಂದಾಗಬಹುದು. ಆದರೆ ಮತ್ತೊಮ್ಮೆ ಕೆಎಲ್‌ಆರ್ ನಾಯಕತ್ವವನ್ನು ನಿರಾಕರಿಸಿದರೆ ಡೆಲ್ಲಿ ಕ್ಯಾಪಿಟಲ್ಸ್ ಮುಂದೆ ಎರಡು ಆಯ್ಕೆಗಳಿವೆ. ಇಲ್ಲಿ ಆಲ್‌ರೌಂಡರ್ ಆಗಿ ತಂಡದಲ್ಲಿ ಅಕ್ಷರ್ ಪಟೇಲ್ ಇದ್ದು, ಈ ಹಿಂದೆ ಕೆಲ ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ ಅನುಭವ ಹೊಂದಿದ್ದಾರೆ. ಹಾಗೆಯೇ ಅನುಭವಿ ನಾಯಕನಾಗಿ ಫಾಫ್ ಡುಪ್ಲೆಸಿಸ್ ಕೂಡ ಡೆಲ್ಲಿ ಪಡೆಯಲಿದ್ದಾರೆ. ಹೀಗಾಗಿ ಕೆಎಲ್ ರಾಹುಲ್ ನಾಯಕತ್ವ ಒಲ್ಲೆ ಎಂದರೆ, ಇವರಿಬ್ಬರಲ್ಲಿ ಒಬ್ಬರಿಗೆ ಕ್ಯಾಪ್ಟನ್ ಪಟ್ಟ ಸಿಗಲಿದೆ.

ಡೆಲ್ಲಿ ಕ್ಯಾಪಿಟಲ್ಸ್ ತಂಡ: ಅಕ್ಷರ್ ಪಟೇಲ್, ಕುಲ್ದೀಪ್ ಯಾದವ್, ಟ್ರಿಸ್ಟನ್ ಸ್ಟಬ್ಸ್, ಅಭಿಷೇಕ್ ಪೊರೆಲ್, ಮಿಚೆಲ್ ಸ್ಟಾರ್ಕ್, ಕೆಎಲ್ ರಾಹುಲ್, ಹ್ಯಾರಿ ಬ್ರೂಕ್, ಜೇಕ್ ಫ್ರೇಸರ್-ಮೆಕ್‌ಗುರ್ಕ್, ಟಿ.ನಟರಾಜನ್, ಕರುಣ್ ನಾಯರ್, ಸಮೀರ್ ರಿಝ್ವಿ, ಅಶುತೋಷ್ ಶರ್ಮಾ, ಮೋಹಿತ್ ಶರ್ಮಾ, ಫಾಫ್ ಡು ಪ್ಲೆಸಿಸ್, ಮುಖೇಶ್ ಕುಮಾರ್, ದರ್ಶನ್ ನಲ್ಕಂಡೆ, ವಿಪ್ರಜ್ ನಿಗಮ್, ದುಷ್ಮಂತ ಚಮೀರಾ, ಡೊನೊವನ್ ಫೆರೇರಾ, ಅಜಯ್ ಮಂಡಲ್, ಮನ್ವಂತ್ ಕುಮಾರ್, ತ್ರಿಪುರಾಣ ವಿಜಯ್, ಮಾಧವ್ ತಿವಾರಿ.

# ನಿವೃತ್ತಿ ಯಾವಾಗ? ತ್ರಿಮೂರ್ತಿಗಳಿಂದ ಖಡಕ್ ಉತ್ತರ



ಟಿ20 ವಿಶ್ವಕಪ್ 2024ರ ಮುಕ್ತಾಯದ ಬೆನ್ನಲ್ಲೇ ಟೀಮ್ ಇಂಡಿಯಾ ನಾಯಕ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಹಾಗೂ ರವೀಂದ್ರ ಜಡೇಜಾ ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಹೀಗಾಗಿಯೇ ಈ ಬಾರಿಯ ಚಾಂಪಿಯನ್ಸ್ ಟ್ರೋಫಿ ಮುಕ್ತಾಯದ ಬಳಿಕ ಈ ಮೂವರು ಏಕದಿನ ಸ್ವರೂಪದಿಂದಲೂ ನಿವೃತ್ತರಾಗಲಿದ್ದಾರೆ ಎಂಬ ಸುದ್ದಿಗಳು ಹುಟ್ಟಿಕೊಂಡಿದ್ದವು.

ಚಾಂಪಿಯನ್ಸ್ ಟ್ರೋಫಿ ಮುಕ್ತಾಯದ ಬೆನ್ನಲ್ಲೇ ಟೀಮ್ ಇಂಡಿಯಾದ ಮೂವರು ಹಿರಿಯ ಆಟಗಾರರು ನಿವೃತ್ತಿ ನೀಡಲಿದ್ದಾರೆ ಎಂಬ ಸುದ್ದಿಗಳು ಹರಿದಾಡಿದ್ದವು. ಅದರಲ್ಲೂ ಭಾರತ ತಂಡ ಫೈನಲ್‌ಗೇರುತ್ತಿದ್ದಂತೆ ರೋಹಿತ್ ಶರ್ಮಾ ಹಾಗೂ ರವೀಂದ್ರ ಜಡೇಜಾ ಏಕದಿನ ಕ್ರಿಕೆಟ್‌ಗೆ ಗುಡ್ ಬೈ ಹೇಳುವುದು ಖಚಿತ ಎನ್ನಲಾಗಿತ್ತು.

**2027ರ ಏಕದಿನ ವಿಶ್ವಕಪ್ ಆಡುವ ಇರಾದೆ**

ಆದರೀಗ ಚಾಂಪಿಯನ್ಸ್ ಟ್ರೋಫಿ ಮುಗಿದಿದೆ. ಟ್ರೋಫಿಯೊಂದಿಗೆ ಟೀಮ್ ಇಂಡಿಯಾ ಆಟಗಾರರು ಭಾರತಕ್ಕೆ ಮರಳಿದ್ದಾರೆ. ಈ ಮರಳುವಿಕೆಯ ಬೆನ್ನಲ್ಲೇ ನಿವೃತ್ತಿ ವಿಚಾರವಾಗಿ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಹಾಗೂ ರವೀಂದ್ರ ಜಡೇಜಾ ಮೌನ ಮುರಿದಿದ್ದಾರೆ.

ಈ ಬಗ್ಗೆ ಮಾತನಾಡಿರುವ ರೋಹಿತ್ ಶರ್ಮಾ, ಸದ್ಯಕ್ಕಂತು ನಾನು ಏಕದಿನ ಕ್ರಿಕೆಟ್‌ನಿಂದ ನಿವೃತ್ತಿಯಾಗುತ್ತಿಲ್ಲ ಎಂದು ತಿಳಿಸಿದ್ದಾರೆ. ಎಲ್ಲಿಯವರೆಗೆ ಸಾಧ್ಯವೋ ಅಲ್ಲಿತನಕ ನಾನು ಟೀಮ್ ಇಂಡಿಯಾದಲ್ಲಿ ಮುಂದುವರೆಯುತ್ತೇನೆ ಎಂದಿದ್ದಾರೆ. ಈ ಮೂಲಕ 2027ರ ಏಕದಿನ ವಿಶ್ವಕಪ್ ಆಡುವ ಇರಾದೆಯಲ್ಲಿದ್ದಾರೆ ರೋಹಿತ್ ಶರ್ಮಾ. ಇನ್ನು ನಿವೃತ್ತಿ ಪ್ರಶ್ನೆಗೆ ವಿರಾಟ್ ಕೊಹ್ಲಿ ಕಡೆಯಿಂದಲೂ ಸ್ಪಷ್ಟ ಉತ್ತರ ದೊರಕಿದೆ. ನಾನು ಸಾಧ್ಯವಾದಷ್ಟು ಕ್ರಿಕೆಟ್ ಆಡಲು ಬಯಸುತ್ತೇನೆ. ನನ್ನ ಆಟವನ್ನು ಮತ್ತಷ್ಟು ಸುಧಾರಿಸಲು ಮತ್ತು ಸಾಧ್ಯವಾದಷ್ಟು ಮುಂದಕ್ಕೆ ಹೆಜ್ಜೆಯಿಡಲು ಪ್ರಯತ್ನಿಸುತ್ತೇನೆ. ಅಲ್ಲದೆ ಟೀಮ್ ಇಂಡಿಯಾವನ್ನು ಉತ್ತಮ ಸ್ಥಾನದಲ್ಲಿರಿಸಿದ ಬಳಿಕವಷ್ಟೇ ನಿವೃತ್ತರಾಗುವುದಾಗಿ ಕೊಹ್ಲಿ ಹೇಳಿದ್ದಾರೆ. ರವೀಂದ್ರ ಜಡೇಜಾ ಕೂಡ ಸದ್ಯಕ್ಕಂತು ನಿವೃತ್ತನಾಗುತ್ತಿಲ್ಲ ಎಂದು ತಿಳಿಸಿದ್ದಾರೆ. ಹೀಗಾಗಿ ನಾನು ಏಕದಿನ ಕ್ರಿಕೆಟ್‌ಗೆ ವಿದಾಯ ಹೇಳಲಿದ್ದೇನೆ ಎಂಬ ವದಂತಿಗಳನ್ನು ಯಾರು ಸಹ ಹಬ್ಬಿಸಬೇಡಿ ಎಂದು ಮನವಿ ಮಾಡಿದ್ದಾರೆ. ಈ ಮೂಲಕ ಜಡೇಜಾ ಕೂಡ ಏಕದಿನ ಕ್ರಿಕೆಟ್‌ನಲ್ಲಿ ಮುಂದುವರೆಯುವುದನ್ನು ಖಚಿತಪಡಿಸಿದ್ದಾರೆ.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**